ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 15
ಏಪ್ರಿಲ್ 14, 2013

ಪುಟ 16 ರೂ. 10/-





ಬಿಜೆಪಿ ಉತ್ತರಾಧಿಕಾರಿಯಾಗಲು ಕಾಂಗ್ರೆಸ್ ಹಪಾಹಪಿ



ಆರ್ಥಿಕ ಪುನಶ್ಚೇತನ : ಓಹ್ ! ಪ್ರಧಾನಿಗಳೇ !! ಸಾರ್ವಜನಿಕ ಹೂಡಿಕೆಯೇ ಪರಿಹಾರ

BLDE UNIVERSITY

JSS University

Manipal
INSPIRED BY LIFE

ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆ: ಬಹುಸಂಖ್ಯಾತರಿಗೆ ಶಿಕ್ಷಣದ ವಂಚನೆ



ಕಾಂಗ್ರೆಸ್‌ಗೆ ಬಿಜೆಪಿ ಪರ್ಯಾಯವಾಗದು

ವಿಧಾನ ಸಭಾ ಚುನಾವಣೆಗಳು ಮತ್ತು ದುಡಿಯುವ ಜನತೆ



ಶ್ರೀಲಂಕಾ ತಮಿಳರ ಪ್ರಶ್ನೆ: ಪ್ರತ್ಯೇಕ 'ಈಳಂ' ಸಮಸ್ಯೆಗೆ ಪರಿಹಾರವಲ್ಲ



ಈಕ್ವೆಡಾರ್‌ನಲ್ಲಿ ಎಡಪಂಥೀಯರ ಹ್ಯಾಟ್ರಿಕ್

ಖಾಸಗಿ ವಿ.ವಿ. ಗಳ ಸ್ಥಾಪನೆ : ಬಹುಸಂಖ್ಯಾತರಿಗೆ ಉನ್ನತ ಶಿಕ್ಷಣದ ವಂಚನೆ

ಅಕ್ಷಾರವೆಂದಾರೆ ಅಕ್ಷಾರವಲ್ಲ, ಅರಿವೀನ ಗೂಡು.... ಎಂಬ ಹಾಡೊಂದಿದೆ. ಅದು ಶಿಕ್ಷಣದ ಮಹತ್ವವನ್ನು ಸಾರುವ ಒಂದು ಮಾತು. ಆದರೆ ನಮ್ಮನ್ನಾಳುತ್ತಿರುವ ಸರ್ಕಾರಗಳಿಗೆ ಶಿಕ್ಷಣದ ಹೊಣೆ ಹೆಗಲಿಗೇರಿರುವ ಶನಿ. ಮೈಮೇಲಿಂದ ಇಳಿಸಿಕೊಳ್ಳಬೇಕಾದ ಪೀಡೆಯಾಗಿದೆ. ಆ ಕೆಲಸಕ್ಕೆ ಈಗವರು ಮುಂದಾಗಿದ್ದಾರೆ. ಈ ವಿಷಯದಲ್ಲಿ ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರದೊಂದಿಗೆ ರಾಜ್ಯ ಬಿಜೆಪಿ ಸರ್ಕಾರ ಪೈಪೋಟಿಗೆ ಬಿದ್ದಿದೆ. ಇದು ಒಂದು ರೀತಿಯಲ್ಲಿ ಕಳ್ಳಕಳ್ಳರು ಸಂತೆಗೆ ಹೋದಂತೆ. ಈ ನೀತಿಯ ಅಪಾಯಗಳನ್ನು ಕುರಿತು ವಿವರಿಸಿದ್ದಾರೆ SFI ಸಂಘಟನೆ ರಾಜ್ಯ ಅಧ್ಯಕ್ಷರಾದ

- ಅನಂತನಾಯ್ಕ್ .ಎನ್

ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಬಲಪಡಿಸುವ ಬದಲಾಗಿ, ರಾಜ್ಯ ಬಿಜೆಪಿ ಸರ್ಕಾರ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅನುಮತಿ ನೀಡಿದೆ. 2009ರಲ್ಲಿ ಅಜೀಂ ಪ್ರೇಮ್‌ಜಿ ಮತ್ತು ರಿಲಯನ್ಸ್ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡಿದ್ದ ಸರ್ಕಾರ ಇತ್ತೀಚೆಗೆ ನಡೆದ ವಿಧಾನಸಭೆ ಬಜೆಟ್ ಅಧಿವೇಶನದಲ್ಲಿ ಮತ್ತೆ 20 ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಖಾಸಗಿ ವಿವಿಗಳನ್ನಾಗಿಸಿ ಮಸೂದೆ ಅನುಮೋದಿಸಿ ರಾಜ್ಯಪಾಲರ ಅಂಗೀಕಾರಕ್ಕೆ ಕಳುಹಿಸಿಕೊಟ್ಟಿದೆ. ಈ ವಿವಿಗಳಲ್ಲಿ ರಾಜ್ಯಪಾಲರು ಈಗಾಗಲೇ 8 ವಿವಿಗಳಿಗೆ ಅಂಗೀಕಾರದ ಮುದ್ರೆ ಒತ್ತಿದ್ದಾರೆ.

ಖಾಸಗಿ ವಿ.ವಿ.ಗಳ ಪಟ್ಟಿ

1. ಅಮೃತಸಿಂಚನ ಅಧ್ಯಾತ್ಮ ವಿವಿ
2. ದೇವರಾಜ ಅರಸು ವಿವಿ
3. ಪಿ.ಇ.ಎಸ್. ವಿವಿ
4. ರೇವಾ ವಿವಿ
5. ದಯಾನಂದ ಸಾಗರ ವಿವಿ
6. ಅರ್ಕ ಖಾಸಗಿ ವಿವಿ
7. ಕೆಎಲ್‌ಇ ತಾಂತ್ರಿಕ ವಿವಿ
8. ವೆಲ್ಲೂರು ತಾಂತ್ರಿಕ ವಿವಿ
9. ಅದಿಚುಂಚುನಗಿರಿ ವಿವಿ
10. ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿವಿ
11. ಶರಣ ಬಸವ ವಿವಿ
12. ರೈ ತಾಂತ್ರಿಕ ವಿವಿ
13. ಸಿಎಂಆರ್ ವಿವಿ
14. ನ್ಯೂ ಬಾಲ್ಡ್‌ವಿನ್ ವಿವಿ
15. ಪ್ರೆಸಿಡೆನ್ಸಿ ವಿವಿ
16. ಮಣಿಪಾಲ್ ವಿವಿ
17. ಮೈಸೂರು 'ಜೆಎಸ್‌ಎಸ್' ವಿವಿ
18. ಮಂಗಳೂರಿನ 'ಶ್ರೀನಿವಾಸ' ವಿವಿ
19. ಬೆಂಗಳೂರಿನ 'ಗಾರ್ಡನ್ ಸಿಟಿ' ವಿವಿ
20. ವೈಟ್‌ಫೀಲ್ಡ್‌ನ 'ವೈದೇಹಿ' ವಿವಿ

ಸರ್ಕಾರ ಖಾಸಗಿ ವಿ.ವಿ. ಗಳನ್ನಾಗಿಸಿರುವ ಬಹುತೇಕ ಸ್ವಾಯತ್ತ ಖಾಸಗಿ ಶಿಕ್ಷಣ ಸಂಸ್ಥೆಗಳು ಕನಿಷ್ಠ ಮೂಲಸೌಲಭ್ಯಗಳನ್ನು ಹೊಂದಿಲ್ಲದರಿಂದ ವಿಶ್ವವಿದ್ಯಾಲಯ ಧನಸಹಾಯ ಆಯೋಗ(ಯುಜಿಸಿ)ವು ಅವುಗಳನ್ನು ಕಪ್ಪುಪಟ್ಟಿಯಲ್ಲಿರಿಸಿದೆ. ಆದರೆ, ರಾಜ್ಯ ಸರ್ಕಾರ ಅವುಗಳನ್ನು ವಿಶ್ವವಿದ್ಯಾಲಯಗಳನ್ನಾಗಿಸಲು ಹೊರಟಿರುವುದು ದೊಡ್ಡ ದುರಂತ. ಜಗತ್ತಿನ ಉತ್ತಮ ಗುಣಮಟ್ಟದ 200 ವಿವಿಗಳ ಪಟ್ಟಿಯಲ್ಲಿ ಭಾರತದ ಯಾವುದೇ ವಿವಿಗಳು ಇಲ್ಲ. ಇದು ನಮ್ಮ ವಿವಿಗಳ ಹೀನಾಯ ಸ್ಥಿತಿಗೆ ಹಿಡಿದ ಕನ್ನಡಿ. ನೂರಾರು ವರ್ಷಗಳ ಇತಿಹಾಸವಿರುವ ಹೆಸರಾಂತ (ಬೆಂಗಳೂರು, ಮೈಸೂರು ಇತ್ಯಾದಿ) ಸರ್ಕಾರಿ ವಿಶ್ವವಿದ್ಯಾಲಯಗಳೇ ಅಗತ್ಯ ಮೂಲಸೌಲಭ್ಯಗಳನ್ನು ಹೊಂದಿಲ್ಲ ಎನ್ನುವ ಚರ್ಚೆ ಇರುವಾಗಲೇ ಸಣ್ಣಪುಟ್ಟ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಖಾಸಗಿ ವಿವಿಗಳನ್ನಾಗಿಸಲು ಹೊರಟಿರುವ



ಸರ್ಕಾರಕ್ಕೆ ವಿವಿಗಳ ಮೂಲಪರಿಕಲ್ಪನೆಯ ಅರಿವಿಲ್ಲದಿರುವುದು ಸಾಬೀತಾಗಿದೆ.

ಸಮಾಜದ ಸಮಗ್ರ ಪ್ರಗತಿಗಾಗಿ ವಿಶ್ವವಿದ್ಯಾಲಯಗಳು ಅಧ್ಯಯನ, ಸಂಶೋಧನೆಗಳ ಮೂಲಕ ಅಭಿವೃದ್ಧಿಯ ದಿಕ್ಸೂಚಿಗಳಾಗಬೇಕು. ಸಂಶೋಧನೆ ಅಧ್ಯಯನಕ್ಕಾಗಿ ಅಗತ್ಯ ಸಹಕಾರ, ಮಾರ್ಗದರ್ಶನ ಸೌಲಭ್ಯ ಕಲ್ಪಿಸಬೇಕಿದೆ. ಬೌದ್ಧಿಕ ಸಂಪತ್ತಿನ ಉತ್ಪಾದನಾ ಕೇಂದ್ರಗಳಾಗಿರುವ ವಿವಿಗಳನ್ನು ರಾಜ್ಯ ಸರ್ಕಾರ ಬಂಡವಾಳಶಾಹಿ ಕಂಪನಿಗಳಿಗೆ ವಹಿಸಲು ಹೊರಟಿರುವುದು ಉನ್ನತ ಶಿಕ್ಷಣ ಕ್ಷೇತ್ರಕ್ಕೆ ಮಾಡುತ್ತಿರುವ ವಂಚನೆ. 'ಬಂಡವಾಳ ಲಾಭವಿಲ್ಲದೇ ಕೆಲಸ ಮಾಡಲಾರದು' ಎಂಬುದು ಈಗಾಗಲೇ ತಿಳಿದಿರುವ ಸಂಗತಿ. ಇಂದಿಗೂ ಬೆಂಗಳೂರು ವಿವಿಯಲ್ಲಿ ಎಂ.ಬಿ.ಎ ಓದಲು 5ಸಾವಿರ ರೂ ಶುಲ್ಕವಿದ್ದರೆ. ಅಲಯನ್ಸ್ ಖಾಸಗಿ ವಿವಿಯಲ್ಲಿ ರೂ 12ಲಕ್ಷಕ್ಕೂ ಹೆಚ್ಚು ಶುಲ್ಕ ವಸೂಲಿ ನಡೆಸಲಾಗುತ್ತಿದೆ. ಎಲ್‌ಕೆಜಿ-ಯುಕೆಜಿ ಹೇಳಿಕೊಡುವ ಖಾಸಗಿ ಶಿಕ್ಷಣ ಸಂಸ್ಥೆಗಳು ಲಕ್ಷಾಂತರ ರೂಪಾಯಿ ವಸೂಲಿಯನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ಇನ್ನು ಬೌದ್ಧಿಕ ಸಂಪತ್ತಿನ ಕೇಂದ್ರಗಳಾದ ವಿವಿಗಳನ್ನು ಖಾಸಗೀಕರಿಸಿದರೆ ಎಂಥ ಸಂಶೋಧನೆ-ಅಧ್ಯಯನ ನಡೆಯಬಹುದು? ಯಾರಿಗೆ ಪ್ರವೇಶ ಸಿಗಬಹುದು? ಇವುಗಳನ್ನು ನಿಯಂತ್ರಿಸಲು ಸರ್ಕಾರದ ಬಳಿ ಯಾವ ಶಾಸನಗಳಿವೆ? ಎಂಬುದು ಚರ್ಚೆಯಾಗಬೇಕಿದೆ.

2002ರಲ್ಲಿ ಛತ್ತೀಸ್‌ಗಡದ ಬಿ.ಜೆ.ಪಿ. ಸರ್ಕಾರದ ಅಧಿಕಾರಾವಧಿಯಲ್ಲಿ ಪ್ರಾರಂಭಿಸಲಾಗಿದ್ದ 24 ಕ್ಕೂ ಹೆಚ್ಚು ಖಾಸಗಿ ವಿವಿಗಳು ಕಳಪೆ ಗುಣಮಟ್ಟದವು, ಕಾನೂನುಬಾಹಿರವೆಂದು ಸುಪ್ರೀಂಕೋರ್ಟ್ ಘೋಷಿಸಿ, ಅವುಗಳನ್ನು ರದ್ದುಪಡಿಸಿದ್ದು ನಮ್ಮ ರಾಜ್ಯ ಸರ್ಕಾರಕ್ಕೆ ತಿಳಿಯಲೇ ಇಲ್ಲ. ಗಲ್ಲಿಗಲ್ಲಿಗಳಲ್ಲಿ ತಲೆ ಎತ್ತಿ ಕೇವಲ ಹಣ ಮಾಡುವಲ್ಲಿ ನಿರತವಾಗಿರುವ ಸುಲಿಗೆಕೋರ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ಅಧಿಕಾರವಿರುವ "ಸಾಮಾಜಿಕ ನಿಯಂತ್ರಣ ಶಾಸನ" ತರಲು ಸರ್ಕಾರ ವಿಫಲವಾಗಿದೆ. ರಾಜ್ಯ ಸರ್ಕಾರ ಮತ್ತೆ 20 ಖಾಸಗಿ ವಿವಿಗಳ ಸ್ಥಾಪಿಸುವ ಮೂಲಕ ಸರ್ಕಾರಿ ಮೂಲ ವಿವಿಗಳನ್ನು ನಿರ್ಲಿಪ್ತಗೊಳಿಸಲು ಹೊರಟಿದೆ. ಸರ್ಕಾರದ ಹಿಡಿತವಿಲ್ಲದ 'ಖಾಸಗಿ ಸಾಮ್ರಾಜ್ಯಗಳು ಸ್ಥಾಪನೆ'ಯಾಗಲಿವೆ. ಖಾಸಗೀಕರಣದ ಮೂಲಕ ಶಿಕ್ಷಣವನ್ನು ಮಾರಾಟದ ಸರಕನ್ನಾಗಿಸಲು ಹೊರಟಿದೆ.

20 ಖಾಸಗಿ ವಿವಿ ಮಸೂದೆಗಳಲ್ಲಿರುವ ಅಪಾಯಕಾರಿ ಅಂಶಗಳು ಹೀಗಿವೆ.

ಸೆಕ್ಷನ್ 13 (1)- ರಾಜ್ಯಪಾಲರು ಕುಲಾಧಿಪತಿಗಳಲ್ಲ, ಸಂದರ್ಶಕರಷ್ಟೇ! : ಸಂವಿಧಾನಬದ್ಧವಾಗಿ ಪಾರಂಪಾರಿಕ ಸರ್ಕಾರಿ ವಿವಿಗಳಿಗೆ ರಾಜ್ಯಪಾಲರು ಕುಲಾಧಿಪತಿಗಳಾಗಿರುತ್ತಾರೆ. ಇವರು ಆಡಳಿತ, ಅಭಿವೃದ್ಧಿ, ನಿರ್ವಹಣೆ, ಇನ್ನಿತರ ಎಲ್ಲದಕ್ಕೂ ಜವಾಬ್ದಾರರಾಗಿರುತ್ತಾರೆ. ಆದರೆ ಈ ಖಾಸಗಿ ವಿವಿಗಳಿಗೆ ರಾಜ್ಯಪಾಲರು ಕೇವಲ ಸಂದರ್ಶಕರಷ್ಟೇ. ಖಾಸಗಿ ವಿವಿಯ ಘಟಿಕೋತ್ಸವದಲ್ಲಿ ಭಾಗವಹಿಸಬಹುದು. ಅಂತೆಯೇ ಸಹ ಸಂದರ್ಶಕರಾಗಿರುವ ಉನ್ನತ ಶಿಕ್ಷಣ ಸಚಿವರೂ ಕೂಡಾ. ಸರ್ಕಾರದ ಹಿಡಿತದಿಂದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ದೂರಮಾಡಲಾಗಿದೆ, ಇದು ಅತ್ಯಂತ ಅಪಾಯಕಾರಿ.

ಸೆಕ್ಷನ್ 15(1) ಸಂಸ್ಥೆಯ ಟ್ರಸ್ಟಿಯೇ ಜೀವನಪರ್ಯಂತ ಕುಲಾಧಿಪತಿ! : ಕುಲಾಧಿಪತಿಗಳ ಸ್ಥಾನದಿಂದ ರಾಜ್ಯಪಾಲರನ್ನು ದೂರ ಇಟ್ಟಿರುವ ಈ ಮಸೂದೆ ಪ್ರಾಯೋಜಕ ಕಂಪೆನಿ/ಸಂಸ್ಥೆಯ ನ್ಯಾಸಧಾರಿ (ಟ್ರಸ್ಟಿ)ಯೇ ಕುಲಾಧಿಪತಿ ಎಂದಿದೆ. ಇವರು ಜೀವನ ಪರ್ಯಂತ ಅಧಿಕಾರದಲ್ಲಿರಬಹುದು. ಮುಂದಿನ ಕುಲಾಧಿಪತಿಗೆ ಯಾವುದೇ ವಿದ್ಯಾರ್ಹತೆ, ಅನುಭವದ ಮಾನದಂಡವಿಲ್ಲ. ಹಣವಿದೆ ಎಂಬ ಏಕೈಕ ಕಾರಣಕ್ಕಾಗಿ ಸಮಾಜಘಾತುಕ ಶಕ್ತಿಗಳು (ಗೂಂಡಾಗಳು, ಭಯೋತ್ಪಾದಕರು, ವಂಚಕರು, ಭ್ರಷ್ಟರು ಇತ್ಯಾದಿ) ಸಂಸ್ಥೆಯಲ್ಲಿದ್ದು ಕುಲಾಧಿಪತಿಗಳಾಗಬಹುದು.

ಸೆಕ್ಷನ್ -6 ರಾಜ್ಯವ್ಯಾಪಿ ಕಾಲೇಜು ಪ್ರಾರಂಭಿಸಬಹುದು! : ಈ ಮಸೂದೆಯ ಪ್ರಕಾರ ಖಾಸಗಿ ವಿವಿಗಳು ರಾಜ್ಯವ್ಯಾಪಿ ಘಟಕ ಕಾಲೇಜುಗಳು, ಹೆಚ್ಚುವರಿ, ಕ್ಯಾಂಪಸ್, ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಬಹುದು. ಇದು ವ್ಯಾಪಕ ವ್ಯಾಪಾರೀಕರಣಕ್ಕೆ ಅವಕಾಶ ಕಲ್ಪಿಸುತ್ತದೆ. ಸರ್ಕಾರಿ/ಅನುದಾನಿತ, ಚಿಕ್ಕ, ಚಿಕ್ಕ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ಮುಚ್ಚಿಹಾಕುವ ತಂತ್ರ ಇದಾಗಿದೆ. ಈಗಾಗಲೇ ರಾಜ್ಯವ್ಯಾಪಿ ತಲೆ ಎತ್ತಿರುವ ವಿವಿಧ ವಿವಿಗಳ ದೂರಶಿಕ್ಷಣ ಕೇಂದ್ರಗಳು ಅಕ್ರಮ ಚಟುವಟಿಕೆಗಳ ತಾಣವಾಗಿರುವುದು ಸರ್ಕಾರಕ್ಕೆ ಕಾಣಿಸುತ್ತಿಲ್ಲ. ಗುಣಮಟ್ಟದ ಕಲಿಕೆಯ ಬದಲಾಗಿ ಕೇವಲ

ಪುಟ 12 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕಾಂಗ್ರೆಸ್ ಬಿಜೆಪಿಗೆ ಪರ್ಯಾಯವಾಗದು

ರಾಜ್ಯದಲ್ಲಿ ಬಿಜೆಪಿಯ ವೈಫಲ್ಯ ತನಗೆ ವರದಾನವಾಗಲಿದೆ ಎಂದು ಕಾಂಗ್ರೆಸ್ ಹಗಲು ಕನಸು ಕಾಣುತ್ತಿದೆ. ಇತ್ತೀಚೆಗೆ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಯ ಐದು ವರ್ಷಗಳ ದುರಾಡಳಿತ ಲಾಭ ಅನಾಯಾಸವಾಗಿ ತನಗೆ ಹರಿದು ಬಂದಂತೆ ವಿಧಾನಸಭಾ ಚುನಾವಣೆಯಲ್ಲಿಯೂ ಆಗಲಿದೆ ಎಂದು ಕಾಂಗ್ರೆಸ್ ಲೆಕ್ಕ ಹಾಕುತ್ತಿದೆ. ಇದರ ಸುಳಿವು ಹಿಡಿದುಕೊಂಡು ಬಂಡವಾಳ ಹೂಡಲು ಸಿದ್ಧರಾಗಿರುವ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ವಿಧಾನ ಸಭಾ ಸದಸ್ಯರ ಸ್ಥಾನಗಳಿಗಿಂತ ಹಲವು ಪಟ್ಟು ಹೆಚ್ಚಾಗಿದೆ.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ 4492 ವಾರ್ಡುಗಳಲ್ಲಿ ಸ್ಪರ್ಧೆಗಿಳಿದಿದ್ದ ಕಾಂಗ್ರೆಸ್ ಗೆದ್ದದ್ದು 1960 ಸ್ಥಾನಗಳನ್ನು ಮಾತ್ರ, ಇದೊಂದು ಭಾರೀ ದೊಡ್ಡ ಸಾಧನೆ ಎಂದು ಹೇಳಲಾಗದು. ಅಷ್ಟು ಮಾತ್ರವಲ್ಲ. ಈ ಫಲಿತಾಂಶ ವಿಧಾನಸಭಾ ಚುನಾವಣೆಯ ಫಲಿತಾಂಶದ ದಿಕ್ಸೂಚಿ ಆಗಲಿದೆ ಎಂದೂ ಹೇಳಲಾಗದು.

ಎಲ್ಲಕ್ಕೂ ಮುಖ್ಯವಾಗಿ, ಬಿಜೆಪಿಯ ದುರಾಡಳಿತ, ಭ್ರಷ್ಟಾಚಾರ, ಅಧಿಕಾರಕ್ಕಾಗಿ ಅದು ನಡೆಸಿದ ಕಿತ್ತಾಟದಿಂದ ಬೇಸತ್ತ ಜನ ಕಾಂಗ್ರೆಸನ್ನು ಅಷ್ಟು ಸುಲಭವಾಗಿ ಅಪ್ಪಿಕೊಳ್ಳುತ್ತಾರೆ ಎಂದು ಹೇಳಲಾಗದು. ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಆಯ್ಕೆಯೇ ಇಲ್ಲ. ಕಾಂಗ್ರೆಸ್ ಬಿಜೆಪಿಗಿಂತ ಹೇಗೆ ಭಿನ್ನವಾಗಿದೆ.? ಭ್ರಷ್ಟಾಚಾರದ ವಿಷಯದಲ್ಲಿ ಬಿಜೆಪಿಯ ಭ್ರಷ್ಟಾಚಾರ ಬ್ರಹ್ಮಾಂಡ ಸ್ವರೂಪದ್ದಾಗಿದ್ದರೆ ಕಾಂಗ್ರೆಸ್ ಭ್ರಷ್ಟಾಚಾರ ವಿರಾಟ ಸ್ವರೂಪದ್ದು. ಭ್ರಷ್ಟಾಚಾರವನ್ನು ಹುಟ್ಟು ಹಾಕಿದ್ದೇ ಕಾಂಗ್ರೆಸ್. ಅದು ಭ್ರಷ್ಟಾಚಾರದ ಗಂಗೋತ್ರಿ!

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಭ್ರಷ್ಟಾಚಾರ ಪ್ರಕರಣಗಳಿಂದ ಸರ್ಕಾರದ ಬೊಕ್ಕಸಕ್ಕೆ ಕೋಟಿಗಟ್ಟಲೆ ರೂ. ಹಾನಿಯಾಗಿದೆ. ದೊಡ್ಡ ದೊಡ್ಡ ಕಂಪೆನಿಗಳಿಗೆ ಭಾರೀ ಲಾಭ ಆಗಿದೆ. ಆ ಕಂಪೆನಿಗಳಿಂದ 'ಕಿಕ್‌ಬ್ಯಾಕ್' ಪಡೆದ ಕೇಂದ್ರದ ಮಂತ್ರಿಗಳು, ಸಂಸತ್ ಸದಸ್ಯರು, ಹಿರಿಯ ಅಧಿಕಾರಿಗಳು ಜೈಲು ಕಂಡು ಬಂದಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಗಣಿ ಹಗರಣ, ಡಿನೋಟಿಫಿಕೇಷನ್ ಹಗರಣಗಳಲ್ಲಿ ಸಿಕ್ಕಿಹಾಕಿಕೊಂಡು ಬಿಜೆಪಿ ಮುಖ್ಯ ಮಂತ್ರಿ, ಇತರ ಮಂತ್ರಿಗಳು ಜೈಲಿಗೆ ಹೋದಾಗ ಕಾಂಗ್ರೆಸ್ ಬಾಯಿ ಮುಚ್ಚಿಕೊಂಡು ಸುಮ್ಮನಿತ್ತು. ಬಿಜೆಪಿಯ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಲು ಕಾಂಗ್ರೆಸ್‌ಗೆ ನೈತಿಕ ಬಲವೇ ಇರಲಿಲ್ಲ. ಆದ್ದರಿಂದ ಭ್ರಷ್ಟ ಬಿಜೆಪಿಗೆ ಭ್ರಷ್ಟ ಕಾಂಗ್ರೆಸ್ ಪರ್ಯಾಯವಾಗಲಾರದು. ರಾಜ್ಯದ ಮತದಾರರು ಈ ಅಂಶವನ್ನು ಪರಿಗಣಿಸದೆ ಮತದಾನ ಮಾಡಲಾರರು.


ಆರ್ಥಿಕ ದೋರಣೆಗಳ ವಿಷಯದಲ್ಲಿಯೂ ಬಿಜೆಪಿಗೆ ಕಾಂಗ್ರೆಸ್ ಪರ್ಯಾಯವಾಗಲಾರದು. ದೇಶದಲ್ಲಿ ಇಂದು ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆಯ ಕುಸಿತಕ್ಕೆ, ಉದ್ಯೋಗಗಳ ಸೃಷ್ಟಿ ಆಗದಿರುವುದಕ್ಕೆ, ಬೆಲೆಯೇರಿಕೆ ಹೆಚ್ಚುತ್ತಿರುವುದಕ್ಕೆ, ಆಹಾರ, ಶಿಕ್ಷಣ, ಆರೋಗ್ಯ, ವಸತಿ ಮೊದಲಾದ ಮೂಲಭೂತ ಆವಶ್ಯಕತೆಗಳಿಗೆ ಸರ್ಕಾರದ ನೆರವು (ಸಬ್ಸಿಡಿ) ಕಡಿತಗೊಳ್ಳುತ್ತಿರುವುದಕ್ಕೆ, ದೇಶದ ಆಸ್ತಿಯೇ ಆಗಿರುವ ಸಾರ್ವಜನಿಕ ರಂಗ ಕ್ಷೀಣಿಸುವಂತೆ ಮಾಡಿ ಖಾಸಗಿ ರಂಗಕ್ಕೆ, ಅದರಲ್ಲಿಯೂ ಬಹುರಾಷ್ಟ್ರೀಯ ಕಂಪನಿಗಳು ಲೀಲಾಜಾಲವಾಗಿ ಬೆಳೆಯುವಂತೆ ಮಾಡಲು ಪ್ರೋತ್ಸಾಹ ನೀಡುವುದಕ್ಕೆ 1990 ದಶಕದಿಂದ ಕೇಂದ್ರ ಕಾಂಗ್ರೆಸ್ ಸರ್ಕಾರ ಜಾರಿಗೆ ತರುತ್ತಿರುವ ಉದಾರೀಕರಣ, ಖಾಸಗೀಕರಣ ನೀತಿಗಳೇ ಕಾರಣವಾಗಿವೆ. ಈ ನೀತಿಗಳಿಗೆ ಬಿಜೆಪಿಯ ಮೂಲಭೂತ ವಿರೋಧವೇನೂ ಇಲ್ಲ. ಹಿಂದೆ ವಾಜಪೇಯಿ ಸರ್ಕಾರವೂ ಇದೇ ನೀತಿಗಳನ್ನು ರಭಸದಿಂದ ಜಾರಿಗೆ ತಂದು ಅಮೇರಿಕದ ಮೆಚ್ಚುಗೆಗೆ ಪಾತ್ರವಾಗಿತ್ತು. ಇಂದು ಗುಜರಾತ್‌ನಲ್ಲಿ ಇದೇ ನೀತಿಗಳನ್ನು ಮೋದಿ ಸರ್ಕಾರ ಜಾರಿಗೆ ತರುತ್ತಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರವೂ ಅದೇ ನೀತಿಗಳನ್ನು ಜಾರಿಗೆ ತರತೊಡಗಿತ್ತು.

ರೈತರ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿ ಕಾರ್ಪೋರೇಟ್ ಕಂಪನಿಗಳಿಗೆ ದಾನ ಮಾಡುವ ವಿಷಯದಲ್ಲಿ ಬಿಜೆಪಿಗೂ ಕಾಂಗ್ರೆಸಿಗೂ ನಡುವೆ ಯಾವ ಮತ ಭೇದವಿಲ್ಲ. ಕಾರ್ಮಿಕ ಕಾಯ್ದೆಗಳನ್ನು ಬಂಡವಾಳಗಾರರ ಅನುಕೂಲಕ್ಕಾಗಿ ತಿದ್ದುಪಡಿ ಮಾಡುವ ವಿಷಯದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ದೋರಣೆಯಲ್ಲಿ ವ್ಯತ್ಯಾಸವಿಲ್ಲ. ಎ.ಪಿ.ಎಂ.ಸಿ. ಕಾಯ್ದೆ ತಿದ್ದುಪಡಿ ಮಾಡಿ ಕೃಷಿ ಮಾರುಕಟ್ಟೆಯನ್ನು ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸುವ ವಿಷಯದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಸಂಪೂರ್ಣ ಸಹಮತ ಇದೆ. ಹಾಗಿರುವಾಗ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಆಯ್ಕೆ ಎಲ್ಲಿದೆ?

ಬಿಜೆಪಿಯ 5 ವರ್ಷಗಳ ದುರಾಡಳಿತದ ಅವಧಿಯಲ್ಲಿ ಆಳುವ ಪಕ್ಷದ ವೈಫಲ್ಯಗಳನ್ನು ಬಯಲಿಗೆಳೆದು ಅದರ ವಿರುದ್ಧ ಹೋರಾಟ ಮಾಡದ ಕಾಂಗ್ರೆಸ್ ಪಕ್ಷದಿಂದ ರಾಜ್ಯದ ಜನತೆ ಏನನ್ನು ನಿರೀಕ್ಷಿಸಲು ಸಾಧ್ಯ? ಕಳೆದ 5 ವರ್ಷಗಳ ಕಾಲ ಜವಾಬ್ದಾರಿಯುತ ವಿಪಕ್ಷವಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲವಾಗಿರುವ ಕಾಂಗ್ರೆಸಿಗೆ ಮತದಾರರು ಏಕೆ ಮತ ನೀಡಬೇಕು?

ಚಂಪಾರವರ ಹೊಸ ಪಯಣವೂ ಮತ್ತು ಪ್ರಾದೇಶಿಕತೆಯ ಹೊದಿಕೆಯೂ

ಚುನಾವಣಾ ಪ್ರಕ್ರಿಯೆ ಅಧಿಕೃತವಾಗಿ ಘೋಷಣೆಯಾಗುವ ಹೊಸ್ತಿಲಲ್ಲಿ ವಿವಿದ ರಾಜಕೀಯ ಪಕ್ಷಗಳ ಕಸರತ್ತುಗಳು ತೀವ್ರಗೊಳ್ಳುತ್ತಿವೆ. ಬಿಜೆಪಿ ಹೊಸ ಅಧ್ಯಕ್ಷನನ್ನು ಆಯ್ಕೆ ಮಾಡಿ ರಾಜಕೀಯ ಸಮಾವೇಶ ನಡೆಸುತ್ತಾ ತಪ್ಪೊಪ್ಪಿಕೊಳ್ಳುವ ಪ್ರಹಸನ ನಡೆಸಿದ್ದರೆ, ಕಾಂಗ್ರೆಸ್ ಅಧಿಕಾರಕ್ಕೇರುವ ಕನವರಿಕೆಯಲ್ಲಿ ಅಭ್ಯರ್ಥಿಗಳ ಆಯ್ಕೆಗಾಗಿ ಪಟ್ಟಿ ಹಿಡಿದು ದೆಹಲಿ ದಂಡ ಯಾತ್ರೆಯಲ್ಲಿ ತಿಣುಕುತ್ತಿದೆ. ಉಳಿದಂತೆ ಬಹುತೇಕ ಪಕ್ಷಗಳು ಗೆದ್ದವರ ನೆಂಟಸ್ತಿಕೆಯ ನಿರೀಕ್ಷೆಯಲ್ಲಿ ಜಾತಕ ಪಕ್ಷಿಗಳಂತೆ ಕಾಯುತ್ತಿವೆ. ಈ ಚುನಾವಣೆಯ ಫಲಿತಾಂಶದಲ್ಲಿಯೇ ಇವುಗಳ ನಾಯಕರ ವರ್ತಮಾನ ಮತ್ತು ಭವಿಷ್ಯವೂ ಅಡಗಿರುವುದರಿಂದ ಅಸ್ತಿತ್ವದ ಉಳಿಗಾಗಿ 'ಓರಾಡ'ಬೇಕಾಗುತ್ತದೆ. ಅವರ ಗುಪ್ತ ಅಜೆಂಡಾ ಏನೇ ಇರಲಿ ಸಾರ್ವಜನಿಕರೆದುರು ಲೋಕೋದ್ಧಾರಕ ಫೋಜು ಕೊಡದಿದ್ದರೆ ಹೇಗೆ! ರಾಷ್ಟ್ರೀಯ ಪಕ್ಷಗಳಲ್ಲೇ ತೇಲು(ಗು)ತ್ತಿದ್ದ ಯಡಿಯೂರಪ್ಪ ಮತ್ತು ರೆಡ್ಡಿಗಳ ಪರಿವಾರ ಈಗ ಜನರನ್ನು ವಂಚಿಸಲು ಪ್ರಾದೇಶಿಕತೆಯ ಹೊದಿಕೆ ನೇಯುತ್ತಿರುವುದು ಒಂದು ವಿಶೇಷ.



ಸುರಕ್ಷಿತ ತಾಣ ಹುಡುಕಾಟದಲ್ಲಿ

ಈ ವಾರದ ಇನ್ನೂ ಒಂದು ವಿಶೇಷವೆಂದರೆ ಸೋಮಣ್ಣ, ಕತ್ತಿ, ನಿರಾಣಿಯಂತಹ ಯಡಿಯೂರಪ್ಪನವರ ಹಲವಾರು ಬಲಗೈ ಬಂಟರು ಅವರ ಕಿರು ಬೆರಳ ಹತ್ತಿರವೂ ಸುಳಿಯದೇ ಸುರಕ್ಷಿತ ತಾಣಗಳನ್ನು ಹುಡುಕುತ್ತಲೇ ಹುಟ್ಟು ಹಾಕುತ್ತಾ ನಿಂತ ನೀರಲ್ಲೇ ನಿಂತೇ ಇರುವುದು! ಇಂತಹ ವಿಕಟ ಸನ್ನಿವೇಶದಲ್ಲಿ ಅವರ ಕೈ ಹಿಡಿಯುತ್ತಿರುವವರೆಂದರೆ ಸಾರಸ್ವತ ಲೋಕದ ಹಿರಿಯ ಬಂಡಾಯ ಕವಿ ಪ್ರೊಫೆಸರ್. ಚಂದ್ರಶೇಖರ್ ಪಾಟೀಲ್ (ಚಂಪಾ) ರವರು!

ಒಂದು ದಿನ ಕೇಂದ್ರದ ಸಿ.ಬಿ.ಐ ನ ಕೃಪಾಕಟಾಕ್ಷದಲ್ಲಿರುವ ಸನ್ಮಾನ್ಯ ಮಾಜಿ ಮು.ಮಂ.ಗಳು ಫೋನು ಮಾಡಿ ತಮ್ಮ ಪಕ್ಷಕ್ಕೆ ಸೇರಬೇಕೆಂದು ಕರೆಯುತ್ತಾರೆ. ತಮ್ಮ ಕೆಲವು ಅನಿಸಿಕೆ, ಷರತ್ತುಗಳಿವೆಯೆಂದು ಇವರು ಹೇಳುತ್ತಾರೆ. ಕೋಮುವಾದದ ವಿರೋಧಿ, ಸೆಕ್ಯುಲರಿಸಂ ವಿಷಯಗಳನ್ನು ಅವರಿಗೆ ತಿಳಿಸಲಾಗುತ್ತದೆ. ಅದಕ್ಕೆ ಆ ಕಡೆಯಿಂದ ಫೋನ್ ಮಾಡಿದ್ದ ಪಳಗಿದ ದ್ವನಿ ಆಗಬಹುದು ಎನ್ನುತ್ತದೆ. ಇದರೊಂದಿಗೆ ಕನ್ನಡ ಮತ್ತು ಕರ್ನಾಟಕದ ರಕ್ಷಣೆ ಇತ್ಯಾದಿಗಳ ಪ್ರಸ್ತಾಪಕ್ಕೆ ಹೂಂ ಎನ್ನಲಾಗುತ್ತದೆ. ಇನ್ನೇನು ಪಕ್ಷಕ್ಕೆ ಅಧಿಕೃತವಾಗಿ ಸೇರಿದ್ದು ಘೋಷಣೆಯಾಗುತದೆ. ಅಂದರೆ ಇಲ್ಲಿ ಭಾರೀ ಸಮಾರಂಭವೇನೂ ನಡೆಯುವುದಿಲ್ಲ, ಸಾವಿರಾರು ಬೆಂಬಲಿಗರೊಂದಿಗೂ ಸೇರ್ಪಡೆಯೂ ಇರುವುದಿಲ್ಲ. ಈ ಸರಳ ಸುದ್ದಿಯನ್ನು ಕೆಲವು ಪತ್ರಿಕೆಗಳು ಮುಖಪುಟದಲ್ಲಿ ಪ್ರಕಟಿಸುತ್ತವೆ. ಒಂದು ಚಾನೆಲ್ ಪ್ರೀತಿಯ ಕಾರಣದಿಂದ ವಿಶೇಷ ಸಂದರ್ಶನ ನಡೆಸಿ ಸಮರ್ಥನೆಗಳನ್ನು ದಾಖಲಿಸುತ್ತದೆ.

ಯಾಕೀ ಕುರುಡು?

ಮಾನ್ಯ ಚಂಪಾರವರು ಕೆಜೆಪಿ ಪಕ್ಷಕ್ಕೆ ಸೇರಿದ್ದು ಅನಿರೀಕ್ಷಿತವೇನಲ್ಲ, ಅವರೇ ಹೇಳುವಂತೆ ಅಘಾತಕಾರಿಯಂತೂ ಖಂಡಿತ ಅಲ್ಲ. ಹಲವಾರು ತಿಂಗಳಿಂದಲೂ ಸಲಹೆಗಾರರಾಗಿದ್ದ ಅವರನಿರ್ಧಾರ ಅದೇನಿದ್ದರೂ ಕೇವಲ ತಾಂತ್ರಿಕ. ಇಷ್ಟೆ ಆಗಿದ್ದರೆ ಯಾರೇನೂ ಅಷ್ಟು ತಲೆ ಕೆಡಿಸಿಕೊಳ್ಳಬೇಕಾದ ಅಗತ್ಯವಂತೂ ಇರಲೇ ಇಲ್ಲ. ಈ ಪ್ರಜಾಪ್ರಭುತ್ವದಲ್ಲಿ ಎಷ್ಟೇ ದೊಡ್ಡ ವ್ಯಕ್ತಿಯಾದರೂ, ವಯೋವೃದ್ಧರಾದರೂ ಒಬ್ಬರಿಗೆ ಒಂದೇ ಓಟು ಎಂದೂ, ಅದು ಅವರ ವ್ಯಕ್ತಿಗತ ನಿರ್ಧಾರವೆಂದೂ ಸುಮ್ಮನಿರಬಹುದಿತ್ತು. ಆದರೆ ಅವರು ಕರ್ನಾಟಕದ ಇಂದಿನ ಬಹುತೇಕ ಪ್ರಶ್ನೆಗಳಿಗೆ ಪ್ರಾದೇಶಿಕ ಪಕ್ಷವೇ ಮದ್ದು ಎಂತಲೂ, ಅದು ಯಡಿಯೂರಪ್ಪನವರ ಕೆಜೆಪಿ ಯಿಂದ ಸಾಧ್ಯವೆಂತಲೂ ಅವರು ವಾದಿಸತೊಡಗಿದ್ದಾರೆ. ಆದರ್ಶವಾದಿಯಾಗಿರುವಾಗಲೇ ವಾಸ್ವ್ವಾದಿಯೂ ಆಗಿದ್ದೇನೆನ್ನುವ ಅವರಿಗೆ ಭೂತ ಮತ್ತು ಭವಿಷ್ಯಗಳಿಗಿಂತ ವರ್ತಮಾನ ಮಾತ್ರವೇ ಮುಖ್ಯವೆಂತಲೂ ಪ್ರತಿಪಾದಿಸುವುದನ್ನು ಬಿಡುವುದೇ ಇಲ್ಲ. ಮಾತ್ರವಲ್ಲ, ಕಮ್ಯೂನಿಸಂ ತಮ್ಮ ಹೃದಯಕ್ಕೆ ಹತ್ತಿರವಾದ ಸಿದ್ಧಾಂತವಾದರೂ ಕಮ್ಯೂನಿಸ್ಟರು ಭಾರತವನ್ನು ಅರಿಯದವರೂ, ಕನ್ನಡದ್ರೋಹಿಗಳು ಎನ್ನುವ ಹಳಸಲು ಆರೋಪವನ್ನು ಉಚ್ಚರಿಸಲು ಮರೆಯುವುದಿಲ್ಲ.

ನಮ್ಮ ಪ್ರಶ್ನೆ ಇಷ್ಟೇ. ಭೂತವನ್ನು ಅಂದರೆ ಇತಿಹಾಸವನ್ನು ಅರಿಯದವರು ಭವಿಷ್ಯವನ್ನು ರೂಪಿಸಬಲ್ಲರೇ? ವರ್ತಮಾನವನ್ನಾದರೂ ಅರಿಯಲು ಶಕ್ತರೇ?. ಚಂಪಾರವರು ಕನ್ನಡದ ಕವಿ, ತುರ್ತು ಪರಿಸ್ಥಿತಿಯಲ್ಲಿ ಕೆಲವು ದಿನಗಳು ಜೈಲಿನಲ್ಲಿದ್ದು ಪುಸ್ತಕವನ್ನೂ ಬರೆದಿದ್ದಾರೆ. (ಹಲವಾರು ವರ್ಷಗಳು ಜೈಲಿನಲ್ಲಿದ್ದರೂ ಎಷ್ಟೋ ಕಮ್ಯೂನಿಸ್ಟರು ಪುಸ್ತಕ ಬರೆಯಲಿಲ್ಲ) ಗೋಕಾಕ್ ಚಳುವಳಿಯಲ್ಲಿಯೂ ಇದ್ದರು ನಿಜ. ನಂತರ ಕನ್ನಡದ ಹೆಸರಿನಲ್ಲಿ ನಡೆಯುತ್ತಿದ್ದ ಹಲವು ಚಳುವಳಿಗಳಲ್ಲಿ ಭಾಗಿಯಾಗಿ, ಸಮಾರಂಭಗಳಲ್ಲಿ ಭಾಷಣ ಮಾಡಿದ್ದೂ ವಾಸ್ತವವೇ. ಆದರೆ ಕನ್ನಡ ಭಾಷೆ, ಕರ್ನಾಟಕ ರಾಜ್ಯ ರೂಪುಗೊಂಡ ಬಗೆ, ಆಧುನಿಕ ಕರ್ನಾಟಕದ ನಿರ್ಮಾಣದಲ್ಲಿ, ಅದರ ರಕ್ಷಣೆಯಲ್ಲಿ, ಜನತೆಯ ಬದುಕಿನ-ಸಾಮಾಜಿಕ ಪರಿವರ್ತನೆಯಲ್ಲಿ ಕಮ್ಯೂನಿಸ್ಟರ ಪಾತ್ರವನ್ನು ಕನಿಷ್ಟ ಇಣುಕಿಯೂ ನೋಡದಿದ್ದರೆ ಹೇಗೆ? ಹಿಂದೆ ನವ್ಯ ಕವಿ ಗೋಪಾಲಕೃಷ್ಣ ಅಡಿಗರನ್ನು ಒಂದು ಜನಾಂಗದ ಕಣ್ಣು ತೆರೆಸಿದ ಕವಿಯೆಂಬುದಕ್ಕೇ

ಪುಟ 15 ಕ್ಕೆ

ವೆಂಕಟೇಶ ಕೋಣಿ ದಂಪತಿಯಿಂದ ಮರಣೋತ್ತರ ದೇಹ ದಾನ ಒಪ್ಪಂದ

ಕುಂದಾಪುರ ತಾಲೂಕು ಬೈಂದೂರು ಗ್ರಾಮ ನಿವಾಸಿಯಾಗಿರುವ ಸಾಮಾಜಿಕ ಕಾರ್ಯಕರ್ತ ಕೋಣಿ ವೆಂಕಟೇಶ ನಾಯಕ್ ಮತ್ತು ಅವರ ಪತ್ನಿ ಶೋಭಾ ವಿ. ನಾಯಕ್ ಅವರು ತಮ್ಮ ದೇಹವನ್ನು ಶರೀರ ಶಾಸ್ತ್ರ ವಿಭಾಗ ಕಸ್ತೂರ್ಬಾ ಮೆಡಿಕಲ್ ಕಾಲೇಜ್‌ಗೆ ಮರಣೋತ್ತರ ದೇಹದಾನ ಮಾಡುವ ಮೃತ್ಯು ಪತ್ರಕ್ಕೆ ಸಹಿ ಹಾಕಿದ್ದಾರೆ.

ಸಿಪಿಐ(ಎಂ) ಪೂರ್ಣಾವದಿ ಕಾರ್ಯಕರ್ತರೂ ಆಗಿರುವ ವೆಂಕಟೇಶ ಕೋಣಿ ಹಾಗೂ ಅವರ ಪತ್ನಿ ಶೋಭಾ ವಿ. ನಾಯಕ್‌ರವರು ಮರಣದ ನಂತರ ದೇಹಕ್ಕೆ ಮಾಡುವ ಧಾರ್ಮಿಕ ಕ್ರಿಯಾ ಕರ್ಮಕ್ಕಿಂತಲೂ ದೇಹದಾನದಿಂದ ಮಾನವ ಕೋಟಿಗೆ ಆಗುವ ಸಂಶೋಧನೆಯ ಲಾಭ ಅತಿ ಶ್ರೇಷ್ಠ ಎಂದು ಮನವರಿಕೆಯಾಗಿರುವುದರಿಂದ ತಮ್ಮ ದೇಹವನ್ನು ಕೆ.ಎಂ.ಸಿ. ಮಣಿಪಾಲದ ಶರೀರ ಶಾಸ್ತ್ರ ವಿಭಾಗದವರಿಗೆ ಸ್ವೀಕರಿಸಲು ಸಂಪೂರ್ಣ ಅಧಿಕಾರ ಕೊಟ್ಟಿರುತ್ತಾರೆ. ದೇಹದಾನ ಮಾಡುವುದರಿಂದ ವೈದ್ಯಕೀಯ ವಿದ್ಯಾರ್ಥಿ ಸಮೂಹಕ್ಕೆ




ಪ್ರಯೋಜನವಾಗುತ್ತದೆ. ಮೃತ ದೇಹವನ್ನು ಸುಡುವುದರಿಂದ ಮತ್ತು ಅನಂತರ ಕ್ರಿಯೆಯಿಂದ ಸ್ವರ್ಗ ಸಿಗುತ್ತದೆ ಎನ್ನುವುದರಲ್ಲಿ ನಮಗೆ ನಂಬಿಕೆ ಇಲ್ಲ. ಹೀಗಾಗಿ ಯಾರಿಗಾದರೂ ಉಪಕಾರವಾಗುವುದಾದರೆ ಆಗಲಿ ಎಂದು ನಮ್ಮ ದೇಹವನ್ನು ದಾನ ಮಾಡಿದ್ದೇವೆ. ದೇಹದಾನ ಮಾಡುವ ಪತಿಯ ನಿರ್ಧಾರಕ್ಕೆ ತನ್ನದೂ ಒಪ್ಪಿಗೆ ಇದೆ, ಸತ್ತ ನಂತರ ಏನಾಗುತ್ತದೆ. ಮುಂದಿನ ಜನ್ಮ ಇದೆಯೋ ಇಲ್ಲವೋ ಎಂಬುವುದು ಯಾರಿಗೂ ಗೊತ್ತಿಲ್ಲ, ಹೀಗಾಗಿ ಈ ದೇಹ ಯಾರಿಗಾದರೂ ಪ್ರಯೋಜನವಾಗಲಿ ಎಂದು ನಾವು ಈ ಅಭಿಪ್ರಾಯಕ್ಕೆ ಬಂದಿದ್ದೇವೆ ಎಂದು ಶ್ರೀಮತಿ ಶೋಭಾ ನಾಯಕ್ ತಿಳಿಸಿದ್ದಾರೆ.

ಹೆತ್ತವರ ಈ ನಿರ್ಧಾರಕ್ಕೆ ಅವರ ಎರಡು ಮಕ್ಕಳು ಸಮ್ಮತಿ ಸೂಚಿಸಿದ್ದಾರೆ. ಅದೊಂದು ಸಮಾಜ ಸೇವೆಯ ಕೆಲಸವಾಗಿರುವುದರಿಂದ ಅದಕ್ಕೆ ನಮ್ಮ ಸಹಮತವಿದೆ ಎನ್ನುತ್ತಾರೆ ವೆಂಕಟೇಶ ಕೋಣಿ ಅವರ ಪುತ್ರ ಚೇತನ ವಿ. ನಾಯಕ್, ಪುತ್ರಿ ವರ್ಷಾ ವಿ. ನಾಯಕ್.

ಮರಣೋತ್ತರ ದೇಹದಾನ ಮಾಡಿದ ವ್ಯಕ್ತಿ ಮರಣ ಹೊಂದಿದ 24 ತಾಸುಗಳ ಒಳಗಾಗಿ ಕುಟುಂಬಸ್ಥರು ಮಾಹಿತಿ ನೀಡಿದರೆ ಸ್ಥಳಕ್ಕೆ ಬಂದು ದೇಹವನ್ನು ಮೆಡಿಕಲ್ ಕಾಲೇಜ್‌ಗೆ ಕೊಂಡೊಯ್ಯುವ ಸಂಪೂರ್ಣ ಜವಾಬ್ದಾರಿ ಸಂಸ್ಥೆಯದಾಗಿರುತ್ತದೆ.

ಅನುಕರಣೆ ಅರ್ಹವಾದ ನಿರ್ಧಾರ ಕೈಗೊಂಡಿರುವ ಮೆಂಕಟೇಶ್ ಕೋಣಿ ದಂಪತಿಗಳಿಗೆ 'ಜನಶಕ್ತಿ' ಹಾರ್ದಿಕವಾಗಿ ಅಭಿನಂದಿಸುತ್ತದೆ.

ಸೂರು ಕಲ್ಪಿಸಲು ಗ್ರಾಮಸ್ಥರ ಆಗ್ರಹ

ಕಳೆದ 25 ವರ್ಷಗಳಿಂದ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಕುಲುಮೆದೊಡ್ಡಿ ಗ್ರಾಮದ ಸರ್ವೆ ನಂ. 276 ರಲ್ಲಿ ನೆಲಸಿದಂಥ ನಿವಾಸಿಗಳನ್ನು ಏಕಾಏಕಿ ಒಕ್ಕಲೆಬ್ಬಿಸಿರುವ ಅಲ್ಲಿನ ತಾಲೂಕು ಆಡಳಿತದ ಕ್ರಮ ಖಂಡಿಸಿ ಅಲ್ಲಿನ ನಿವಾಸಿಗಳು ಶುಕ್ರವಾರದಂದು ನಗರದ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನಾ ಧರಣಿ ನಡೆಸಿದರು. ಕುಲುಮೆದೊಡ್ಡಿ ಗ್ರಾಮದಲ್ಲಿ ವಾಸವಿದ್ದ ನಮ್ಮನ್ನು ಏಕಾಏಕಿ ಒಕ್ಕಲೆಬ್ಬಿಸಿರುವುದರಿಂದ ನಾವುಗಳು ನಿರಾಶ್ರಿತರಾಗಿದ್ದು, ಬೀದಿ ಪಾಲಾಗಿದ್ದೇವೆ. ಜಿಲ್ಲಾ ಆಡಳಿತ ಮಧ್ಯೆ ಪ್ರವೇಶಿಸಿ ನಮಗೆ ಸೂರು ಮತ್ತು ಮೂಲಭೂತ ಸೌಕರ್ಯ ಕಲ್ಪಿಸುವುದರ ಜೊತೆಗೆ ಹಕ್ಕುಪತ್ರವನ್ನು ನೀಡಬೇಕು ಎಂದು ಆಗ್ರಹಿಸಿದರು.



ಗಾಮದ ಸರ್ವೆ ನಂ. 276 ರ ಸ್ಥಳದಲ್ಲಿ 13 ಬಡ ಕುಟುಂಬಗಳು ನೆಲೆಸಿದ್ದವು. ಸ್ಥಳೀಯ ಗ್ರಾಮ ಪಂಚಾಯತಿಯು ವಾಸ ದೃಢೀಕರಣ ಪತ್ರವನ್ನು ನೀಡಿರುತ್ತದೆ. ಅಲ್ಲದೆ ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ವಿದ್ಯುತ್ ಸಂಪರ್ಕ ಸೇರಿದಂತೆ ಹಲವು ಸೌಲಭ್ಯಗಳು ಹೊಂದಿದ್ದರು ಸಹ ತಾಲ್ಲೂಕು ಆಡಳಿತವು ನಮ್ಮನ್ನು ಏಕಾಏಕಿ ವಾಸವಿದ್ದ ಸ್ಥಳದಿಂದ ಒಕ್ಕಲೆಬ್ಬಿಸಿದೆ ಎಂದು ಸಂತ್ರಸ್ಥರು ದೂರಿದರು. ಯಾವುದೇ ಮುನ್ಸೂಚನೆ ನೀಡದೆ ಒಕ್ಕಲೆಬ್ಬಿಸಿರುವ ತಹಶೀಲ್ದಾರ್‌ರ ವಿರುದ್ಧ ಕ್ರಮ ಜರುಗಿಸಬೇಕು ಮತ್ತು ಈ ಘಟನೆಯಲ್ಲಿ ಸಂತ್ರಸ್ತರಾದ ಕುಟುಂಬಗಳೂ ಸೇರಿದಂತೆ ಹುಸ್ಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದಾಪುರ ಇತರೆಡೆ ಸರ್ಕಾರಿ ಭೂಮಿಯಲ್ಲಿ ವಾಸವಿರುವ ಕುಟುಂಬಗಳಿಗೂ ಹಕ್ಕುಪತ್ರ ನೀಡಬೇಕು ಎಂದು ಆಗ್ರಹಿಸಿದರು.

ಪ್ರಾಂತ ಕೃಷಿ ಕೂಲಿಕಾರರ ಸಂಘದ ಎಂ. ಪುಟ್ಟಮಾದು, ಕೆ. ಬಸವರಾಜು ಸೇರಿದಂತೆ ಹಲವಾರು ಭಾಗವಹಿಸಿದ್ದರು.

– ವರದಿ – ಹನುಮೇಗೌಡ

ಕವಿತೆ

ನನ್ನ ಹೆತ್ತಬ್ಬೆಗೆ

ನನ್ನಬ್ಬೆ ತನ್ನಬ್ಬೆಗೆ ಹೇಳಿದ್ದಳು
ಅಬ್ಬೆ ನನ್ನನ್ನು ಬೇಗ ದೊಡ್ಡವಳಾಗಿಸು !
ಘಟ್ಟ-ಅಟ್ಟ ಏರಿಳಿದು,
ಬಾವಿ-ಬಣಿವೆ-ಮರವ ಹತ್ತಿಳಿದು
ಬೆಟ್ಟ ಕಣಿವೆಯಲಿ ಮೋಡಗಳ ಸೀಳಿ
ಏರ ಏರುವೆ
ಕತ್ತಲ ಏಕಾನದ ಸುಳಿ ಮಾರ್ಗದಲಿ
ಬೆಳಕ ಅರಸುವೆ, ಜಗವ ಸುತ್ತುವೆ
ಅಬ್ಬೆ ನನ್ನನ್ನು ಬೇಗ ದೊಡ್ಡವಳಾಗಿಸು !
ನಾನು ನನ್ನಬ್ಬೆಗೆ ಹೇಳಿದೆ
ಅಬ್ಬೆ ನಾನೊಂದು ಮಗು
ಮನುಷ್ಯನ ಮಾಡದಿರು!
ಕಣ್ಬಿಟ್ಟು, ಬಾಯ್ಬಿಟ್ಟು,
ಮನಬಿಚ್ಚಿ ನೋಡದಿರಲಿ
ಜಗವ ನೋಡದಿರಲಿ.
ಊರು-ಕೇರಿ-ಬಯಲು-ಬಸ್ಸು
ಕಾಡು-ಕಾರು-ರೈಲು-ಶಾಲೆ ಎಲ್ಲೆಂದರಲ್ಲಿ
ಬೇಡ ನನ್ನ ಮೇಲೊಂದು ಅತ್ಯಾಚಾರ
ಹಗಲಾಗಲೀ ರಾತ್ರಿಯಾಗಲಿ
ಕತ್ತಲೆಯ ಕಾಟ ತಪ್ಪದು!
ಅಬ್ಬೆ, ಮಗುವ ಮನುಷ್ಯನ ಮಾಡದಿರು!
ಆದರೆ, ನನ್ನೊಂದಿಗೆ ಭ್ರೂಣ
ಮಾತಾಡುತ್ತಿದೆ
ಅಬ್ಬೆ, ನಾನು ಬರೀ ಭ್ರೂಣವಲ್ಲ
ಹಸಿದು ನೀರಡಸಿದ ಸೋತ ದೇಹದ
ಅಭದ್ರ ನಿತ್ರಾಣ ಗರ್ಭದಾಚೆ ಹೊರಬರುವೆ
ಪ್ರಪಂಚಿಗರ ಪ್ರಭಂಜನಕ್ಕೆ ಸಿಕ್ಕು
ನನ್ನನ್ನು ಪರೀಕ್ಷಿಸದಿರು !
ಅಬ್ಬೆ ಇಲ್ಲದ ಜಗವ ಸೃಷ್ಟಿಸದಿರು, ಅಬ್ಬೆ!

– ಯಮುನಾ ಗಾಂವ್ಕರ್,
ಕಾರವಾರ

ಜನಶಕ್ತಿ
ಕನ್ನಡ ವಾರಪತ್ರಿಕೆ

ಧಾರವಾಡ: ಜನ ಸಾಹಿತ್ಯ ಸಮಾವೇಶ

ಸಾಹಿತ್ಯ-ಜನಚಳುವಳಿಗಳ ನಡುವಿನ ಸಂಬಂಧವೇನು?


ಆರ್. ರಾಮಕೃಷ್ಣ

..ಜಾಗತೀಕರಣ ನೀತಿಗಳು ಜನರ ಬದುಕಿನಲ್ಲೂ ಸಾಂಸ್ಕೃತಿಕ ಬದುಕಿನಲ್ಲೂ ಹತ್ತೆಂಟು ತಲ್ಲಣಗಳನ್ನು ಹುಟ್ಟು ಹಾಕಿವೆ.... ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾ-ರೆ. ಬದುಕು ಅರಸಿ ಬಡ ಜನ ಗುಳೆ ಏಳುತ್ತಿದ್ದಾರೆ. ಮನುಷ್ಯ ಸಂಬಂಧಗಳು, ಕುಟುಂಬ ಸಂಬಂಧಗಳು ಪುನರ್ ವ್ಯಾಖ್ಯಾನಕ್ಕೆ ಒಳಗಾಗುತ್ತಿವೆ..... ಮಾರುಕಟ್ಟೆ ಮನೋಧರ್ಮ ವಿಸ್ತರಿಸುತ್ತಿದೆ...ಅಂತರ ರಾಷ್ಟ್ರೀಯ ಬಂಡವಾಳ, ಮಾರುಕಟ್ಟೆ ಸಂಸ್ಕೃತಿ ಎಲ್ಲದರ ಮೇಲೂ ದಾಳಿ ಮಾಡುತ್ತಿವೆ. ಆಳುವ ಸರ್ಕಾರಗಳು ಕಾರ್ಪೋರೇಟ್ ಜಗತ್ತಿನ ಕೈ ಚೀಲಗಳಾಗುತ್ತಿವೆ. ಕಾರ್ಪೋರೇಟ್ ಲೂಟಿಗೆ ಸಮುದಾಯದ ಒಪ್ಪಿಗೆಯನ್ನು ಉತ್ಪಾದಿಸುವುದಕ್ಕೆ ಸಾಹಿತ್ಯ-ಸಾಹಿತಿಗಳನ್ನು ಬಳಸಿಕೊಳ್ಳುವ ಹುನ್ನಾರ ನಡೆಯುತ್ತಿದೆ. ದೇಶ ಕೋಶಗಳನ್ನು ಹರಾಜು ಹಾಕಲು ಸಾರ್ವಜನಿಕ ಒಪ್ಪಿಗೆ ಪಡೆಯಲು ಯತ್ನಿಸಲಾಗುತ್ತಿದೆ....ವೈಚಾರಿಕತೆಯ ಕತ್ತನ್ನೆ ಕತ್ತರಿಸಲಾಗುತ್ತಿದೆ....
ಹೀಗೆ ಮುಂದುವರೆದಿತ್ತು ಮಾತು.

.....70-80 ರ ದಶಕದಲ್ಲಿ ಪುರೋಹಿತಶಾಹಿ, ಅರಸೊತ್ತಿಗೆ, ಪಾಳೇಗಾರಿ ಮೌಲ್ಯಗಳ ವಿರುದ್ಧ ಸಿಡಿದು ಬಂದ ಬಂಡಾಯ, ದಲಿತ, ಮಹಿಳಾ ಚಳುವಳಿಗಳು ಜನಪರ ಮೌಲ್ಯಗಳನ್ನು ಪ್ರತಿನಿಧಿಸಿ ಅಂದಿನ ಸಂದರ್ಭದ ಅಗತ್ಯಗಳಿಗೆ ಸ್ಪಂದಿಸಿ ತಮ್ಮ ಕರ್ತವ್ಯ ನಿಭಾಯಿಸಲು ಶ್ರಮಿಸಿದವು. ಆದರೆ ಇಂದಿನ ಸಂದರ್ಭದ ಅಗತ್ಯಗಳಿಗೆ ಅವು ಸ್ಪಂದಿಸುತ್ತಿಲ್ಲ. ಈ ವೇದಿಕೆಗಳೀಗ ಬಹುತೇಕ ಕ್ರಿಯಾಶೀಲತೆ ಇಲ್ಲದೇ ಸ್ಥಗಿತವಾಗಿವೆ.

ಹಿಂದೆ 'ಕಲೆಗಾಗಿ ಕಲೆ' ಎಂಬ ವಾದವನ್ನು ವಿರೋಧಿಸಿ 'ಜನತೆಗಾಗಿ ಕಲೆ' ಎಂಬ ನೆಲೆಯಲ್ಲಿ ಪ್ರಗತಿಪರ ಸಾಹಿತ್ಯ ಚಳುವಳಿ ಬೆಳೆದು ಬಂತು. ಈ ಹಿನ್ನೆಲೆಯಲ್ಲಿ ಸೃಷ್ಟಿಯಾದ ಸಾಹಿತ್ಯವನ್ನು " ಘೋಷಣೆಗಳು, ಕಲಾತ್ಮಕತೆ ಇಲ್ಲದ ಸವಕಲು ಸಾಹಿತ್ಯ" ಎಂದು ಟೀಕಿಸಲಾಯಿತು. ಈಗ 'ಸಾಹಿತಿಗಳು ಯಾವುದೇ ಚಳುವಳಿಗಳೊಂದಿಗೆ ಗುರುತಿಸಿಕೊಳ್ಳಬಾರದು. ಅದು ಸಾಹಿತಿಯ ಸೃಜನ ಶೀಲತೆಗೆ ಮಾರಕ' ಎಂಬ ವಾದವನ್ನು ಹರಿಯ ಬಿಡಲಾಗುತ್ತಿದೆ. ಸಾಹಿತಿ ಮುಕ್ತವಾಗಿ, ಸ್ವತಂತ್ರವಾಗಿ ಯೋಚಿಸಬೇಕು, ಸಾಹಿತ್ಯಕ್ಕೆ ಯಾವುದೇ ಸಿದ್ಧಾಂತದ ಹೊರೆ-ಭಾರ, ಚೌಕಟ್ಟು-ನೆಲೆಗಟ್ಟು ಅಗತ್ಯವಿಲ್ಲ.." ಎಂದು ಪ್ರತಿಪಾದಿಸಲಾಗುತ್ತಿದೆ. ಇದೇ ಸಂದರ್ಭದಲ್ಲಿ ಸಾಹಿತ್ಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಾರ್ಪೋರೇಟ್ ವಲಯ ಪ್ರಾಯೋಜಿಸುವಂತಹ ಪ್ರವೃತ್ತಿಗಳು ಹೆಚ್ಚುತ್ತಿವೆ. ಇಂತಹ ಅಪಾಯಕಾರಿ ಜನವಿರೋಧಿ ಪ್ರವೃತ್ತಿಗಳ ವಿರುದ್ಧ ಇಂದಿನ ಸಂದರ್ಭದ ಸವಾಲುಗಳನ್ನು ಎದುರಿಸುವ ಶಕ್ತಿಶಾಲಿ ಸಾಹಿತ್ಯಿಕ, ಸಾಂಸ್ಕೃತಿಕ ಚಳುವಳಿಯನ್ನು ಹುಟ್ಟು ಹಾಕಬೇಕು.....

ಇದು ಮಾರ್ಚ್ 23 ಮತ್ತು 24, 2013 ರಂದು ಎರಡು ದಿನಗಳ ಕಾಲ ಧಾರವಾಡದಲ್ಲಿ ನಡೆದ 'ಜನ ಸಾಹಿತ್ಯ ಸಮಾವೇಶ'ದಲ್ಲಿ ವಿಭಿನ್ನ ಗೋಷ್ಠಿಗಳಲ್ಲಿ, ಸಂದರ್ಭಗಳಲ್ಲಿ ಕೇಳಿ ಬಂದ ಮಾತುಗಳು ಮತ್ತು ಮಾತಿನ ಸಾರ.



ಉದ್ಘಾಟಿಸುತ್ತಿರುವ ಕವಿ ಲಕ್ಷ್ಮಣ ಗಾಯಕವಾಡ್

'ವರ್ತಮಾನದ ತವಕ-ತಲ್ಲಣಗಳು'

ವರ್ತಮಾನದ ತವಕ ತಲ್ಲಣಗಳು ಎಂಬ ಗೋಷ್ಠಿಯಲ್ಲಿ ನಾನಾ ಸಾಹಿತಿಗಳು ಚಿಂತಕರು ಮಾತನಾಡಿದರು. ಕೋಮುವಾದ, ಅಸ್ಪೃಶ್ಯತೆ, ಜಾತೀಯತೆ, ಮಹಿಳೆಯರ ಮೇಲಿನ ಕ್ರೌರ್ಯ, ದೌರ್ಜನ್ಯಗಳು...ಜಾಗತೀಕರಣದ ಹುನ್ನಾರಗಳು, ಬಹುರಾಷ್ಟ್ರೀಯ ಕಂಪನಿಗಳಿಗೆ, ಬಂಡವಾಳಗಾರರಿಗೆ ರೈತರ ಭೂಮಿ ಕಿತ್ತುಕೊಳ್ಳುವ ಸಂಚುಗಳು, ಪರಿಸರದ ಮೇಲೆ ನಡೆಯುತ್ತಿರುವ ಆಕ್ರಮಣಗಳು...ಮುಂತಾದ ನಾನಾ ಅಂಶಗಳನ್ನು ಗುರುತಿಸಲಾಯಿತು.

" ಪ್ರಭುತ್ವ ಮತ್ತು ಪ್ರಭುತ್ವದ ಶಕ್ತಿಗಳಿಂದ ಶೋಷಣೆಗೆ ಒಳಗಾದ ಜೀವಗಳ ಪರವಾಗಿ ಈ ಸಮಾವೇಶದ ಲೇಖಕರು ನಿಲ್ಲುತ್ತಾರೆ ಮತ್ತು ಪ್ರಭುತ್ವ ಹಾಗೂ ಪ್ರಭುತ್ವ ಶಕ್ತಿಗಳ ಶೋಷಣೆಯನ್ನು ಸಮಾವೇಶದ ಲೇಖ-ಕರು ಖಂಡಿಸುತ್ತಾರೆ" ಎಂಬ ಎರಡು ವಾಕ್ಯಗಳ ನಿರ್ಣಯವನ್ನು ಸಮಾವೇಶ ಕೊನೆಯಲ್ಲಿ ಅಂಗೀಕರಿಸಿತು. ಸಾಹಿತಿ, ಲೇಖಕರು ಜನರ ಸಮಸ್ಯೆಗಳಿಗೆ ಸ್ಪಂದಿಸಿ ಪ್ರತಿಭಟನೆಗೆ ಇಳಿಯುವುದು, ಬರೆಯುವಷ್ಟೇ ಮುಖ್ಯ ಅಥವಾ ಅದಕ್ಕಿಂತಲೂ ಮುಖ್ಯ ಎಂಬ ಅಭಿಪ್ರಾಯದ ಪ್ರತಿಪಾದನೆಗಳೂ ನಡೆದವು. ಇಂತಹ ಕ್ರಿಯಾಶೀಲತೆಗಳ ನಡುವೆ ಬಿಡುವಾದರೆ ಮಾತ್ರ ಬರೆಯುವೆ ಎಂದು ಕೆಲವರು ಘೋಷಿಸಿದರು.

ಶೋಷಿತ ಜನಸಮುದಾಯಗಳ ಒಗ್ಗಟ್ಟನ್ನು ಮುರಿಯುವ-ಒಡಕು ತರುವ ಪ್ರಯತ್ನಗಳ ವಿರುದ್ಧ ಎಚ್ಚರಿಕೆ-ಯ ಮಾತುಗಳು ಕೇಳಿ ಬಂದವು. ಪ್ರಶಸ್ತಿ, ಸ್ಥಾನ ಮಾನ, ಸವಲತ್ತುಗಳ ಆಕರ್ಷಣೆಗೆ ಬಲಿಬಿದ್ದ ಸಾಹಿತಿಗಳು ಜನಪರ ಚಳುವಳಿಯ ಆಶಯಗಳ ವಿರುದ್ಧವಾಗಿ ಪ್ರಭುತ್ವದ ಸೇವೆಗೆ ನಿಂತರು. ದಮನಕಾರಿ ಪ್ರಭುತ್ವಗಳಿಗಿಂತ 'ಮೃದು ಧೋರಣೆ'ಯ ಪ್ರಭುತ್ವಗಳು ಜನಪರ ಸಾಹಿತಿಗಳನ್ನು ಭ್ರಷ್ಟಗೊಳಿಸಿ ಜನಪರ ಸಾಹಿತ್ಯಿಕ-ಸಾಂಸ್ಕೃತಿಕ ಚಳುವಳಿಗಳನ್ನು ದುರ್ಬಲಗೊಳಿಸಿದವು. ಸಾಹಿತಿಗಳು ವೈಯುಕ್ತಿಕ ಹಿತಾಸಕ್ತಿಗಳನ್ನು ಮೀರಿ ಜನಹಿತಕ್ಕೆ ಬದ್ಧವಾಗಬೇಕು. ಸಾಹಿತ್ಯ-ಚಳುವಳಿ ಬೇರೆ ಬೇರೆ ಅಲ್ಲ. ಸಾಹಿತ್ಯ ಚಳುವಳಿ ಜನ ಚಳುವಳಿಗಳ ಭಾಗವಾಗಬೇಕು. ಬಂಡಾಯ, ದಲಿತ ಚಳುವಳಿಯ ಅರಂಭಿಕ ಹಂತದಲ್ಲಿ ಸೃಷ್ಟಿಯಾದ ಸಾಹಿತ್ಯಕ್ಕಿಂತ ಇಂದು ಹೆಚ್ಚು ಸತ್ವಶಾಲಿಯಾದ ಜನಪರ ಸೃಜನಶೀಲ ಸಾಹಿತ್ಯ ಸೃಷ್ಟಿಯಾಗುತ್ತಿದೆ. ಹೊಸ ತಲೆಮಾರು ಜನಪರವಾದ ಹೊಸ ಸಾಹಿತ್ಯ ಚಳುವಳಿಯನ್ನು ಆರಂಭಿಸಬೇಕು. ಇದಕ್ಕೆ ಹಿರಿಯರು, ಅವರ ಅನುಭವ ಗೊಬ್ಬರದಂತೆ ಒದಗಬೇಕು ಎಂಬ ಆಶಯಗಳು ಸಮಾವೇಶದಲ್ಲಿ ವ್ಯಕ್ತವಾದವು. ಈ ಜನಪರ ಸಾಹಿತ್ಯ ಚಳುವಳಿ ಬಲಪಂಥೀಯತೆಯನ್ನು ತಿರಸ್ಕರಿಸುತ್ತದೆ. ಇದಕ್ಕೆ ಪ್ರಗತಿಪರ, ಎಡಪಂಥೀಯ ನೆಲೆಗಟ್ಟು ಇರುತ್ತದೆ. ಇಂತಹ ಸೈದ್ಧಾಂತಿಕ ನೆಲೆಗಟ್ಟು ಸಾಹಿತಿಯ ಜನಪರತೆಗೆ, ಬದ್ಧತೆಗೆ ಆಧಾರವಾಗುತ್ತದೆ. ಸಾಹಿತ್ಯಿಕ- ರಾಜಕೀಯ ಪ್ರಜ್ಞೆಯನ್ನು ವಿಸ್ತರಿಸುತ್ತದೆ. ಕಲಾತ್ಮಕತೆಗೆ ಇದರಿಂದ ಯಾವ ಧಕ್ಕೆ ಇಲ್ಲ ಎಂದೂ ಸ್ಪಷ್ಟ ಪಡಿಸಲಾಯಿತು.

ಸಾಹಿತ್ಯ ಚಳುವಳಿಯನ್ನು ಮುಂದೊಯ್ಯುವ ಉದ್ದೇಶಕ್ಕೆಂದು ರಾಜ್ಯ ಮಟ್ಟದ ಸಂಘಟನೆಯ ಅಗತ್ಯವೆಂದು ಅದನ್ನು 'ಕರ್ನಾಟಕ ಜನ ಸಾಹಿತ್ಯ ವೇದಿಕೆ' ಎಂದು ಹೆಸರಿಸಿ ಅದಕ್ಕೆ ಹತ್ತು ಜನ ಸಂಚಾಲಕರನ್ನು ಆಯ್ಕೆ ಮಾಡಲಾಯಿತು.

ಮಹಾರಾಷ್ಟ್ರದ ಖ್ಯಾತ ದಲಿತ ಸಾಹಿತಿ ಲಕ್ಷ್ಮಣ ಗಾಯಕ್‌ವಾಡ್ ಅವರು ಸಮಾವೇಶವನ್ನು ಉದ್ಘಾಟಿಸಿದರು. ಡಾ. ಜಿ. ರಾಮಕೃಷ್ಣ ಅಧ್ಯಕ್ಷತೆ ವಹಿಸಿದ್ದ ಉದ್ಘಾಟನಾ ಸಮಾರಂಭದಲ್ಲಿ ಭಾನು ಮುಷ್ತಾಕ್, ಎಂ.ಡಿ. ಒಕ್ಕುಂದ ಮುಂತಾದವರು ಪಾಲ್ಗೊಂಡಿದ್ದರು. ಡಾ. ರಹಮತ್ ತರಿಕೆರೆ, ಬಿ.ಎಂ. ಪುಟ್ಟಯ್ಯ, ಡಾ. ಸಿದ್ದನಗೌಡ ಪಾಟೀಲ, ಎಚ್.ಎಸ್. ಅನುಪಮ, ದು. ಸರಸ್ವತಿ. ಡಾ. ವಿನಯ, ಬಸವರಾಜ ಸೂಳಿಬಾವಿ, ಬಂಜಗೆರೆ ಜಯಪ್ರಕಾಶ್, ಹೀಗೆ ಸಾಹಿತ್ಯ ಚಳುವಳಿ, ಜನ ಚಳುವಳಿಗಳಲ್ಲಿ ಕ್ರಿಯಾಶೀಲರಾದ ಹಲವರು ಹಾಗೂ ಸಾಹಿತಿಗಳೂ ವಿವಿಧ ಗೋಷ್ಠಿಗಳಲ್ಲಿ ಪಾಲ್ಗೊಂಡಿದ್ದರು.

ಇತ್ತೀಚೆಗೆ ಇದೇ ಧಾರವಾಡದಲ್ಲಿ ನಡೆದ 'ಸಾಹಿತ್ಯ ಸಂಭ್ರಮ' ಕಾರ್ಯಕ್ರಮವು ನಾಡಿನ ಸಾಹಿತ್ಯಿಕ -ಸಾಂಸ್ಕೃತಿಕ ಕ್ಷೇತ್ರದಲ್ಲಿ ಹಲವು ಪ್ರಶ್ನೆಗಳಿಗೆ ಕಾರಣವಾಗಿದೆ ಎಂಬುದು ಹಲವರು ಗಮನಿಸಿರಬಹುದು. ಜನರ ಸಂಕಟಗಳಿಗೆ ದನಿಯಾಗಬೇಕಾದ ತುರ್ತು ಅಗತ್ಯ ಹೆಚ್ಚುತ್ತಿರುವ ಹೊತ್ತಲ್ಲಿ ಸಾಹಿತ್ಯ ಸಮಾರಂಭ ಸಂಘಟಿಸಿ 'ಸಂಭ್ರಮಿಸು'ವಂಥದ್ದೇನಿದೆ ? ಇಂತಹ ಸಂದರ್ಭಕ್ಕೆ ಎಲ್ಲರಿಗೂ ಮುಕ್ತ ಪ್ರವೇಶಕ್ಕೆ ಅವಕಾಶ ನೀಡದೇ ನಿರ್ಬಂದಿಸುವುದೇಕೇ ? ಜನಮುಖಿಯಾಗಿರ ಬೇಕಾದ, ಜನರಿಗೆ ಉತ್ತರದಾಯಿ ಆಗಿರಬೇಕಾದ ಸಾಹಿತ್ಯ ಕ್ಷೇತ್ರ ಮತ್ತು ಸಾಹಿತಿಗಳು ಕಾರ್ಪೋರೇಟ್ ಕಂಪನಿಗಳ ಪ್ರಾಯೋಜಕತ್ವದ ಹಂಗಿಗೆ ಬೀಳುವುದು ತರವೇ ? ದುಬಾರಿ ಪ್ರತಿನಿಧಿ ಶುಲ್ಕವನ್ನು ಕೊಟ್ಟು ಬಯಸಿದವರೆಲ್ಲರೂ ಭಾಗವಹಿಸಲು ಸಾಧ್ಯವಾಗುವುದೇ...? ಮುಂತಾದವುಗಳೇ ಆ ಚರ್ಚೆಯ ಕೆಲವು ಪ್ರಮುಖ ಅಂಶಗಳು.

ಪುಟ 2 ರಿಂದ

ಪ್ರತ್ಯೇಕ 'ಈಳಂ' ಸ್ಥಾಪನೆಗೆ ಒತ್ತಾಯಿಸುವುದು ಶ್ರೀಲಂಕ ತಮಿಳರ ಸಮಸ್ಯೆಗೆ ಪರಿಹಾರವಾಗದು.


ಸಿಪಿಐ(ಎಂ) ತಮಿಳುನಾಡು ರಾಜ್ಯ ಕಾರ್ಯದರ್ಶಿ ಮಂಡಳಿ ಕೈಗೊಂಡ ನಿರ್ಣಯ.

ಕಳೆದ ಮಾರ್ಚ್ 27, 2013 ರಂದು ತಮಿಳುನಾಡು ವಿಧಾನಸಭೆಯಲ್ಲಿ ಶ್ರೀಲಂಕಾ ತಮಿಳರ ಕುರಿತು ಕೈಗೊಂಡ ನಿರ್ಣಯದ ಬಗ್ಗೆ ಸಿಪಿಐ(ಎಂ) ತಮಿಳುನಾಡು ರಾಜ್ಯ ಕಾರ್ಯದರ್ಶಿ ಮಂಡಳಿ ಗಂಭೀರವಾಗಿ ಚರ್ಚೆ ನಡೆಸಿತು. ಶ್ರೀಲಂಕಾ ತಮಿಳರು ಎದುರಿಸುತ್ತಿರುವ ವಾಸ್ತವ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳದೆ ಸದನದಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ ಎಂಬ ಅಭಿಪ್ರಾಯವನ್ನು ಕಾರ್ಯದರ್ಶಿ ಮಂಡಳಿ ವ್ಯಕ್ತಪಡಿಸಿತು.

ತಮಿಳು ಪ್ರತ್ಯೇಕತಾವಾದಿ ಚಳವಳಿ-ಎಲ್‌ಟಿಟಿಇ ಮತ್ತು ಲಂಕಾ ಸಶಸ್ತ್ರ ಪಡೆಗಳ ನಡುವಿನ ಯುದ್ಧ ಮುಕ್ತಾಯಗೊಂಡು ನಾಲ್ಕು ವರ್ಷಗಳೇ ಸಂದಿವೆ. ಆದರೂ ಲಂಕಾ ತಮಿಳರಿಗೆ ಸೂಕ್ತ ಪರಿಹಾರ ನೀಡುವಲ್ಲಿ ಶ್ರೀಲಂಕಾ ಸರ್ಕಾರ ವಿಫಲವಾಗಿದೆ.

ಎಲ್‌ಟಿಟಿಇ ವಿರುದ್ಧದ ಸಮರದ ಅಂತಿಮ ಹಂತದ ಸಂದರ್ಭದಲ್ಲಿ ಲಂಕಾ ಸರ್ಕಾರ ಮತ್ತು ಸಶಸ್ತ್ರ ಪಡೆಗಳು ಶ್ರೀಲಂಕಾ ತಮಿಳರ ವಿರುದ್ಧ ನಡೆಸಿದ ಯುದ್ಧಾಪರಾಧಗಳಿಗೆ ಮಿತಿಯೇ ಇರಲಿಲ್ಲ. ಮಾನವ ಹಕ್ಕುಗಳನ್ನು ಉಲ್ಲಂಘಿಸಿ ಗಂಭೀರ ಪರಿಣಾಮ ಉಂಟಾಗುವ ಕೃತ್ಯಗಳನ್ನು ಇವರು ನಡೆಸಿದರು. ಯುದ್ಧದ ಕೊನೆಯ ಹಂತಗಳಲ್ಲಿ 40 ಸಾವಿರ ಅಮಾಯಕ ತಮಿಳರನ್ನು ಹತ್ಯೆ ಮಾಡಲಾಯಿತು. ಇಂತಹ ಘಟನೆಗಳು ಉಂಟುಮಾಡಿದ ಘೋರ ಪರಿಣಾಮಗಳನ್ನು ಶ್ರೀಲಂಕಾ ತಮಿಳರು ಈಗಲೂ ಅನುಭವಿಸುತ್ತಿದ್ದಾರೆ.

ಎಲ್‌ಟಿಟಿಇ ಮತ್ತು ಶ್ರೀಲಂಕಾದ ಸೇನೆ ನಡುವಿನ ಸಮರ ನಡೆಯುತ್ತಿದ್ದ 2009ರ ಸಂದರ್ಭದಲ್ಲೇ ಮಧ್ಯಪ್ರವೇಶ ಮಾಡಿ ಯುದ್ಧವನ್ನು ನಿಲ್ಲಿಸುವಂತೆ ವಿಶ್ವಸಂಸ್ಥೆ ಮತ್ತು ಭಾರತ ಸರ್ಕಾರವನ್ನು ಸಿಪಿಐ(ಎಂ) ಸ್ಪಷ್ಟವಾಗಿ ಒತ್ತಾಯಿಸಿತ್ತು. ಎಲ್‌ಟಿಟಿಇ ಮತ್ತು ಶ್ರೀಲಂಕಾ ಸರ್ಕಾರಗಳ ನಡುವೆ ಸಂಧಾನ ಮಾತುಕತೆಗಳನ್ನು ನಡೆಸಿ ಅಧಿಕಾರ ವರ್ಗಾವಣೆಗೆ ಪ್ರಯತ್ನಿಸಬೇಕು, ಯುದ್ಧದಿಂದ ಅಮಾಯಕ ತಮಿಳರ ಜೀವಗಳು ಬಲಿಯಾಗಬಾರದು ಎಂದು ಸಿಪಿಐ(ಎಂ) ಆರಂಭದಿಂದಲೂ ಒತ್ತಾಯಿಸುತ್ತಾ ಬಂದಿತ್ತು.



ಶ್ರೀಲಂಕಾದ ಜನಾಂಗೀಯ ಸಮಸ್ಯೆಗಳಿಗೆ ಸಶಸ್ತ್ರ ಸಂಘರ್ಷದ ಮೂಲಕ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ ಎಂಬುದನ್ನೂ ಪಕ್ಷ ಸ್ಪಷ್ಟಪಡಿಸಿತ್ತು. ತಮಿಳರು ವಾಸಿಸುತ್ತಿರುವ ಶ್ರೀಲಂಕಾದ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳನ್ನು ಒಂದುಗೂಡಿಸಿ ಹೆಚ್ಚಿನ 'ಸ್ವಾಯತ್ತತೆ' ನೀಡಬೇಕು ಮತ್ತು ತಮಿಳರು, ತಮಿಳು ಭಾಷೆಗೆ ಶ್ರೀಲಂಕಾದ ಎಲ್ಲ ಸ್ಥರಗಳಲ್ಲಿ ಸಮಾನ ಮಾನ್ಯತೆ ಸಿಗುವಂತೆ ಮಾಡಬೇಕು ಎಂದು ಸಿಪಿಐ(ಎಂ) ಸತತವಾಗಿ ಪ್ರತಿಪಾದಿಸುತ್ತ ಬಂದಿದೆ. 'ಸಾರ್ಕ್'ನ ಸದಸ್ಯ ರಾಷ್ಟ್ರವಾಗಿ ಮತ್ತು ಶ್ರೀಲಂಕಾದ ನೆರೆಯ ರಾಷ್ಟ್ರವಾಗಿ ಭಾರತ ರಾಜತಾಂತ್ರಿಕವಾಗಿ ಮಧ್ಯಪ್ರವೇಶಿಸಿ ಶ್ರೀಲಂಕ ತಮಿಳರ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಒಂದು ರಾಜಕೀಯ ಪರಿಹಾರ ಕಂಡುಕೊಳ್ಳಲು ಸಹಾಯ ಮಾಡಬೇಕು.

ಯುದ್ಧ ಸಂತ್ರಸ್ತರಿಗೆ ಜೀವನಾವಶ್ಯಕ ಮೂಲಭೂತ ಸೌಕರ್ಯ ನೀಡುವುದು ಮತ್ತು ಪುನರ್ವಸತಿಗೆ ಕ್ರಮ ಕೈಗೊಳ್ಳಬೇಕಾಗಿರುವುದು ಈಗಿನ ತಕ್ಷಣದ ಅಗತ್ಯವಾಗಿದೆ. ಅದರ ಜೊತೆಗೆ ತಮಿಳರು ವಾಸ ಇರುವ ಪ್ರದೇಶಗಳಿಂದ ಸಶಸ್ತ್ರ ಪಡೆಗಳನ್ನು ಹಿಂದಕ್ಕೆ ಕರೆಸಿ ಪ್ರಜಾಸತ್ತಾತ್ಮಕ ವಾತಾವರಣವನ್ನು ಸ್ಥಾಪಿಸಲು ಸೂಕ್ತ ಪ್ರಕ್ರಿಯೆಯನ್ನು ಆರಂಭಿಸಬೇಕು. ಸಿಂಹಳೀಕರಣವನ್ನು ನಿಲ್ಲಿಸಬೇಕು. ರಾಜಕೀಯ ಪರಿಹಾರ ಮತ್ತು ಅಧಿಕಾರದ ವರ್ಗಾವಣೆಯಿಂದ ಮಾತ್ರವೇ ಶ್ರೀಲಂಕಾ ತಮಿಳರು ಸಿಂಹಳೀಯರೊಂದಿಗೆ ಸಮಾನತೆಯಿಂದ ಬದುಕಲು ಸಾ ಧ್ಯ. ಅದನ್ನು ಬಿಟ್ಟು ಸೂಚಿಸಲಾಗಿರುವ ಬೇರೆ ಯಾವುದೇ ಪರಿಹಾರಕ್ರಮದಿಂದಲೂ ಶ್ರೀಲಂಕಾದ ತಮಿಳು ಜನತೆ ಅನುಭವಿಸುತ್ತಿರುವ ಸಂಕಷ್ಟಗಳಿಗೆ ಪರಿಹಾರ ದೊರೆಯುವುದು ಸಾಧ್ಯವಿಲ್ಲ.

ಶ್ರೀಲಂಕಾ ತಮಿಳರ ಸಮಸ್ಯೆಗಳನ್ನು ಪರಿಹರಿಸಲು ಪ್ರತ್ಯೇಕ 'ಈಳಂ'(ದೇಶ) ಸ್ಥಾಪನೆ ನಿಟ್ಟಿನಲ್ಲಿ 'ಜನಮತಸಂಗ್ರಹ'ಕ್ಕೆ ಒತ್ತಾಯಿಸುವುದು ಅಥವಾ ಶ್ರೀಲಂಕಾ ಸ್ನೇಹಪರ ರಾಷ್ಟ್ರವಲ್ಲ ಎಂಬ ಘೋಷಣೆಗಳ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ. ವಾಸ್ತವಾಗಿ ಇಂತಹ ಯಾವುದೇ ಪ್ರಕ್ರಿಯೆಗಳು ಪರಿಸ್ಥಿತಿಯನ್ನು ಮತ್ತಷ್ಟು ಸಂಕೀರ್ಣಗೊಳಿಸಲಿವೆ.

ಶ್ರೀಲಂಕಾದ ಪಡೆಗಳು ನಡೆಸಿದ ಯುದ್ಧ ಅಪರಾಧಗಳ ಬಗ್ಗೆ ಅಂತಾರಾಷ್ಟ್ರೀಯ ಮಟ್ಟದ ತನಿಖೆಯಾಗಬೇಕು ಎಂಬುದನ್ನು ಒತ್ತಾಯ ಮಾಡುವುದು ನಮ್ಮ ಈಗಿನ ತಕ್ಷಣದ ಕೆಲಸವಲ್ಲ. ಅದರ ಬದಲು, ಅಂತಾರಾಷ್ಟ್ರೀಯ ನ್ಯಾಯಾಧೀಶರ ತಂಡದಿಂದ ವಿಶ್ವಾಸಾರ್ಹ ತನಿಖೆ ನಡೆಸಲು ಮತ್ತು ತಪ್ಪಿತಸ್ಥರಿಗೆ ಶಿಕ್ಷೆ ಸಿಗುವಂತೆ ಮಾಡಲು ಶ್ರೀಲಂಕ ಸರ್ಕಾರವನ್ನು ಒಪ್ಪಿಸಬೇಕು.

ಜೊತೆಗೆ, ಶ್ರೀಲಂಕಾ ತಮಿಳರಿಗೆ ಅಧಿಕಾರ ವರ್ಗಾವಣೆ ಮಾಡಿ ಗರಿಷ್ಠ ಸ್ವಾಯತ್ತತೆ ನೀಡುವ ನಿಟ್ಟಿನಲ್ಲಿ ಶ್ರೀಲಂಕಾ ಸರ್ಕಾರಕ್ಕೆ ಭಾರತ ಮತ್ತು ವಿಶ್ವಸಂಸ್ಥೆ ಹೆಚ್ಚಿನ ಒತ್ತಡ ಹಾಕುವಂತೆ ನಾವು ಪ್ರಬಲವಾದ ಮತ್ತು ಒಗ್ಗಟ್ಟಿನ ಧ್ವನಿಯನ್ನು ಮೊಳಗಿಸಬೇಕು.

ಶ್ರೀಲಂಕಾ ತಮಿಳರ ಮೇಲಿನ ದೌರ್ಜನ್ಯದ ವಿರುದ್ಧ ಹಾಗೂ ತಮಿಳರಿಗೆ ಅಧಿಕಾರ ವರ್ಗಾವಣೆ ಆಗ್ರಹಿಸಿ ತಮಿಳುನಾಡಿನಲ್ಲಿ ಕೆಲ ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ಭಾವನೆಯನ್ನು ಸಿಪಿಐ(ಎಂ) ಹಂಚಿಕೊಳ್ಳಲು ಬಯಸುತ್ತದೆ. ಶ್ರೀಲಂಕಾ ತಮಿಳರ ಬೆಂಬಲಕ್ಕಾಗಿ ನಡೆಯುತ್ತಿರುವ ಹೋರಾಟವನ್ನು ಎಲ್ಲ ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಿ ಬೆಂಬಲಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರತಿಭಟನೆಯನ್ನು ಮುಕ್ತಾಯಗೊಳಿಸಿ ತಮ್ಮ ಶೈಕ್ಷಣಿಕ ವಿಷಯಗಳ ಕಡೆಗೆ ಗಮನಹರಿಸಬೇಕೆಂದು ಸಿಪಿಐ(ಎಂ) ವಿನಂತಿಸುತ್ತದೆ.

ಹಿಂದೂ ರಾಷ್ಟ್ರದ ಸೈದ್ಧಾಂತಿಕ ಯೋಜನೆ...

"ಭಾರತದ ಸಮಕಾಲೀನ ರಾಜಕಾರಣದಲ್ಲಿ ಭಾರೀ ಅಲ್ಲೋಲ ಕಲ್ಲೋಲದ ಪ್ರಕ್ರಿಯೆಯೊಂದು ಆರಂಭವಾದಂತಿದೆ. ತನ್ನ ಭವಿಷ್ಯದ ರಥವನ್ನು ಎಳೆಯುವ ಸಲುವಾಗಿ ಭಾರತೀಯ ಜನತಾ ಪಕ್ಷ ತನ್ನ ನಾಯಕತ್ವದ ಹೊಸ ತಂಡವನ್ನು ಪ್ರಕಟಿಸಿದೆ. ತನ್ನ ನಾಯಕತ್ವದ ಆಯ್ಕೆ ಯಾವುದೇ ರಾಜಕೀಯ ಪಕ್ಷದ ಆಂತರಿಕ ವಿಷಯವಾಗಿದೆ. ಆದರೆ, ಅಸಾಧ್ಯವೆಂದು ಕಂಡರೂ, ಕೇಂದ್ರ ಸರಕಾರದ ಮೇಲೆ ಹಿಡಿತ ಸಾಧಿಸಲು ತಹತಹಿಸುತ್ತಿರುವ ಬಿಜೆಪಿ ಮಾಡಿರುವ ನಾಯಕತ್ವದ ಆಯ್ಕೆ ಸಾರ್ವಜನಿಕ ವಲಯದಲ್ಲಿ ಆತಂಕದ ಅಲೆಯನ್ನು ಎಬ್ಬಿಸಿದೆ. ನಾಯಕತ್ವದ ವಿಚಾರದಲ್ಲಿ ಬಡ್ತಿ ಪಡೆದವರಲ್ಲಿ 2002ರ ಗೋಧ್ರಾ ಹತ್ಯಾಕಾಂಡದ ಕಳಂಕವನ್ನು ಮೆತ್ತಿಕೊಂಡಿರುವ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಕೂಡ ಇದ್ದಾರೆ. ಇನ್ನೊಬ್ಬ ನಾಯಕ ಹುಸಿ ಎನ್‌ಕೌಂಟರ್ ಪ್ರಕರಣದಲ್ಲಿ ಕ್ರಿಮಿನಲ್ ಆರೋಪವನ್ನು ಎದುರಿಸುತ್ತಿರುವವರು. ಮಗದೊಬ್ಬ ನಾಯಕ 2009ರ ಲೋಕಸಭೆ ಚುನಾವಣೆ ಪ್ರಚಾರದ ವೇಳೆ ಹಗೆಯಿಂದ ಕೂಡಿದ ಭಾಷಣ ಮಾಡಿದ ಆರೋಪ ಹೊತ್ತಿರುವವರು. ಅಯೋಧ್ಯೆಯಲ್ಲಿ ಬಾಬರಿ ಮಸೀದಿಯನ್ನು ಕೆಡವಿದಾಗ ಅತ್ಯುತ್ಸಾಹದಿಂದ ನಗು ಬೀರಿ ಕುಣಿದಾಡಿದ ಇನ್ನೊಬ್ಬ ಮುಖಂಡರೂ ಈ ತಂಡದಲ್ಲಿದ್ದಾರೆ. ಅವರ ಈ ಚಿತ್ರಾವಳಿಗಳನ್ನು ದೇಶಾದ್ಯಂತ ಮಾಧ್ಯಮದವರು ಬಿತ್ತರಿಸಿದ್ದರು. ಈ ರೀತಿಯಾಗಿ ಈ ಪಟ್ಟಿ ಬೆಳೆಯುತ್ತದೆ...

ಆರ್.ಎಸ್.ಎಸ್.ನ ರಾಜಕೀಯ ವಿಭಾಗವಾಗಿ ಸ್ಥಾಪನೆಗೊಂಡ ಬಿಜೆಪಿ, ಈಗ ಆರ್.ಎಸ್.ಎಸ್.ನ ತೀವ್ರ ಅಸಹನೆಯ, ದ್ವೇಷಮಯವಾದ ಫ್ಯಾಸಿಸ್ಟ್ ಧೋರಣೆಯ 'ಹಿಂದೂ ರಾಷ್ಟ್ರ' ಯೋಜನೆಯ ಅನುಷ್ಠಾನಕ್ಕೆ ಹೊರಟಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆ ಪ್ರಕ್ರಿಯೆಯಲ್ಲಿ ಅದು ಆಧುನಿಕ ಜಾತ್ಯತೀತ ಪ್ರಜಾಸತ್ತಾತ್ಮಕ ಗಣರಾಜ್ಯದ (ಅದನ್ನು ಮೋದೀಕರಣ ಎಂದು ಓದಿಕೊಳ್ಳಿ) ಪ್ರತಿಮಾಲಂಕಾರವನ್ನು ಮುಂದಿಡುತ್ತದೆ...."

(ಸೀತಾರಾಮ ಯೆಚುರಿ, ಏಪ್ರಿಲ್ 4,2013 ರ 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆಯ ಲೇಖನದಲ್ಲಿ.)

ಮಾನ್ಯ ಪ್ರಧಾನಿಗಳೇ, ಸಾರ್ವಜನಿಕ ಹೂಡಿಕೆಯೇ ಸರಿಯಾದ "ಸರಿಪಡಿಕೆ ಕಾರ್ಯತಂತ್ರ"

"ಒಂದು ಸರಿಪಡಿಕೆ ಕಾರ್ಯತಂತ್ರ ಸಮಸ್ಯೆಯ ಒಂದು ಸರಿಯಾದ ವಿಶ್ಲೇಷಣೆಯ ಆಧಾರದಲ್ಲಿಯೇ ಇರಬೇಕು" ಎನ್ನುವ ಪ್ರಧಾನ ಮಂತ್ರಿಗಳು ಆರ್ಥಿಕ ನಿಧಾನಗತಿಯನ್ನು ನಿವಾರಿಸಲು ಹೊಂದಿರುವ ಕಣ್ಣೋಟ ತಪ್ಪು ಕಾರ್ಯತಂತ್ರದ ಮೇಲೆ ನಿಂತಿದೆ. ಭಾರತದ ಕಾರ್ಪೊರೇಟ್ ಬಳಗ, ಅವರು ಉದ್ದೀಪಿಸ ಬಯಸುವ ಆಶಾವಾದದಿಂದ ಸಂತೃಪ್ತಗೊಳ್ಳುವ ಬದಲು, ಭಾರತೀಯ ಜನತೆಯ ಮತ್ತು ಆರ್ಥಿಕದ ಒಟ್ಟಾರೆ ಹಿತಾಸಕ್ತಿಯಿಂದಲ್ಲವಾದರೂ, ತನ್ನ ಸ್ವಂತ ಹಿತದೃಷ್ಟಿಯಿಂದಲಾದರೂ, ಈ ಸರಕಾರದಿಂದ ಇನ್ನಷ್ಟು ರಿಯಾಯ್ತಿಗಳನ್ನು ಕೇಳುವುದನ್ನು ನಿಲ್ಲಿಸಿ, ಅದು ವ್ಯಾಪಕ ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ವಿಸ್ತರಿಸುವಂತೆ ಆಗ್ರಹಿಸಬೇಕು.

ಸೀತಾರಾಂ ಯೆಚೂರಿ

ಪ್ರಧಾನ ಮಂತ್ರಿಗಳು ಎಪ್ರಿಲ್ 3ರ ಬೆಳಿಗ್ಗೆ ಸಿಐಐ(ಭಾರತೀಯ ಉದ್ದಿಮೆಗಳ ಮಹಾಒಕ್ಕೂಟ)ನ ವಾರ್ಷಿಕ ಸರ್ವಸದಸ್ಯ ಸಭೆ ಮತ್ತು ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ದೇಶಿಸಿ ಮಾತಾಡಿದ್ದಾರೆ. "ನನ್ನ ದೃಷ್ಟಿಯಲ್ಲಿ ನಾವು 8ಶೇ. ಬೆಳವಣಿಗೆಗೆ ಹಿಂದಿರುಗ ಬಹುದು...."ಎಂದು ಹೇಳುತ್ತ 'ಒಳಿತಿನ ಭಾವ'ವನ್ನು ಉತ್ಪತ್ತಿ ಮಾಡಲು ಯತ್ನಿಸಿದ್ದಾರೆ. ನಮ್ಮ ಸ್ವಾತಂತ್ರ್ಯೋತ್ತರ ಆರ್ಥಿಕ ಇತಿಹಾಸದಲ್ಲಿ ಒಂದು ನಿರ್ಣಾಯಕ ಘಟ್ಟವನ್ನು ಪ್ರವೇಶಿಸಿದ್ದೇವೆ ಎನ್ನುತ್ತ ಅವರು "ಭಾರತೀಯ ಉದ್ದಿಮೆ ನಮ್ಮ ದೃಢ ನಿರ್ಧಾರದಲ್ಲಿ ನಂಬಿಕೆಯಿಡಬೇಕು, ನಕಾರಾತ್ಮಕತೆಯ ಭಾವದಲ್ಲಿ ಹೂತು ಹೋಗುವುದನ್ನು ತಪ್ಪಿಸಬೇಕು" ಎಂದು ಆಗ್ರಹಿಸಿದ್ದಾರೆ. ನಿಜವಾಗಿಯೂ ಇದು "ಆಸೆಗಳು ಕುದುರೆಗಳಾಗಿದ್ದರೆ, ಭಿಕ್ಷುಕರು ಸವಾರಿ ಮಾಡುತ್ತಿದ್ದರು..." ಎಂಬ 16ನೇ ಶತಮಾನದ ಮಕ್ಕಳ ಹಾಡನ್ನು ನೆನಪಿಸುತ್ತದೆ.

"ಸರಕಾರ ಕ್ಷಿಪ್ರವಾಗಿ ಕ್ರಿಯೆಗಿಳಿಯದಿದ್ದರೆ, ಆಗಲೇ 5ಶೇ.ಕ್ಕೆ ಇಳಿದಿರುವ ನಮ್ಮ ಬೆಳವಣಿಗೆ ದರ ಅಲ್ಲಿಯೇ ಕಚ್ಚಿಕೊಂಡಿರುತ್ತದೆ ಎಂಬ ಬಗ್ಗೆ ಇಂದು ಸರ್ವ ಸಮ್ಮತಿಯಿದೆ" ಎಂದು ಹೇಳಿಕೊಳ್ಳುತ್ತ ಪ್ರಧಾನ ಮಂತ್ರಿಗಳು ಒಂದು "ವೇಗದ ಮತ್ತು ನಿರ್ಣಾಯಕ ಸರಕಾರೀ ಕ್ರಿಯೆ ಬೇಕಾಗಿದೆ" ಎಂದು ಕರೆ ನೀಡಿದರು.

ಇಂತಹ ಕ್ರಿಯೆ 'ಒಳಗೊಳ್ಳುವ ಬೆಳವಣಿಗೆ'ಯ ಮಂತ್ರವನ್ನೂ ಜಪಿಸಲೇ ಬೇಕು, ಜತೆಗೆ, ನಮ್ಮ ಪ್ರಧಾನಿಗಳ ಪ್ರಕಾರ, ಹಣಕಾಸು ಕ್ರೋಡೀಕರಣಕ್ಕೆ ಮತ್ತು ದೇಶದಲ್ಲಿ ಒಂದು ಉತ್ತಮ ಹೂಡಿಕೆಯ ವಾತಾವರಣ ನಿರ್ಮಿಸಲು ಗಮನ ಕೇಂದ್ರೀಕರಿಸಬೇಕು. ಜಾಗತಿಕ ದೃಶ್ಯದ ಹಿನ್ನೆಲೆಯಲ್ಲಿ ಇದು ಇನ್ನಷ್ಟು ಅಗತ್ಯ ಎಂದವರು ಒತ್ತಿ ಹೇಳಿದರು.

ಪ್ರೋತ್ಸಾಹಕಗಳೂ, ಸಬ್ಸಿಡಿಗಳೂ

ಹಣಕಾಸು ಕ್ರೋಡೀಕರಣ-ಕ್ಕೆ ಸಂಬಂಧಪಟ್ಟಂತೆ, ಸಬ್ಸಿಡಿಗಳನ್ನು, ಅದರಲ್ಲೂ ಇಂಧನ ಸಬ್ಸಿಡಿಗಳನ್ನು ತ' ಕ' F ಬ ದ' ಗ' ೂ ಳಿ ಸ' ಲಾ ಗಿ ದ' (ಕಡಿತಗೊಳಿಸಲಾಗಿದೆ ಎಂದು ಓದಿಕೊಳ್ಳಿ) ಎಂಬ ಹೆಮ್ಮೆ ನಮ್ಮ ಪ್ರಧಾನ ಮಂತ್ರಿಗಳಿಗೆ. ಪೆಟ್ರೋಲ್ ಬೆಲೆಗಳ ಮೇಲಿನ ಹತೋಟಿ ಈಗ ಸಂಪೂರ್ಣವಾಗಿ ಹೋಗಿದೆ, ಮುಂದಿನ ಕೆಲವು ತಿಂಗಳಲ್ಲಿ ಡೀಸೆಲ್ ಬೆಲೆಗಳ ಮೇಲಿನ ಹತೋಟಿಯೂ ಸಂಪೂರ್ಣವಾಗಿ ಹೋಗುತ್ತದೆ ಎಂದು ಅವರು ಹೇಳಿದರು. ಅಡುಗೆ ಅನಿಲ ಸಬ್ಸಿಡಿಯ ಮೇಲೆ ಮಿತಿ ಹಾಕಲಾಗಿದೆ. 'ಆಧಾರ್' ವೇದಿಕೆಯ ಮೇಲೆ ನಿಂತಿರುವ 'ನೇರ ನಗದು ವರ್ಗಾವಣೆ' ಫಲಾನುಭವಿಗಳಿಗೆ' ಮಾತ್ರ ತಲುಪಿಸುವ ಹೆಸರಿನಲ್ಲಿ) ಇನ್ನಷ್ಟು ಇಳಿಸುತ್ತದೆ ಎಂದು ಅವರು ಒತ್ತಿ ಹೇಳಿದರು.

ಸ' ಹ' ಜ ವಾ ಗಿ ಂ' ೀ ಭಾರತೀಯ ಕಾರ್ಪೊರೇಟ್ ಬಳಗಕ್ಕೆ, ಶ್ರೀಮಂತರಿಗೆ ಈ ಸರಕಾರ ಕೊಡಮಾಡಿರುವ ಅಗಾಧ ಪ್ರಮಾಣದ ತೆ-ರಿಗೆ ರಿಯಾಯ್ತಿಗಳ ಬಗ್ಗೆ ಒಂದೂ ಮಾತಿಲ್ಲ. ಕಳೆದ ಹಣಕಾಸು ವರ್ಷದಲ್ಲಿ ಈ ಬಾಬ್ತಿನಲ್ಲಿ ಅದು ಬಿಟ್ಟು ಕೊಟ್ಟ ಆದಾಯ ಸಮಸ್ತ ಹಣಕಾಸು ಕೊರತೆಗಿಂತಲೂ 50,000 ಕೋಟಿ ರೂ.ಗಳಷ್ಟು ಹೆಚ್ಚು. ಶ್ರೀಮಂತರಿಗೆ ತೆರಿಗೆ ರಿಯಾಯ್ತಿಗಳು ಬೆಳವಣಿಗೆಗೆ 'ಪ್ರೋತ್ಸಾಹಕ'ಗಳು ಎನಿಸಿಕೊಳ್ಳುತ್ತದೆ, ಅತ್ತ ಬಡವರಿಗೆ ಕೊಡುವ ರಿಯಾಯ್ತಿಗಳು 'ಸಬ್ಸಿಡಿ'ಗಳು ಆರ್ಥಿಕದ ಮೇಲೆ ಹೊರೆಗಳು ಎನಿಸಿಕೊಳ್ಳುತ್ತವೆ. ಹಣಕಾಸು ಕೊರತೆಯನ್ನು ಕಡಿತ ಮಾಡಲು ಮುಂಬರುವ ವರ್ಷಗಳಲ್ಲೂ ಇದೇ ದಿಕ್ಕಿನಲ್ಲಿ ಸಾಗುವ ಅರ್ಥ ಜನತೆಯ ಮೇಲೆ ಇನ್ನಷ್ಟು ಸಂಕಟಗಳ ಹೇರಿಕೆ.

ದೇಶ ಕಾಪಾಡಿದ ಕ್ರಮಗಳಿಗೇ ಕೊಕ್


ಸಾರ್ವಜನಿಕ ವಲಯ ಆರ್ಥಿಕದಲ್ಲಿ ಉನ್ನತ ಸ್ಥಾನ ಪಡೆಯಬೇಕೆಂಬ ನೆಹರೂವಾದಿ ಕಣ್ಣೋಟವನ್ನಂತೂ ಪ್ರಧಾನ ಮಂತ್ರಿಗಳು ತಲೆಕೆಳಗಾಗಿಸಿದ್ದಾರೆ. "ಸರಕಾರ ಬೆಳವಣಿಗೆಯ ಪ್ರಧಾನ ಚಾಲಕ ಅಲ್ಲ. ಒಂದು ಖಾಸಗೀ ವಲಯದ ನೇತೃತ್ವದ ಆರ್ಥಿಕದಲ್ಲಿ– ನಾನು ಮತ್ತೆ ಹೇಳುತ್ತಿದ್ದೇನೆ, ನಾವು 75ಶೇ. ಹೂಡಿಕೆ ಖಾಸಗೀ ವಲಯದಲ್ಲಿರುವ ಖಾಸಗೀ ವಲಯದ ನೇತೃತ್ವದ ಆರ್ಥಿಕ– ಬೆಳವಣಿಗೆಯ ಚಾಲಕ ಶಕ್ತಿ ಖಾಸಗೀ ಹೂಡಿಕೆಯೇ" ಎಂದಿದ್ದಾರೆ ಅವರು. ತನ್ನ ಸರಕಾರ ದೇಶೀ ಹೂಡಿಕೆಗಳ ಮೇಲೆ ಅಧಿಕಾರಶಾಹಿ ಅಡೆ-ತಡೆಗಳನ್ನು ನಿವಾರಿಸಲು, ಪರಿಸರ ಮಂಜೂರಾತಿಗಳನ್ನು ನೀಡಲು ಕೈಗೊಂಡ ಕ್ರಮಗಳ ರೂಪುರೇಷೆ ನೀಡುತ್ತ ಪ್ರಧಾನ ಮಂತ್ರಿಗಳು ವಿದೇಶಿ ಹೂಡಿಕೆಯನ್ನು ಆಕರ್ಷಿಸುವ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದರ ಮೇಲೆ ಒತ್ತು ನೀಡಿದರು.

"ನಾವು ವಿದೇಶಿ ಹೂಡಿಕೆಯನ್ನು ಸ್ವಾಗತಿಸುತ್ತೇವೆ ಎಂದು ಸ್ಪಷ್ಟ ಸಂಕೇತಗಳನ್ನು ನೀಡಿದ್ದೇವೆ" ಎಂದ ಅವರು ಚಿಲ್ಲರೆ ವ್ಯಾಪಾರದಲ್ಲಿ, ನಾಗರಿಕ ವಿಮಾನಯಾನದಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಎಫ್‌ಡಿಐ ಮಹತ್ವದ ಸಂಕೇತಗಳು ಎನ್ನುತ್ತ, "ನಾವು ವಿದೇಶಿ ನೇರ ಹೂಡಿಕೆ ಧೋರಣೆಯನ್ನು ಸಮಗ್ರವಾಗಿ ಪರಾಮರ್ಶಿಸಿ ಮುಂಬರುವ ತಿಂಗಳುಗಳಲ್ಲಿ ಇನ್ನೂ ಏನೇನು ಮಾಡಬಹುದು ಎಂದು ನೋಡುತ್ತಿದ್ದೇವೆ" ಎಂದು ಪ್ರಕಟಿಸಿದರು. ಹೊಸ ಪೀಳಿಗೆಯ ಸುಧಾರಣೆಗಳ ಇನ್ನೊಂದು ಸುತ್ತನ್ನೇ ಪ್ರಕಟಿಸುತ್ತ ಪ್ರಧಾನ ಮಂತ್ರಿಗಳು "ಇತರ ಸುಧಾರಣಾ ಕ್ರಮಗಳ ಬಗ್ಗೆಯೂ ಯೋಚಿಸಲಾಗುತ್ತಿದೆ. ಹಣಕಾಸು ವಲಯ ಶಾಸನಾತ್ಮಕ ಸುಧಾರಣಾ ಸಮಿತಿ ಹಲವಾರು ಶಿಫಾರಸುಗಳನ್ನು ಮಾಡಿದೆ. ಅವನ್ನು ಜಾಗರೂಕತೆಯಿಂದ ಪರಿಶೀಲಿಸಲಾಗುವುದು" ಎಂದರು. ಬ್ಯಾಂಕಿಂಗ್ ಸೇವೆಗಳಲ್ಲಿ ಭಾರತೀಯ ಉಳಿತಾಯಗಳನ್ನು ಸಂಗ್ರಹಿಸಲು ಖಾಸಗಿ ವಿದೇಶಿ ಬ್ಯಾಂಕುಗಳಿಗೆ ಅವಕಾಶ ನೀಡುವ, ಆಮೂಲಕ ಬ್ಯಾಂಕ್ ರಾಷ್ಟ್ರೀಕರಣದ ತರ್ಕವನ್ನೇ ಬುಡಮೇಲು ಮಾಡುವ ಇತ್ತೀಚಿನ ಕ್ರಮಗಳನ್ನು ಅವರು ಹಾಡಿ ಹೊಗಳಿದರು.

ಬೇರೆ ಮಾತುಗಳಲ್ಲಿ ಹೇಳುವುದಾದರೆ, 2008ರ ಜಾಗತಿಕ ಆರ್ಥಿಕ ಕುಸಿತ ಭಾರತವನ್ನು ಸಂಪೂರ್ಣವಾಗಿ ಧ್ವಂಸದಿಂದ ಕಾಪಾಡಿದ ಆ ಕ್ರಮಗಳನ್ನೇ ಈಗ ಕಳಚಿ ಹಾಕಲಾಗುತ್ತಿದೆ. ಇದು ಭಾರತವನ್ನು ಜಾಗತಿಕ ಹಣಕಾಸು ಏರುಪೇರುಗಳಿಗೆ ಇನ್ನಷ್ಟು ಒಳಪಡಿಸುತ್ತದೆ.

ತಪ್ಪು ಕಾರ್ಯತಂತ್ರ

ವಿಚಿತ್ರವೆಂದರೆ, "ಒಂದು ಸರಿಪಡಿಕೆ ಕಾರ್ಯತಂತ್ರ ಸಮಸ್ಯೆಯ ಒಂದು ಸರಿಯಾದ ವಿಶ್ಲೇಷಣೆಯ ಆಧಾರದಲ್ಲಿಯೇ ಇರಬೇಕು" ಎನ್ನುತ್ತಾರೆ ಪ್ರಧಾನ ಮಂತ್ರಿಗಳು. ಇಲ್ಲಿ, ಸಮಸ್ಯೆಯೆಂದರೆ ಆರ್ಥಿಕ ನಿಧಾನಗತಿ. ಆದರೆ ಸರಿಪಡಿಕೆ ಕಾರ್ಯತಂತ್ರ ಹೂಡಿಕೆಯ ಇಳಿಮುಖತೆಯ ಪ್ರವೃತ್ತಿಯನ್ನು ಹಿಮ್ಮೆಟ್ಟಿಸುವ ಒಂದು ತಪ್ಪು ಕಾರ್ಯತಂತ್ರದ ಮೇಲೆ ನಿಂತಿದೆ. "ಆರ್ಥಿಕದ ಬೆಳವಣಿಗೆ ದರಕ್ಕೂ ಹೂಡಿಕೆ ದರಕ್ಕೂ ಬಲವಾದ ಸಹಸಂಬಂಧ ಇದೆ" ಎನ್ನುತ್ತಾರೆ ಪ್ರಧಾನ ಮಂತ್ರಿಗಳು; ಜತೆಗೆ "2011-12 ರಲ್ಲಿ ಜಿಡಿಪಿಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆ ಎರಡರ ಪ್ರಮಾಣವೂ ಇಳಿದಿದೆ. ಹೂಡಿಕೆಯಲ್ಲಿ ಇಳಿಕೆಯನ್ನು ಹಿಮ್ಮೆಟ್ಟಿಸಲೇ ಬೇಕು" ಎಂದೂ ಅವರು ಸೇರಿಸಿದ್ದಾರೆ. ಇದನ್ನು ಸುಧಾರಣೆಗಳ ಒಂದು ಸರಣಿಯ ಮೂಲಕ, ಮೇಲೆ ಹೇಳಿದಂತಹ ವಿದೇಶಿ, ದೇಶೀ ಬಂಡವಾಳಗಳಿಗೆ ಹೆಚ್ಚಿನ ಪ್ರೋತ್ಸಾಹಕಗಳನ್ನು(ಸಬ್ಸಿಡಿಗಳೆಂದು ಓದಿಕೊಳ್ಳಿ) ರೂಪಿಸುವ ಮೂಲಕ ಮಾಡಲಾಗುವುದು ಎಂದು ಪ್ರಧಾನ ಮಂತ್ರಿಗಳು ಹೇಳುತ್ತಾರೆ.



ಆದರೆ, ಹೂಡಿಕೆಗಳು ಇಳಿಮುಖಗೊಂಡದ್ದಾದರೂ ಏಕೆ ಎಂದು ಚರ್ಚಿಸಬೇಕಾಗಿದೆ. ಕಳೆದ ಮೂರು ವರ್ಷಗಳಲ್ಲಿ ಬೃಹತ್ ಪ್ರಮಾಣದಲ್ಲಿ ರಿಂ'ಾಯಿ್ತಗ'ಳ'ನ'್ನ ನೀಡಲಾಯಿತು. ಆದರೂ ಕೈಗಾರಿಕಾ, ತಯಾರಿಕಾ ಬೆಳವಣಿಗೆ ದರ ಹೆಚ್ಚಲಿಲ್ಲ, ವಾಸ್ತವವಾಗಿ, ಒಟ್ಟಾರೆ-ಯಾಗಿ ಇಳಿದಿವೆ. ಇದಕ್ಕೆ ಕಾರಣ ವಾಸ್ತವ ಪರಿಸ್ಥಿತಿಗಳಲ್ಲೇ ಇದೆ- ಆರ್ಥಿಕದಲ್ಲಿ ಕೊಳ್ಳುವ ಶಕ್ತಿಯಿಲ್ಲದಿದ್ದರೆ, ಹೂಡಿಕೆಗಳು ತಾವಾಗಿಯೇ ಎಂದೂ ಬೆಳವಣಿಗೆ ತರಲಾರವು. ಲಾಭ ಗಳಿಸಲಿಕ್ಕೂ, ಮತ್ತು ಬೆಳವಣಿಗೆಗೂ, ಉತ್ಪಾದನೆ ಮಾಡಿದ್ದು ಮಾರಾಟವಾಗಬೇಕು

ಪುಟ 15 ಕ್ಕೆ

ಬಿಜೆಪಿ ಉತ್ತರಾಧಿಕಾರಿಯಾಗಲು ಹಪಹಪಿಸುತ್ತಿರುವ ಕಾಂಗ್ರೆಸ್ :

ನಿತ್ಯಾನಂದ ಸ್ವಾಮಿ

ಬಿಜೆಪಿಯ 5 ವರ್ಷಗಳ ದುರಾಡಳಿತದ ಲಾಭ ತನಗೇ ದಕ್ಕಲಿದೆ ಎಂದು ಕಾಂಗ್ರೆಸ್ ಹಗಲುಗನಸು ಕಾಣುತ್ತಿದೆ. ಇತ್ತೀಚೆಗೆ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅನಾಯಾಸವಾಗಿ ತನಗೆ ಲಾಭ ಆಗಿರುವುದನ್ನು ಮನಗಂಡಿರುವ ಕಾಂಗ್ರೆಸ್ ವಿಧಾನಸಭಾ ಚುನಾವಣೆಯಲ್ಲಿಯೂ ತನಗೇ ಲಾಭವಾಗಲಿದೆ ಎಂದುಕೊಂಡಿದೆ. ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ ಭಾರೀ ಸಾಧನೆಯನ್ನೇನು ಮಾಡಿಲ್ಲ. 4492 ಸ್ಥಾನಗಳಿಗೆ ಸ್ಪರ್ಧಿಸಿ ಅದು ಕೇವಲ 1960 ಸ್ಥಾನಗಳನ್ನು ಮಾತ್ರ ಗೆದ್ದಿದೆ.

ರಾಜ್ಯದ ಮತದಾರರು ಸಂದಿಗ್ಧ ಸ್ಥಿತಿಯಲ್ಲಿದ್ದಾರೆ, ಅವರ ಮುಂದೆ ಆಯ್ಕೆಯೇ ಇಲ್ಲದಂತಾಗಿದೆ. ಹಿಂದೆ ಕಾಂಗ್ರೆಸಿನ ದುರಾಡಳಿತದಿಂದ ಬೇಸತ್ತು ಮತದಾರರು ಬಿಜೆಪಿಯತ್ತ ಒಲವು ತೋರಿದರು. ಈಗ ಅದೇ ಅಸಹಾಯಕತೆಯ ಲಾಭ ಪಡೆಯಲು ಕಾಂಗ್ರೆಸ್ ಹೊಂಚುಹಾಕುತ್ತಿದೆ. ಕಾಂಗ್ರೆಸ್ ಬದಲಾಗಿಲ್ಲ. ಅದರ ಜನವಿರೋಧಿ ನೀತಿಗಳು ಬದಲಾಗಿಲ್ಲ. ಕಾಂಗ್ರೆಸ್ ಕೈಗೆ ಮತ್ತೆ ಅಧಿಕಾರ ಕೊಡುವುದೆಂದರೆ ದುರಂತದ ದಾರಿಯನ್ನು ತುಳಿಯುವುದೆಂದೇ ಆಗಲಿದೆ.

ಭ್ರಷ್ಟ ಕಾಂಗ್ರೆಸ್ ಭ್ರಷ್ಟ ಬಿಜೆಪಿಗೆ ಪರ್ಯಾಯವಾಗದು :

ಕಾಂಗ್ರೆಸ್ ಬಿಜೆಪಿಗೆ ಎಂದೂ ಪರ್ಯಾಯವಾಗದು. ಭ್ರಷ್ಟಾಚಾರದ ವಿಷಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು, ಕಾಂಗ್ರೆಸ್ ಭ್ರಷ್ಟಾಚಾರದ ಗಂಗೋತ್ರಿ, ರಾಜಕೀಯದಲ್ಲಿ ಭ್ರಷ್ಟಾಚಾರದ ಪಿಡುಗನ್ನು ಬಿತ್ತಿ ಬೆಳೆಸಿದ ಕೀರ್ತಿ ಕಾಂಗ್ರೆಸಿಗೇ ಸಲ್ಲುತ್ತದೆ.

ಬಿಜೆಪಿಯ ಭ್ರಷ್ಟಾಚಾರ ಬ್ರಹ್ಮಾಂಡ ಸ್ವರೂಪದ್ದಾದರೆ ಕಾಂಗ್ರೆಸಿನ ಭ್ರಷ್ಟಾಚಾರ ವಿರಾಟ ಸ್ವರೂಪದ್ದು. ಬಿಜೆಪಿಗೆ ಕೇಂದ್ರದ ಕಾಂಗ್ರೆಸಿನ ಭ್ರಷ್ಟಾಚಾರ ವಿರುದ್ಧ ದೃಢವಾಗಿ ದ್ವನಿ ಎತ್ತಲು ಸಾಧ್ಯವಾಗಲಿಲ್ಲ, ಏಕೆಂದ-ರೆ ಕರ್ನಾಟಕದ ಬಿಜೆಪಿ ಭ್ರಷ್ಟಾಚಾರದ ಕೆಸರಿನಲ್ಲಿ ಹೂತುಹೋಗಿತ್ತು. ಅದೇ ರೀತಿ ಕರ್ನಾಟಕದ ಬಿಜೆಪಿಯ ಭ್ರಷ್ಟಾಚಾರವನ್ನು ಪರಿಣಾಮಕಾರಿಯಾಗಿ ಬಯಲಿಗೆಳೆಯಲು ಕಾಂಗ್ರೆಸಿಗೆ ಸಾಧ್ಯವಾಗಲಿಲ್ಲ ಏಕೆಂದ-ರೆ ಕೇಂದ್ರದ ಕಾಂಗ್ರೆಸ್ ಸರ್ಕಾರ ಈ ಅವಧಿಯಲ್ಲಿ ಭ್ರಷ್ಟಾಚಾರದಲ್ಲಿ ಹಿಂದಿನ ದಾಖಲೆಗಳನ್ನೆಲ್ಲಾ ಮೀರಿಬಿಟ್ಟಿತ್ತು.

ಈ ಅವಧಿಯಲ್ಲಿ, ಕಾಂಗ್ರೆಸ್ ಅಂದ-ರೇ ಭ್ರಷ್ಟಾಚಾರ ಎನ್ನುವಷ್ಟು ಭ್ರಷ್ಟಾಚಾರ ನಡೆಯಿತು. 2ಜಿ ತರಂಗಾಂತರ ಹಗರಣದಲ್ಲಿ ಭಾರತ ಸರ್ಕಾರದ ಬೊಕ್ಕಸಕ್ಕೆ ಸುಮಾರು 1 ಲಕ್ಷ 75 ಸಾವಿರ ಕೋಟಿ ರೂ.ಗಳಷ್ಟು ನಷ್ಟ ಉಂಟು ಮಾಡಿ ಕೇಂದ್ರದ ಒಬ್ಬ ಮಂತ್ರಿ, ಒಬ್ಬ ಸಂಸತ್ ಸದಸ್ಯೆ ಮತ್ತು ಕೆಲವು ಹಿರಿಯ ಅಧಿಕಾರಿಗಳು ಜೈಲುವಾಸ ಅನುಭವಿಸಬೇಕಾಯಿತು. ಕಾಮನ್‌ವೆಲ್ತ್ ಗೇಮ್ಸ್ ಹಗರಣದಲ್ಲಿ 75 ಸಾವಿರ ಕೋಟಿ ರೂಪಾಯಿಗಳ ನಷ್ಟವಾಗಿದ್ದು ಒಬ್ಬ ಕಾಂಗ್ರೆಸ್ ಸಂಸತ್ ಸದಸ್ಯ ಜೈಲು ಕಂಡು ಬಂದಿದ್ದಾರೆ. ಇತ್ತೀಚೆಗೆ ಕಲ್ಲಿದ್ದಲು ಗಣಿಗುತ್ತಿಗೆ ಹಗರಣದಲ್ಲಿ ಸರ್ಕಾರಕ್ಕೆ 1 ಲಕ್ಷ 80 ಸಾವಿರ ಕೋಟಿ ನಷ್ಟ ಆಗಿರುವುದು ಬಯಲಿಗೆ ಬಂದಿದ್ದು ಸ್ವತ: ಪ್ರಧಾನ ಮಂತ್ರಿ ಇದರಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪ ವ್ಯಕ್ತವಾಗಿದೆ. ಇವುಗಳಲ್ಲದೆ ಈ ಅವಧಿಯಲ್ಲಿ ಬಯಲಿಗೆ ಬಂದಿದ್ದ ಆದರ್ಶ ಹೌಸಿಂಗ್ ಸೊಸೈಟಿ ಹಗರಣ, ಕೃಷ್ಣ-ಗೋದಾವರಿ ಬೇಸಿನ್ ಹಗರಣ, ಐ.ಪಿ.ಎಲ್. ಕ್ರಿಕೆಟ್ ಹಗರಣ, ಸೋನಿಯಾ ಗಾಂಧಿ ಅಳಿಯನ ಹಗರಣ, ಇಟಲಿಯಿಂದ ಹೆಲಿಕಾಪ್ಟರ್ ಖರೀದಿಯಲ್ಲಿ ನಡೆದ ಹಗರಣ, 2008ರ ರೈತರ ಸಾಲ ಮನ್ನಾದಲ್ಲಿ ನಡೆದ ಹಗರಣಗಳಲ್ಲಿ ಖಾಸಗೀ ಕಂಪೆನಿಗಳಿಗೆ ಭಾರೀ ಲಾಭ ಮಾಡಿಕೊಡಲಾಗಿದೆ. ಸರ್ಕಾರದ ಬೊಕ್ಕಸಕ್ಕೆ ಭಾರೀ ನಷ್ಟ ಉಂಟು ಮಾಡಲಾಗಿದೆ ಮಾತ್ರವಲ್ಲ ಲಾಭ ಗಿಟ್ಟಿಸಿಕೊಂಡ ಕಂಪೆನಿಗಳಿಂದ ಕೇಂದ್ರದ



ಮಂತ್ರಿಗಳು ಮತ್ತು ಕೆಲವು ಸಂಸತ್ ಸದಸ್ಯರು ಭಾರೀ ಮೊತ್ತದ 'ಕಿಕ್ ಬ್ಯಾಕ್' ಪಡೆದಿದ್ದಾರೆ. ದೇಶಾದ್ಯಂತ ನಡೆದ ಅಕ್ರಮ ಗಣಿಗಾರಿಕೆಗಳಿಗೆ ಕೇಂದ್ರ ಕಾಂಗ್ರೆಸ್ ಸರ್ಕಾರವೇ ಅನುಮತಿ ನೀಡುತ್ತಾ ಬಂದಿದೆ. ಹೀಗೆ ಭ್ರಷ್ಟಾಚಾರದಿಂದ ಮುಕ್ತವಾದ ಕಾಂಗ್ರೆಸ್ ಆಳ್ವಿಕೆ ಸಾಧ್ಯವೇ ಇಲ್ಲ ಎಂದು ಸಾಬೀತಾಗಿದೆ. ಉನ್ನತ ವಲಯದಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರವನ್ನು ತಡೆಗಟ್ಟಲು ಬಲಿಷ್ಠವಾದ ಲೋಕಪಾಲ ಸ್ಥಾಪನೆ ಮಾಡಲು ಸ್ವಿಸ್ ಬ್ಯಾಂಕುಗಳಲ್ಲಿ ಅಡಗಿಸಿಟ್ಟಿರುವ ಕಪ್ಪು ಹಣವನ್ನು ಹೊರತರಲು ಹಾಗೂ ನ್ಯಾಯಾಂಗ ಮತ್ತು ಚುನಾವಣಾ ಸುಧಾರಣೆಗಳನ್ನು ಜಾರಿಗೆ ತರಲು ಕಾಂಗ್ರೆಸ್ ಪಕ್ಷ ತಯಾರಿಲ್ಲ.

ದೇಶದ ಅವನತಿಗೆ ಕಾರಣವಾದ ಕಾಂಗ್ರೆಸ್ ನೀತಿಗಳು.

ಕಳೆದ ಎರಡು ದಶಕಗಳಿಂದ ದೇಶದಲ್ಲಿ ಹೆಚ್ಚುತ್ತಿರುವ ಉನ್ನತ ವಲಯದ ಭ್ರಷ್ಟಾಚಾರಕ್ಕೆ ಕೇಂದ್ರ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ವಿಶ್ವ ಹಣಕಾಸು ಪ್ರಯೋಜಿತ ಉದಾರೀಕರಣ ನೀತಿಗಳೇ ಕಾರಣವಾಗಿವೆ. ಉದಾರೀಕರಣದ ನೀತಿಗಳಿಗೆ ಬಿ.ಜೆ.ಪಿ.ಯ ಮೂಲಭೂತ ವಿರೋಧ ಏನೂ ಇಲ್ಲ. 1998 ರಿಂದ 2004 ರ ವರೆಗೆ ಅಧಿಕಾರದಲ್ಲಿದ್ದ ವಾಜಪೇಯಿ ನೇತೃತ್ವದ ಎನ್.ಡಿ.ಎ. ಸರ್ಕಾರ ಉದಾರೀಕರಣದ ಈ ನೀತಿಗಳನ್ನು ಕೈಬಿಡಲಿಲ್ಲ ಮಾತ್ರವಲ್ಲ ಅಮೇರಿಕದ ಹೆಚ್ಚೆಚ್ಚು ಮೆಚ್ಚುಗೆಯನ್ನು ಪಡೆಯುವ ಉದ್ದೇಶದಿಂದ ಅದೇ ಉದಾರೀಕರಣದ ನೀತಿಗಳನ್ನು ಹೆಚ್ಚು ರಭಸದಿಂದ ಜಾರಿ ಮಾಡಿದರು. ಇಂದು 'ಗುಜರಾತ್ ಮಾದರಿ' ಎಂದು ಹೇಳಿಕೊಳ್ಳುತ್ತಿರುವ ಮೋದಿ ಧೋರಣೆಗಳಾಗಲಿ, ಕರ್ನಾಟಕದಲ್ಲಿ ಕಳೆದ 5 ವರ್ಷಗಳಲ್ಲಿ ಜಾರಿಮಾಡಲಾದ ಧೋರಣೆಗಳಾಗಲಿ ಅದೇ ಕಾಂಗ್ರೆಸಿನ ಉದಾರೀಕರಣದ ಧೋರಣೆಗಳಾಗಿವೆ. ಹೀಗಾಗಿ ಕಾಂಗ್ರೆಸಿನ ಆರ್ಥಿಕ ಧೋರಣೆಗಳು ಮತ್ತು ಬಿ.ಜೆ.ಪಿ.ಯ ಆರ್ಥಿಕ ಧೋರಣೆಗಳ ನಡುವೆ ಆಯ್ಕೆಯೇ ಇಲ್ಲ.

ಹಿಂದೆಂದೂ ಕಂಡರಿಯದ ಬೆಲೆ ಏರಿಕೆ ದೇಶವನ್ನು ಇಂದು ಸುಡುತ್ತಿದೆ. ಸಹಿಸಲು ಅಸಾಧ್ಯವಾದ ಈ ಬೆಲೆಯೇರಿಕೆಗೆ ಕಾಂಗ್ರೆಸ್ ಸರ್ಕಾರದ ಉದಾರೀಕರಣ ನೀತಿಗಳೇ ಕಾರಣ. ಉದಾರೀಕರಣ ನೀತಿಗಳಿಗೆ ಅನುಗುಣವಾಗಿ ತೈಲ ಉತ್ಪನ್ನಗಳ ಮೇಲಿನ ನಿಯಂತ್ರಣವನ್ನು ತೆಗೆದು ಹಾಕಲಾಗಿದೆ. ಇದರಿಂದಾಗಿ ಪೆಟ್ರೋಲ್, ಡಿಸೆಲ್ ಮಾರಾಟ ಮಾಡುವ ಕಂಪೆನಿಗಳು ತೈಲ ದರಗಳನ್ನು ಆಗಾಗ ಹೆಚ್ಚಿಸುತ್ತವೆ. ಇದು ಇತರ ಎಲ್ಲಾ ವಸ್ತುಗಳ ಬೆಲೆ ಏರಿ-ಕೆಗೆ, ಸರಕು ಸಾಗಾಟದ ಬೆಲೆ ಏರಿಕೆಗೆ ಹಾಗೂ ಪ್ರಯಾಣದರಗಳ ಬೆಲೆ ಏರಿ-ಕೆಗೆ ಕಾರಣವಾಗುತ್ತಿದೆ. ಉದಾರೀಕರಣದ ನೀತಿಗಳ ಭಾಗವಾಗಿ ಮುಂಗಡ ವ್ಯಾಪಾರಕ್ಕೆ ಅನುಮತಿ ನೀಡುವ ಮೂಲಕ ಆಹಾರ



→

ಧಾನ್ಯಗಳ ವಹಿವಾಟುಗಳಲ್ಲಿ ಜೂಜಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ಕೆಲವೇ ದೊಡ್ಡ ವರ್ತಕರಿಗೆ ಅನುಕೂಲವಾಗುತ್ತದೆ. ಅದೇ ಸಂದರ್ಭದಲ್ಲಿ ಬೆಲೆಯೇರಿಕೆಗೆ ಕಾರಣವಾಗುತ್ತದೆ.

ಅಗತ್ಯ ವಸ್ತುಗಳ ಬೆಲೆಗಳು ನಿಯಂತ್ರಣ-ಕ್ಕೆ ನಿಲುಕದೆ ಏರುತ್ತಿರುವಾಗ ಕನಿಷ್ಠ ಜನರಿಗೆ ಕೈಗೆಟುಕುವ ದರಗಳಲ್ಲಿ ಆಹಾರ ಪದಾರ್ಥಗಳನ್ನು ಒದಗಿಸಲು, ಪಡಿತರ ವಿತರಣೆಯಲ್ಲಿ ಟಾರ್ಗೆಟ್ ಪದ್ಧತಿಯನ್ನು ಕೈಬಿಟ್ಟು ರೇಷನ್ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸಲು ಇದೇ ಕಾಂಗ್ರೆಸ್ ಸರ್ಕಾರ ಮುಂದಾಗಲಿಲ್ಲ. ಸರ್ಕಾರದ ಉಗ್ರಾಣಗಳಲ್ಲಿ ದಾಸ್ತಾನಾಗಿರುವ ಆಹಾರ ಧಾನ್ಯಗಳನ್ನು ಜನರಿಗೆ ವಿತರಿಸಿ ಇಲಿ ಹೆಗ್ಗಣಗಳ ಪಾಲಾಗುವುದನ್ನು ತಡೆಗಟ್ಟಿ ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ಈ ಮನಮೋಹನ ಸಿಂಗ್ ಸರ್ಕಾರ ಕಿವಿಮೇಲೆ ಹಾಕಿಕೊಳ್ಳಲಿಲ್ಲ. ಪ್ರತಿಸಲ ಬಜೆಟ್‌ಲ್ಲಿ ಕಾರ್ಪೊರೇಟ್ ಕಂಪೆನಿಗಳಿಗೆ ಕೋಟಿಗಟ್ಟಲೆ ರೂಪಾಯಿಗಳ ತೆರಿಗೆ ರಿಯಾಯಿತಿಗಳನ್ನು ನೀಡುತ್ತಾ ಬಂದಿರುವ ಕಾಂಗ್ರೆಸ್ ಸರ್ಕಾರ ಬೆಲೆ ಏರಿಕೆಯಿಂದ ತತ್ತರಿಸಿರುವ ದೇಶದ ಜನರ ನೆರವಿಗೆ ಮುಂದಾಗುವುದಿಲ್ಲ.. ಕೇಂದ್ರ ಕಾಂಗ್ರೆಸ್ ಸರ್ಕಾರದ ದೋರಣೆ ಹೀಗಿರುವಾಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ರಾಜ್ಯದ ಬಡವರ ರೇಷನ್ ಪ್ರಶ್ನೆ ಬಗೆಹರಿಯಬಹುದೆ? ಕಾಂಗ್ರೆಸ್ ಸರ್ಕಾರ ಆಹಾರ ಸಬ್ಸಿಡಿಯೂ ಸೇರಿದಂತೆ ಎಲ್ಲಾ ಸಬ್ಸಿಡಿಗಳನ್ನು ನೇರ ನಗದು ವರ್ಗಾವಣೆ ಯೋಜನೆಯ ಅಡಿಯಲ್ಲಿ ಫಲಾನುಭಾವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವ ಮೋಸಕ್ಕೆ ಮುಂದಾಗಿದೆ. ಸಬ್ಸಿಡಿ ಪಡೆಯುಲು ಜನ ಬ್ಯಾಂಕುಗಳಿಗೆ ಅಲೆದಾಡಿ ಸುಸ್ತು ಹೋಗುವಂತೆ ಮಾಡುವುದು ಇದರ ಹಿಂದೆ ಇರುವ ಉದ್ದೇಶವಾಗಿದೆ.

ನಿರುದ್ಯೋಗ ಸಮಸ್ಯೆಗೆ ಕಾಂಗ್ರೆಸ್ ನೀಡದು ಪರಿಹಾರ:

"ಉದ್ಯಮಗಳು ಲೀಲಾಜಾಲವಾಗಿ ಉಸಿರಾಡಬೇಕು. ಅಲ್ಲಿ ಉದ್ಯೋಗ ಸೃಷ್ಟಿಯಾಗಬೇಕು. ನಮ್ಮದು ಖಾಸಗಿ ಕ್ಷೇತ್ರ ನೇತೃತ್ವದ ಅರ್ಥವ್ಯವಸ್ಥೆ" ಎಂದು ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಭಾರತೀಯ ಕೈಗಾರಿಕಾ ಒಕ್ಕೂಟದ ವಾರ್ಷಿಕ ಸಭೆಯಲ್ಲಿ ಇತ್ತೀಚೆಗೆ ಹೇಳಿದ್ದಾರೆ. ಇದರಿಂದ ಕಾಂಗ್ರೆಸ್ ಸರ್ಕಾರದ ದೋರಣೆ ಖಾಸಗಿ ಬಂಡವಾಳಗಾತರ ಪರವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಖಾಸಗಿ ಉದ್ದಿಮೆದಾರರು ಲಾಭಕೋರರು. ಸಮಾಜ ಸೇವಕರಲ್ಲ. ನಿರುದ್ಯೋಗಿಗಳಿಗೆ ಉದ್ಯೋಗ ನೀಡುವುದಕ್ಕಾಗಿ ಅವರು ಉದ್ದಿಮೆಗಳನ್ನು ಸ್ಥಾಪಿಸುವುದಿಲ್ಲ. ಆಧುನಿಕ ಉದ್ದಿಮೆಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಬಳಕೆ ಹೆಚ್ಚಾಗಿ ಮಾಡಲಾಗುತ್ತಿದ್ದು ಅದು ಉದ್ಯೋಗಗಳ ಸೃಷ್ಟಿಗೆ ಪೂರಕವಾಗಿರುವುದಿಲ್ಲ. ಉದಾರೀಕರಣದ ನೀತಿಗಳ ಅನುಷ್ಠಾನದ ದಿನದಿಂದ ದೇಶದೊಳಗೆ ಹೂಡಿಕೆಯಾದ ಖಾಸಗಿ ಬಂಡವಾಳ ಎಷ್ಟು? ಅವರಿಗೆ ಕೊಡಲಾದ ರಿಯಾಯ್ತಿಗಳ ಮೊತ್ತವೆಷ್ಟು? ಅವರು ಸೃಷ್ಟಿಸಿದ ಉದ್ಯೋಗಗಳೆಷ್ಟು? ಎನ್ನುವ ಲೆಕ್ಕವನ್ನು ಮಾತ್ರ ಇದುವರೆಗೆ ಮನಮೋಹನ ಸಿಂಗ್ ನೀಡಿಲ್ಲ.

ಉದ್ಯೋಗಗಳನ್ನು ಒದಗಿಸುವುದು ತನ್ನ ಆದ್ಯತೆಯ ಜವಾಬ್ದಾರಿ ಎಂಬುದನ್ನು ಈ ಕಾಂಗ್ರೆಸ್ ಸರ್ಕಾರ ಒಪ್ಪಿಕೊಳ್ಳುತ್ತಿಲ್ಲ. ಸಾರ್ವಜನಿಕ ರಂಗವನ್ನು ವಿಸ್ತರಿಸಿ, ಬಲಪಡಿಸಿ, ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಿದರೆ ಮಾತ್ರ ಉದ್ಯೋಗಗಳ ಸೃಷ್ಟಿ ಸಾಧ್ಯ. ಖಾಸಗಿ ರಂಗವನ್ನು ನಂಬಿ ಕುಳಿತರೆ ಎಂದೆಂದಿಗೂ ನಿರುದ್ಯೋಗ ಸಮಸ್ಯೆ ಬಗೆಹರಿಯದು. ಮನಮೋಹನ ಸಿಂಗರಿಗೆ ಖಾಸಗಿ ರಂಗದ ಬಗ್ಗೆ ಇರುವ ಮೋಹದಿಂದಾಗಿ ಕಲಿತರಿಗೆ, ಸಾಮಾಜಿಕವಾಗಿ ಹಿಂದುಳಿದವರಿಗೆ ಉದ್ಯೋಗಗಳು ಸಿಗದಂತಾಗಿವೆ. ಅವರಲ್ಲಿ ನಿರುದ್ಯೋಗ ಹೆಚ್ಚಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಖಾಸಗಿ ರಂಗದಲ್ಲಿ ದಲಿತರಿಗೆ ಮಿಸಲಾತಿ ಜಾರಿ ಮಾಡುವುದೆ?

ಭೂಸುಧಾರಣೆಗಳಿಗೆ ತಿಲಾಂಜಲಿ ಕೊಟ್ಟಿರುವ ಕಾಂಗ್ರೆಸ್‌ನಿಂದ ನಿರುದ್ಯೋಗ ಸಮಸ್ಯೆ ಇತ್ಯರ್ಥ ಮಾಡಲು ಸಾಧ್ಯವಿಲ್ಲ. ಭೂಮಿ ಇಲ್ಲದ ಬಡವನಿಗೆ ಭೂಮಿ ಸಿಗುವಂತಾದರೆ ಅವನ ನಿರುದ್ಯೋಗ-ಕ್ಕೆ ಪರಿಹಾರ ಸಿಕ್ಕಂತೆ. ಬಡವರ ಬಗರ್ ಹುಕುಂ ಸಾಗುವಳಿ ಪ್ರಕರಣಗಳನ್ನು ಅಗೆತ್ಯವಿದ್ದರೆ ಸಂವಿಧಾನ ತಿದ್ದುಪಡಿ ಮಾಡಿ ಸಕ್ರಮಗೊಳಿಸಿದರೆ ನಿರುದ್ಯೋಗ ಕಮ್ಮಿಯಾದಂತೆ. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಎಲ್ಲ ಗ್ರಾಮಗಳಲ್ಲಿ ಜಾರಿಗೆ ತಂದರೆ ಗ್ರಾಮೀಣ ನಿರುದ್ಯೋಗ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುತ್ತದೆ. ಇದನ್ನು ಬಿಟ್ಟು ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ಕೇಂದ್ರ ಕಾಂಗ್ರೆಸ್ ಸರ್ಕಾರ ವಿದೇಶಿ ನೇರ ಬಂಡವಾಳವನ್ನು ಬರಮಾಡಿಕೊಳ್ಳಲು ತುದಿಗಾಲ ಮೇಲೆ ನಿಂತಿದೆ. ಇದರಿಂದ 4 ಕೋಟಿ ಸಣ್ಣ ವ್ಯಾಪಾರಸ್ಥರು ಮತ್ತು ಅವರ ಅವಲಂಭಿತರು ಬೀದಿ ಪಾಲಾಗುತ್ತಾರೆ ಎಂದು ಅನೇಕ ಅಧ್ಯಯನಗಳು ಖಚಿತ ಪಡಿಸಿದರೂ ಕಾಂಗ್ರೆಸ್ ಸರ್ಕಾರ ತನ್ನ ದೋರಣೆಯಿಂದ ಹಿಂದೆ ಸರಿಯಲು ತಯಾರಿಲ್ಲ.

ಕಾಂಗ್ರೆಸ್ ಆಡಳಿತದಲ್ಲಿ ಕಾರ್ಮಿಕರಿಗಿಲ್ಲ ರಕ್ಷಣೆ:


ಕಾಂಗ್ರೆಸ್ ಸರ್ಕಾರಗಳ ಚರಿತ್ರೆಯೇ ಕಾರ್ಮಿಕ ಹಕ್ಕುಗಳ ದಮನದ ಚರಿತೆ-ಯಾಗಿದೆ. ಕರ್ನಾಟಕದ ಕಾರ್ಮಿಕರು ಅದನ್ನು ಮರೆತಿರಲು ಸಾಧ್ಯವಿಲ್ಲ. ಈಗ ನವ ಉದಾರೀಕರಣದ ನೀತಿಗಳ ಅನುಷ್ಠಾನಕ್ಕೆ ಭಾರೀ ಗಮನ ನೀಡುತ್ತಿರುವ ಕಾಂಗ್ರೆಸ್ ಸರ್ಕಾರ ಕಾನೂನುಗಳನ್ನು ಸಡಿಲುಗೊಳಿಸಿ 'ಹಾಯರ್ ಆಂಡ್ ಫಾಯರ್' ನೀತಿಗಳಿಗೆ ಆದ್ಯತೆ ನೀಡುತ್ತಿದೆ. ವಿಶ್ವ ಆರ್ಥಿಕ ಬಿಕ್ಕಟ್ಟಿನ ಹೆಸರಿನಲ್ಲಿ ಕಾರ್ಪೊರೇಟ್ ಕಂಪೆನಿಗಳಿಗೆ ಸುಮಾರು 2 ಲಕ್ಷ ಕೋಟಿ ರೂಪಾಯಿಗಳ ಧನಸಹಾಯ ನೀಡಿದೆ. ಆದರೆ ಇದೇ ಬಿಕ್ಕಟ್ಟಿನಿಂದಾಗಿ ಕೆಲಸ ಕಳೆದುಕೊಂಡ 50 ಲಕ್ಷಕ್ಕೂ ಹೆಚ್ಚು ಕಾರ್ಮಿಕರಿಗೆ ಯಾವುದೇ ಪರಿಹಾರವೂ ಇಲ್ಲ, ಯಾವ ಪರ್ಯಾಯ ಉದ್ಯೋಗವನ್ನೂ ಒದಗಿಸಲಾಗಿಲ್ಲ.

ಕಾರ್ಮಿಕರು ದೀರ್ಘಕಾಲದ ಹೋರಾಟಗಳಿಂದ ಪಡೆದ ಕಾರ್ಮಿಕ ಕಾನೂನುಗಳನ್ನು ಸರ್ಕಾರವೇ ಉಲ್ಲಂಘಿಸುತ್ತದೆ. ಇದರಿಂದ ಕುಮ್ಮಕ್ಕು ಪಡೆದ ಖಾಸಗಿ ಮಾಲೀಕರು ಸಹ ಕಾರ್ಮಿಕ ಕಾನೂನುಗಳನ್ನು ಗೌರವಿಸಿ ಜಾರಿಮಾಡುವುದಿಲ್ಲ. ದೇಶದ ಒಟ್ಟು ಉತ್ಪಾದನೆಯಲ್ಲಿ ಅರ್ಧಕ್ಕಿಂತ ಹೆಚ್ಚಿನ ಪಾಲನ್ನು ನೀಡುತ್ತಿರುವ ಅಸಂಘಟಿತ ವಲಯದ ಅಸಂಖ್ಯಾತ ಕಾರ್ಮಿಕರನ್ನು ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಹೊರಗಿಟ್ಟು ಅಮಾನವೀಯ ಶೋಷಣೆಗೆ ಗುರಿ ಮಾಡಲಾಗುತ್ತಿದೆ. ಅವರಿಗೆ ವಾಸಕ್ಕೊಂದು ಮನೆಯಾಗಲಿ, ಪಡಿತರ ಚೀಟಿಯಾಗಲಿ, ಅವರ ಮಕ್ಕಳಿಗೆ ಶಿಕ್ಷಣ-ಆರೋಗ್ಯದ ಸೌಲಭ್ಯಗಳಾಗಲಿ ನೀಡಲಾಗುತ್ತಿಲ್ಲ.

ಮಾಲೀಕರ ಅನುಕೂಲಕ್ಕಾಗಿ ಕಾರ್ಮಿಕ ಕಾನೂನುಗಳನ್ನು ಬಹು ಸುಲಭವಾಗಿ ತಿದ್ದುಪಡಿ ಮಾಡಲಾಗುತ್ತಿದೆ. ಆದ-ರೆ ಕಾರ್ಮಿಕರಿಗೆ ಸಿಗಬೇಕಾದ ಬೋನಸ್, ಭವಿಷ್ಯ ನಿಧಿ ಮತ್ತು ಗ್ರಾಚುಯಿಟಿ ಮೇಲಿನ ನಿರ್ಭಂಧಗಳನ್ನು, ಮಿತಿಗಳನ್ನು ತೆಗೆದು ಹಾಕಿ ಎಂಬ ಕಾರ್ಮಿಕರ ಕೂಗು ಕೇಂದ್ರ ಕಾಂಗ್ರೆಸ್ ಸರ್ಕಾರಕ್ಕೆ ಕೇಳುವುದೇ ಇಲ್ಲ. ಜಾರಿಯಲ್ಲಿರುವ ನಿವೃತ್ತಿ, ವೇತನ ಯೋಜನೆ ತೀರಾ ನಿರಾಶಾದಾಯಕವಾಗಿದೆ. ಈಗ ಕಾರ್ಮಿಕರ ನಿವೃತ್ತಿ ವೇತನ ನಿಧಿಯನ್ನು ಶೇರು ಮಾರುಕಟ್ಟೆಗೆ ಒದಗಿಸುವ ಹುನ್ನಾರ ನಡೆದಿದೆ. ಇಂತಹ ಕಾಂಗ್ರೆಸ್ ಸರ್ಕಾರವನ್ನು ಕರ್ನಾಟಕಕ್ಕೆ ಬರಮಾಡಿಕೊಂಡು ನಮ್ಮ ಕಾಲುಗಳ ಮೇಲೆ ನಾವೇ ಕಲ್ಲು ಹಾಕಬೇಕೆ

ವಿದ್ಯಾರ್ಥಿ ಮುಖಂಡ ಸುದಿಪ್ತೋ ಗುಪ್ತಾರ ಕೊಲೆ ಖಂಡಿಸಿ ಪ್ರತಿಭಟನೆ ಸರ್ವಾಧಿಕಾರಿ ಮಮತಾ ಬ್ಯಾನರ್ಜಿ ಪ್ರತಿಕೃತಿ ದಹನ.

02.04.2013 ರಂದು ಕೊಲ್ಕತ್ತಾದಲ್ಲಿ ಎಸ್.ಎಫ್.ಐ ಸೇರಿದಂತೆ ನಾಲ್ಕು ಎಡ ವಿದ್ಯಾರ್ಥಿ ಸಂಘಟನೆಗಳ ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಬಟನೆ ನಡೆಸುತ್ತಿದ್ದ ಸಂದರ್ಭದಲ್ಲಿ ಪ್ರತಿಭಟನಾ ನಿರತರ ಮೇಲೆ ಪಶ್ಚಿಮ ಬಂಗಾಳ ಪೋಲೀಸರು ಕ್ರೂರವಾಗಿ ಲಾಠಿಚಾರ್ಜ್ ನಡೆಸಿ ಎಸ್.ಎಫ್.ಐ ರಾಜ್ಯ ಸಮಿತಿ ಸದಸ್ಯರಾದ ಕಾಮ್ರೇಡ್ ಸುದಿಪ್ತೋ ಗುಪ್ತಾ ರವರನ್ನು ಬರ್ಬರವಾಗಿ ಹತ್ಯೆ ಮಾಡಿರುವುದನ್ನು ತೀವ್ರವಾಗಿ ಖಂಡಿಸಿ ಎಸ್.ಎಫ್.ಐ ಹಾಗೂ ಡಿ.ವೈ.ಎಫ್.ಐ ಸಂಘಟನೆಗಳು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಮಮತಾ ಬ್ಯಾನರ್ಜಿಯವರ ಪ್ರತಿಕೃತಿ ದಹನ ಮಾಡಿ ಪ್ರತಿಭಟಿಸಿದರು.



ಪ್ರತಿಭಟನಾ ಸಭೆಯನ್ನುದ್ದೇಶಿಸಿ ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಹುಳ್ಳಿ ಉಮೇಶ್, ಡಿವೈಎಫ್ಐ ರಾಜ್ಯ ಕಾರ್ಯದರ್ಶಿ ರಾಜಶೇಖರ್ ಮೂರ್ತಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಲಕ್ಷ್ಮಿ.ಕೆ.ಎಸ್ ಮಾತನಾಡಿ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ಕ್ರಮ ವನ್ನು ಖಂಡಿಸಿ ಪಶ್ಚಿಮ ಬಂಗಾಳದ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿದ್ದವರನ್ನು ಬಂಧಿಸಿ ಅಮಾನುಷವಾಗಿ ಲಾಠಿಚಾರ್ಜ್ ನಡೆಸಲಾಗಿದೆ. ಪ.ಬಂಗಾಳದ ಶಿಕ್ಷಣ ಸಂಸ್ಥೆಗಳಲ್ಲಿ ಪ್ರತಿವರ್ಷ ನಡೆಯುತ್ತಿದ್ದ ವಿದ್ಯಾರ್ಥಿ ಸಂಘಗಳ ಚುನಾವಣೆಗಳನ್ನು ಎರಡು ವರ್ಷಗಳಿಗೊಮ್ಮೆ ನಡೆಸುವಂತೆ ಸರ್ಕಾರ ತೀರ್ಮಾನಿಸಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡಲು ಹೊರಟ್ಟಿತ್ತು. ಅಲ್ಲದೇ ಇತ್ತೀಚಿನ ವರ್ಷಗಳಲ್ಲಿ ನಿರಂತರವಾಗಿ ಟಿಎಂಸಿ ಗೂಂಡಾಗಳು ಶಿಕ್ಷಣ ಸಂಸ್ಥೆಗಳಲ್ಲಿ ಅರೆ ಫ್ಯಾಸಿಸ್ಟ ಧಾಳಿಗಳಮೂಲಕ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿ ಪ್ರಜಾಪ್ರಭುತ್ವ ವಿರೋಧಿಯಾಗಿ ವರ್ತಿಸುತ್ತಿದ್ದಾರೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ 1970 ರ ದಶಕದಲ್ಲಿ ಮಾಡಿದ ರೀತಿಯಲ್ಲಿ ಹೋರಾಟಗಾರರ ಮೇಲೆ ಅರೆ ಫ್ಯಾಸಿಸ್ಟ್ ಧಾಳಿಗಳನ್ನು ನಡೆಸುತ್ತಿದ್ದಾರೆ. ಈ ವಿದ್ಯಾರ್ಥಿಗಳ ಕೊಲೆಯನ್ನು ಅನಿರೀಕ್ಷಿತ ಸಾವು ಎಂದು ಬಿಂಬಿಸುತ್ತಾ ಸರ್ಕಾರದ ತಪ್ಪನ್ನು ಮುಚ್ಚಿ ಹಾಕಿಕೊಳ್ಳಲು ಹೊರಟಿದ್ದಾರೆ. ಈ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಲಾಗುತ್ತಿದೆ. ಪ.ಬಂಗಾಳದಲ್ಲಿ ಎಡ ರಂಗ ಸರ್ಕಾರ ವಿದ್ದಾಗ ವಿದ್ಯಾರ್ಥಿಗಳಿಗೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಖಾತ್ರಿಗೊಳಿಸಲಾಗಿತ್ತು. ಆದರೆ ತೃಣಮೂಲ ಕಾಂಗ್ರೆಸ್ ಸರ್ಕಾರ ಅಂತಹ ಹಕ್ಕುಗಳನ್ನು ಮೊಟಕುಗೊಳಿಸಲು ಹೊರಟಿದೆ. ಇದರ ವಿರುದ್ಧ ಪಶ್ಚಿಮ ಬಂಗಾಳ ಹಾಗೂ ಇಡೀ ದೇಶದಲ್ಲಿ ಹೋರಾಟ ತೀವ್ರಗೊಳ್ಳಲಿದೆ ಎಂದರು.

ಸಾಹಿತ್ಯ–ಚಳುವಳಿಗಳ ಸಂಬಂಧ......

ಪುಟ 5 ರಿಂದ

ಈ ಸಮಾವೇಶದಲ್ಲಿ ಇಂತಹ ಪ್ರಶ್ನೆಗಳನ್ನು ಎತ್ತಲಾಯಿತಾದರೂ ನಂತರದಲ್ಲಿ ಈ ಸಮಾವೇಶ ಯಾವುದೇ ಮತ್ತೊಂದು ಸಾಹಿತ್ಯಿಕ ಕಾರ್ಯಕ್ರಮಕ್ಕೆ ಪ್ರತಿಯಾಗಿ ಅಲ್ಲ, ಅದು ಒಂದು ನೆಪವಷ್ಟೆ ಎಂದು ಸಂಘಟಕರ ಸ್ಪಷ್ಟೀಕರಣ ಪ್ರಕಟಗೊಂಡಿತು. ಮತ್ತು ಮುಂದೆ ಹುಟ್ಟುಹಾಕಬೇಕೆಂದಿರುವ ಸಾಹಿತ್ಯಿಕ ಚಳುವಳಿ ಬಂಡಾಯ, ದಲಿತ ಮುಂತಾದ ಸಾಹಿತ್ಯಿಕ–ಸಾಂಸ್ಕೃತಿಕ ಚಳುವಳಿಗಳಿಗೆ ಬದಲಿಯಾಗಲಿ ಅಥವಾ ಪರ್ಯಾಯವಾಗಲಿ ಅಲ್ಲ... ಆಯಾ ಸಂದರ್ಭದಲ್ಲಿ ಈ ಚಳುವಳಿಗಳು ನೀಡಿರುವ ಕೊಡುಗೆಗಳನ್ನು ಗುರುತಿಸಿ ಅದರ ಆಶಯವನ್ನು ಮುಂದೊಯ್ಯುವ ಹೊಸ ಚಳುವಳಿ ಕಟ್ಟಬೇಕಿದೆ ಎಂದು ಸಮಾವೇಶದ ಆಶಯದ ಕುರಿತು ತಿಳಿಸಲಾಯಿತು.


ಜನ ಸಾಹಿತ್ಯ ಸಮಾವೇಶದಲ್ಲಿ ಚರ್ಚಿತವಾದ ಪ್ರಶ್ನೆಗಳು, ಮಂಡಿತವಾದ ವಿಚಾರಗಳು ಹಾಗೂ 'ಸಾಹಿತ್ಯ ಸಂಭ್ರಮ'ದಂತೆಯೇ 'ಜನ ಸಾಹಿತ್ಯ ಸಮಾವೇಶ'ವೂ ಕೆಲವೊಂದು ಉತ್ತರ ಬೇಡುವ ಪ್ರಶ್ನೆಗಳನ್ನು ಚರ್ಚೆಗಳನ್ನು ಹುಟ್ಟು ಹಾಕಿದೆ ಎಂದ–ರೆ ತಪ್ಪಾಗಲಾರದು. ಸಮಾವೇಶದ ನಾನಾಗೋಷ್ಠಿಗಳಲ್ಲಿ ಪಾಲ್ಗೊಂಡ ಹಲವು ಸಾಹಿತಿಗಳು, ಚಿಂತಕರು ಪ್ರಸ್ತುತ ಸಂದರ್ಭದಲ್ಲಿ ರಾಜ್ಯದಲ್ಲಿ ಚಳುವಳಿಗಳೇ ಇಲ್ಲ. ಚಳುವಳಿಗಳೆಲ್ಲ ನಿರ್ಜೀವವಾಗಿ ಹೋಗಿವೆ...ಎಂಬ ಅಭಿಪ್ರಾಯವನ್ನು ಮಂಡಿಸಿದರು. ಹೊಸ ಚಳುವಳಿಯ ಸಾಧ್ಯತೆಯನ್ನು ಕುರಿತ ಗೋಷ್ಠಿಯಲ್ಲಿ ಚರ್ಚೆಗಳು ಈ ಛಾಯೆಯಲ್ಲೇ ಇದ್ದವು. ಜಾಗತೀಕರಣ, ಕೋಮುವಾದ, ಜಾತೀಯತೆ, ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಸಮಸ್ಯೆಯ ತೀವ್ರತೆ–ಅಗಾಧತೆಗೆ ತಕ್ಕಂತೆ ಯಾವ ಪ್ರಮಾಣದಲ್ಲಿ ಚಳುವಳಿ ನಡೆಯಬೇಕಿತ್ತೋ ಆ ಪ್ರಮಾಣದಲ್ಲಿ ನಡೆದಿಲ್ಲ ಎಂದರೆ ಆ ಮಾತಿನ ಹಿಂದಿನ ಆಶಯವನ್ನು ಒಪ್ಪಬಹುದು. ಆದರೆ ನಡೆದಿರುವ, ನಡೆಯುತ್ತಿರುವ ನಾನಾ ಧಾರೆಯ ಜನ ಚಳುವಳಿಗಳನ್ನು ಕಣ್ಣು ಬಿಟ್ಟು ನೋಡದೇ, ಚಳುವಳಿಯ ಜೊತೆಗೆ ಹೆಜ್ಜೆ ಹಾಕದೇ ದೂರ ನಿಂತು ರಾಜ್ಯದಲ್ಲಿ ಚಳುವಳಿಗಳೇ ನಡೆಯುತ್ತಿಲ್ಲ... ಚಳುವಳಿಗಳೆಲ್ಲ ಸತ್ತು ಹೋಗಿವೆ ಎಂಬಂತಹ ಅಭಿಪ್ರಾಯಗಳನ್ನು ಹರಡುವುದು ಜನ ಚಳುವಳಿಯ ಬೆಳವಣಿಗೆಗೆ ಪೂರಕವಾಗಿದೆಯೇ ಎಂದು ಕೇಳಲೇ ಬೇಕಿದೆ. ಚಳುವಳಿಗಳ ನಡುವೆ ಚರ್ಚೆಯಲ್ಲಿ ಅಣ್ಣಾ ಹಜಾರೆಯವರ ಚಳುವಳಿ, ದೆಹಲಿ ಅತ್ಯಾಚಾರದ ವಿರುದ್ಧದ ಚಳುವಳಿಗಳು ಇಣುಕಿ ಹೋದವು.

ಮಡೆಸ್ನಾನ–ಮಠ ದೇಗುಲಗಳಲ್ಲಿನ ಪಂಕ್ತಿ ಬೇಧ ತಾರತಮ್ಯಗಳ ವಿರುದ್ಧ ರಾಜ್ಯದಲ್ಲಿ ಇತ್ತೀಚೆಗೆ ನಡೆದ ಹಲವು ಹಂತಗಳ ಚಳುವಳಿ ಯಾಕೆ ಯಾರ ಕಣ್ಣಿಗೂ ಬೀಳಲಿಲ್ಲ. ರಾಜ್ಯದಲ್ಲಿ ಲಕ್ಷಾಂತರ ಎಕರೆ ವ್ಯಾಪ್ತಿಯ ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ, ಸಾಗುವಳಿ ಮಾಡಿದ ಅರಣ್ಯ ಭೂಮಿಗೆ ಹಕ್ಕುಪತ್ರಕ್ಕಾಗಿ ನಡೆದ ಬಡರೈತರ ಬೃಹತ್ ಚಳುವಳಿಗಳು, ಮನೆ–ನಿವೇಶನ ರಹಿತರ ಚಳುವಳಿಗಳು, ಆಹಾರದ ಹಕ್ಕಿಗಾಗಿ–ಜನ ವಿರೋಧಿ ಆಹಾರ ಕಾಯ್ದೆ ವಿರುದ್ಧ ಆಹಾರದ ಹಕ್ಕು ಪ್ರತಿಪಾದಿಸಿ ನಡೆದ ಚಳುವಳಿಗಳು ಚಳುವಳಿಗಳೇ ಅಲ್ಲವೇನು ? ಎರಡು ಹೊತ್ತಿನ ಗಂಜಿಗೂ ಸಾಲದ ನಿಕೃಷ್ಟ ವೇತನದಲ್ಲಿ ದುಡಿಯುತ್ತಿರುವ ಅಂಗನವಾಡಿ, ಬಿಸಿಯೂಟ ನೌಕರರು, ಹಮಾಲಿ ಕಾರ್ಮಿಕರು, ಗ್ರಾಮಪಂಚಾಯತ್, ಕಟ್ಟಡ ಕಾರ್ಮಿಕರು ಕನಿಷ್ಟ ಕೂಲಿಗಾಗಿ ಚಳುವಳಿ ನಡೆಸಿ ಲಾಟಿ ಬೂಟುಗಳ ಏಟು ತಿಂದದ್ದನ್ನು ಎಷ್ಟು ಜನ ಈ ಸಾಹಿತಿಗಳು ಕನಿಷ್ಟ ಗಮನಿಸಿದ್ದಾರೆ ? ದುಡಿಯುವ ಜನರು ಬದುಕನ್ನು ಉತ್ತಮಪಡಿಸಿಕೊಳ್ಳಲು ಹೋರಾಟ ನಡೆಸಿದರೆ ಅವು ಚಳುವಳಿಯೇ ಅಲ್ಲವೇನು ? ಇವೆಲ್ಲಾ 'ಜನಪರ ಚಳುವಳಿ' ಎಂಬ 'ಕವರೇಜ್ ಏರಿಯಾ'ದಿಂದ ಹೊರಗಿರುವ ಚಟುವಟಿಕೆಯಾ ? ಜನಪರ ಚಳುವಳಿ ಅಂದರೆ ಮತ್ತೇನು ? ದೆಹಲಿಯಲ್ಲಿ ಹತ್ತು ಲಕ್ಷ ದುಡಿಯುವ ಜನ ಒಂದೆಡೆ ಸೇರಿ ಆಳುವ ಸರ್ಕಾರಕ್ಕೆ 'ಛೀ' ಅಂ–ದರೂ ಲೆಕ್ಕಕ್ಕಿಲ್ಲ. ಬ್ರೇಕಿಂಗ್ ನ್ಯೂಸು ಬಿಡಿ, ಮುಖಪುಟ ಬೇಡವೇ ಬೇಡ.. ಒಳಪುಟದ ಮೂಲೆಯಲ್ಲೂ ಮೂರು ಸಾಲಿಗೆ ಜಾಗವಿಲ್ಲ.. ಮಧ್ಯಮ ವರ್ಗದ ಜನರು ಎದ್ದು ಬಂದದ್ದು ಮಾತ್ರವೇ ಚಳುವಳಿ. ಅದೇ ಸ್ಫೋಟಕ ಸುದ್ದಿ, ಹೆಡ್ ಲೈನು. ಹಗಲು ರಾತ್ರಿ ಅದಕ್ಕೆ ಬಣ್ಣ ಬಳಿ... ಎಂಬುದು ಆಳುವ ವರ್ಗಗಳ ತೆವಲುಗಳೇ ತಿಕ್ಕಲುಗಳೇ ದೇಶದ ನೂರ ಮೂವತ್ತು ಕೋಟಿ ಜನರ ಹಿತಾಸಕ್ತಿ ಎಂದು ತಾವೂ ನಂಬಿ ಹಾಗೇ ಬಿಂಬಿಸುವುದು ನಮ್ಮ ಕಾರ್ಪೋರೇಟ್ ಮಾಧ್ಯಮದ ಧೋರಣೆ. ಅದೇ ರೀತಿ ಮಧ್ಯಮ ವರ್ಗ ಮಾಡಿದ್ದನ್ನು ಮಾತ್ರ ಕಾಣುವ ಜಾಣ ಕುರುಡು ನಮ್ಮ ಸಾಹಿತಿ, ಬರಹಗಾರರ ಮೆದುಳಿನಲ್ಲಿ ಎಲ್ಲೆಲ್ಲಿ ಅಡಗಿ ಕುಂತಿದೆ ಎಂಬ ವಿಷಯಗಳ ಬಗೆಗೆ ಈ ಗೋಷ್ಠಿಗಳಲ್ಲಿ ವಸ್ತುನಿಷ್ಟ ಆತ್ಮ ಶೋಧ ಒಂದು ಎದ್ದು ಕಾಣುವ ಅಂಶವಾಗಬೇಕಿತ್ತು.

ವರ್ತಮಾನದ ತವಕ ತಲ್ಲಣಗಳ ಕುರಿತ ಚರ್ಚೆಯಲ್ಲಿ ನಮ್ಮ ನಾಡಿನ ಕೋಟ್ಯಾಂತರ ಜನರ ಬದುಕನ್ನೇ ಬದಲಿಸ ಬಲ್ಲಂತಹ ಒಂದು ಜ್ವಲಂತ ಪ್ರಶ್ನೆಯಾದ ಭೂ ಸುಧಾರಣೆಯ ಪ್ರಶ್ನೆಯೇ ಮಾಯ !!. ನಾಗೇಶ ಹೆಗಡೆಯವರೇನೋ ಜನಪರ ಕಾಳಜಿಯ ಬರಹಗಾರರೇ. ಅನುಮಾನವಿಲ್ಲ. ಆದರೆ ಅವರು ಪರಿಸರ ಸಂರಕ್ಷಣೆಯ ನಿಟ್ಟಿನಲ್ಲಿ ಮಂಡಿಸಿದ ವಿಚಾರಗಳಲ್ಲಿ ಹಲವಾರು, ಜನರನ್ನು ಅನವಶ್ಯಕವಾಗಿ ಭೀತಿಗೊಳಿಸುವ ಅತಿರೇಕ ಅಂದರೆ ತಪ್ಪೇನಿಲ್ಲ. ಅಂತಹ ಧೋರಣೆಯನ್ನು ಇತರರು ಹಲವರು ವ್ಯಕ್ತ ಮಾಡಿದರು. ದು. ಸರಸ್ವತಿಯವರು ಪೌರ ಕಾರ್ಮಿಕರ ಪ್ರಶ್ನೆಯಾಗಿ ಪ್ರಸ್ತಾಪ ಮಾಡಿದ್ದು ಬಿಟ್ಟರೆ ಅಸಂಘಟಿತ ಕಾರ್ಮಿಕರ ಕನಿಷ್ಟ ಕೂಲಿಯ ಪ್ರಶ್ನೆ ಎಲ್ಲಿಯೂ ಚರ್ಚೆಗೆ ಬರಲಿಲ್ಲ. ತಿಂಗಳಿಗೆ ಕನಿಷ್ಟ ಹತ್ತು ಸಾವಿರ ಕನಿಷ್ಟ ಕೂಲಿ ನೀಡಬೇಕೆಂದು ರಾಜ್ಯದಲ್ಲಿ ಇತ್ತೀಚಿನ ಅವಧಿಯಲ್ಲಿ ನಡೆದ ಚಳುವಳಿಗಳೆಷ್ಟು. ? ಮೊನ್ನೆ ಮೊನ್ನೆ ಫೆಬ್ರವರಿ 20–21 ರಂದು ನಡೆದ ಎರಡು ದಿನಗಳ ಅಖಿಲ ಭಾರತ ಮುಷ್ಕರವೂ ಈ ಸಾಹಿತಿ ಚಿಂತಕರ ಗಮನ ಸೆಳೆಯಲಿಲ್ಲ ಎಂದರೆ ನಮ್ಮ ನಾಡಿನ ಕಾರ್ಪೋರೇಟ್ ಮಾಧ್ಯಮಗಳಿಗೆ ಬಡಿದಿರುವ ಜಾಹಿರಾತು ದಾಹದ ಗರ, ಟಿಆರ್‌ಪಿ ಗರದ ಬಗೆಗೆ ಮಾತನಾಡಲು ಸಾಹಿತಿಗಳಾದವರಿಗೆ ಯಾವ ನೈತಿಕ ಹಕ್ಕಿದೆ ಎಂಬ ಪ್ರಶ್ನೆ ಏಳುವುದಿಲ್ಲವೇ ? ಸಮಾವೇಶದ ಸಂದರ್ಭದಲ್ಲಿ ತೋರಿಸಲಾದ ಕೆಸರಿ ಹರವು ಅವರ ಗುಂಡ್ಯಾ ಯೋಜನೆಯ ಕುರಿತ 'ಡಾಕ್ಯುಮೆಂಟರಿ' ಸಿನಿಮಾಕ್ಕಿಂತ ಮುಖ್ಯವಾದ ಬೇರೆ ಡಾಕ್ಯುಮೆಂಟರಿ ಸಿನಿಮಾ ಯಾವುದು ಸಿಗಲಿಲ್ಲವೇ ? ಒಂದು 'ಅಣೆ ಕಟ್ಟೆ' ಕಟ್ಟಬಾರದು ಎಂಬುದೇ ಒಂದು ಪ್ರಗತಿಪರ ಸಿದ್ಧಾಂತ ಆಗುತ್ತದೆಯಾ ? ಈ ಡಾಕ್ಯುಮೆಂಟರಿಯಲ್ಲಿ ಅಣೆಕಟ್ಟೆ ಬೇಡ ಎಂಬ ಅಂಶವನ್ನು ಒಪ್ಪಿಕೊಂಡು ಯೋಚಿಸಿದರೂ ಅರಣ್ಯ ಅಂಚಿನಲ್ಲಿ, ಅರಣ್ಯದ ನಡುವೆ ಅಲ್ಲಲ್ಲಿ ಸಾಗುವಳಿ ಮಾಡಿಕೊಂಡು ಬದುಕುತ್ತಿರುವ ಬಡ ರೈತರಿಗೆ ತಮ್ಮ ಭೂಮಿಯನ್ನು ಬಿಟ್ಟುಕೊಟ್ಟು ಬಿಡಬೇಕೆಂದು ಹೇಳಿರುವ 'ಬುದ್ಧಿವಾದ', ಇಂಥದ್ದೊಂದು ಪ್ರಶ್ನೆ ಆ ರೈತರ ಬದುಕಿನಲ್ಲಿ ಸೃಷ್ಟಿಸಬಹುದಾದ ತವಕ–ತಲ್ಲಣಗಳು ಯಾಕೆ ಈ ಸಾಹಿತಿಗಳನ್ನು ಕಾಡಲಿಲ್ಲವೋ ಅರ್ಥವಾಗಲಿಲ್ಲ. ಪ್ರಾಣಿಗಳು, ಜೀವ ಸಂಕುಲ ಬದುಕ ಬೇಕು, ಉಳಿಯ ಬೇಕು ಸರಿ. ಮನುಷ್ಯರು ?

ಇತ್ತೀಚೆಗೆ ನಿಧನರಾದ ಆಫ್ರಿಕಾ ಖಂಡದ ನೈಜೀರಿಯಾ ದೇಶದ ಸಾಹಿತಿ ಚಿನುವಾ ಅಚಿಬೆ ಅವರಿಗೆ ಸಮಾವೇಶ ಶ್ರದ್ಧಾಂಜಲಿ ಸಲ್ಲಿಸಿದ್ದು ಸರಿ. ದುಷ್ಟ ಅಮೆರಿಕದ ಸಂಚುಗಳನ್ನು ಸೋಲಿಸಿ, ಜಾಗತೀಕರಣ ನೀತಿಗಳನ್ನು ಹಿಮ್ಮೆಟ್ಟಿಸಿ ದೇಶದ ಅಗಾಧ ತೈಲ ಸಂಪನ್ಮೂಲದಿಂದ ಬರುವ ಆದಾಯವನ್ನು ಜನರಿಗೆ ಶಿಕ್ಷಣ, ಆರೋಗ್ಯ ಸೌಕರ್ಯ, ಮೂಲಭೂತ ಅವಶ್ಯಕತೆಗಳನ್ನು ಒದಗಿಸಲು ಹರಿಸಿದ, ಲಕ್ಷಾಂತರ ಎಕರೆ ಭೂಮಿಯ[...] ಕಾರ್ಪೋರೇಟ್ ಕಂಪನಿಗಳಿಂದ ಕಿತ್ತುಕೊಂ[...] ಬಡರೈತರಿಗೆ ಹಂಚಿದ, ಉದಾರೀಕರ[...] ನೀತಿಗಳಿಗೆ ಪರ್ಯಾಯ ನೀತಿಗಳ[...] ಸಾಧಿಸಿ ತೋರಿಸಿದ ವೆನೆಜುವೆಲ[...] ನೇತಾರ ಚವೇಸ್‌ಗೆ ಯಾಕೆ ಸಮಾವೇ[...] ಶ್ರದ್ಧಾಂಜಲಿ ಸಲ್ಲಿಸಲಿಲ್ಲ ಎಂಬ ಪ್ರಶ್ನೆ ಸ[...] ಉತ್ತರವನ್ನು ಬಯಸುತ್ತದೆ. ಬಹುತೇ[...] ಡಾ. ಸಿದ್ದನಗೌಡ ಪಾಟೀಲರನ್ನು ಬಿಟ್[...] ಯಾರಿಗೂ ಚವೇಸ್ ಎಂಬ 'ಕ್ರಾಂತಿಕಾ[...] ನೆನಪಾಗದೇ ಹೋದರು ಎಂದರೆ ಅದ[...] ಏನು ಹೇಳುವುದು ? ಚವೇಸ್ ಚುನಾವಣೆ[...] ಮೂಲಕ ಗೆದ್ದು ಬಂದ ಮನುಷ್ಯ ಅಂ[...] ಮಡಿವಂತಿಕೆಯಾ ? ಚಳುವಳಿಗ[...] ಮುಂದಿನ ದಾರಿಯನ್ನು ಹುಡುಕು[...] ಚರ್ಚೆಯಲ್ಲಿ ಬಿ.ಎಂ. ಪುಟ್ಟಯ್ಯನವ[...] ತೆಲಂಗಾಣದ ಚರಿತ್ರೆಯನ್ನು, ಆ ಚಳುವಳಿ[...] ಧೀಮಂತಿಕೆಯನ್ನು ನೆನಪಿಸಿಕೊಂಡರ[...] ಭಾರತ ದೇಶದ ಜನಚಳುವಳಿಗಳ ಒಂ[...] ಭವ್ಯ ಇತಿಹಾಸವಾದ ಚಾರಿತ್ರಿಕ 'ತೆಲಂಗಾ[...] ವೀರ ಚಳುವಳಿಯಿಂದ ಸ್ಫೂರ್ತಿಯನ[...] ಖಂಡಿತ ಪಡೆಯಬಹುದು. ಹಾಗೆಯೇ ಅದ[...] ರಿಂದ ಹಲವಾರು ತರನಾದ ಪಾಠಗಳನ[...] ಕಲಿಯಬಹುದು. ಯಾವ ವಿಷಯದ[...] ಯಾವ ಪಾಠವನ್ನು ಕಲಿಯುವೆವು ಎಂಬುದ[...] ಬಹಳ ಮುಖ್ಯ ಪ್ರಶ್ನೆ. 21 ನೇ ಶತಮಾನ[...] ಎರಡನೇ ದಶಕದಲ್ಲಿ ನಿಂತಿರುವ ನಾವು ನ[...] ಚಳುವಳಿ ನಡೆಯ ದಿಕ್ಕು ದೆಸೆಗಳನ್ನು ಇನ[...] ಹೆಚ್ಚು ಖಚಿತ ಮಾಡಿಕೊಳ್ಳಬೇಕಾಗುತ್ತದೆ.

ರಾಜ್ಯದ ಪ್ರಗತಿಪರವಾದ ಎಲ್ಲ ಧಾರೆಗ[...] ಸಾಹಿತ್ಯಿಕ–ಸಾಂಸ್ಕೃತಿಕ ಚಳುವಳಿಯನ[...] ಒಳಗೊಂಡು, ಎಲ್ಲ ಧಾರೆ[...] ಜನಚಳುವಳಿಗಳನ್ನು ಹತ್ತಿರಕ್ಕೆ ಸೆಳೆದುಕೊಂ[...] ಕ್ರಿಯಾ ಶೀಲತೆಗೆ ಒಂದು ಸ್ಪಷ್ಟ ತಾತ್[...] ಆ ನೆಲೆಗಟ್ಟನ್ನು, ಗಟ್ಟಿ ಪ್ರಣಾಳಿಕೆಯನ[...] ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಕರ್ನಾಟಕ ಜ[...] ಸಾಹಿತ್ಯ ವೇದಿಕೆ ಇಡುವ ಹೆಜ್ಜೆಗಳು [...] ಭವಿಷ್ಯವನ್ನು ನಿರ್ಧರಿಸುತ್ತವೆ.



ಮಮತ ಬ್ಯಾನರ್ಜಿ 24.03.2012 ರಂದು ಬೆಂಗಳೂರಿಗೆ ಭೇಟಿ ನೀಡಿದಾಗ ಸುದೀಪ್ತೋ ಕೊಲೆ ಖಂಡಿಸಿ ಎಸ್.ಎಫ್.ಐ ನಿಂದ ಪ್ರತಿಭಟನೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ವಿಧಾನ ಸಭಾ ಚುನಾವಣೆಗಳು ಮತ್ತು ದುಡಿಯುವ ಜನತೆ

ಕಾಂಗ್ರೆಸ್ ಪಕ್ಷ ಈಗ ಅಧಿಕಾರ ಹಿಡಿಯುವ ಅವಕಾಶ ತನಗೇ ಅತೀ ಹೆಚ್ಚು ಎಂದು ಭಾವಿಸಿದೆ. ಆದರೆ ಇದು ಜನತೆಯ ಸೇವೆಗಾಗಿ ಅಲ್ಲ, ಸ್ವಯಂ ಸೇವೆಗಾಗಿಯೇ. ಇತ್ತೀಚಿನ ಪುರಸಭಾ ಚುನಾವಣೆಗಳಲ್ಲಿ ಭಾಜಪಾ ಮೂಲೆಗುಂಪಾಗಿದ್ದರೆ, ಅದಕ್ಕೆ ಕಾರಣ ಅವರ ಕೋಮುವಾದಿ ರಾಜಕೀಯ, ಜತೆಗೆ ಅವರ ಆರ್ಥಿಕ ನೀತಿಗಳು ಮತ್ತು ದುರಾಡಳಿತ. ಈಗ ಕಾಂಗ್ರೆಸನ್ನು ಚುನಾಯಿಸಿದರೆ ಪರಿಸ್ಥಿತಿ ಭಿನ್ನವಾಗಿರುತ್ತದೆಯೇ? ಜನ-ವಿರೋಧಿ ಧೋರಣೆಗಳಲ್ಲಿ ಭಾಜಪಾ/ಕಜಪಾ/ಬಿಎಸ್‌ಆರ್ ಪಕ್ಷ ಮತ್ತು ಕಾಂಗ್ರೆಸ್ ನಡುವೆ ಏನೇನೂ ವ್ಯತ್ಯಾಸವಿಲ್ಲ. ಎಡಪಕ್ಷಗಳು ಮಾತ್ರವೇ ಜನತೆಯ ಹಕ್ಕುಗಳ ಖಾತ್ರಿ ನೀಡಬಲ್ಲವು. ಕಳೆದ ವಿಧಾನಸಭೆಯಲ್ಲಿ ದುಡಿಯುವ ಜನಗಳ ಒಬ್ಬರಾದರೂ ಪ್ರತಿನಿಧಿ ಇರಲಿಲ್ಲ. ಕಾರ್ಮಿಕ ವರ್ಗ ಎಡಪಕ್ಷಗಳ ಚುನಾವಣಾ ನಿಧಿಗಳಿಗೆ ಉದಾರವಾಗಿ ಕೊಡುಗೆ ನೀಡಿದರೆ ಮತ್ತು ಎಡಪಕ್ಷಗಳು ಸ್ಪರ್ಧಿಸುವ ಪ್ರತಿಯೊಂದು ಕ್ಷೇತ್ರದಲ್ಲಿ ಪ್ರಚಾರ ಕಾರ್ಯದಲ್ಲಿ ಭಾಗವಹಿಸಿದರೆ, ಈ ಬಾರಿ ಕರ್ನಾಟಕದ ವಿಧಾನಸಭೆಯಲ್ಲಿ ಎಡಪ್ರಾತಿನಿಧ್ಯ ಖಂಡಿತವಾಗಿ ಇರುತ್ತದೆ.

– ವಿ. ಜೆ. ಕೆ. ನಾಯರ್

ಮುಂಬರುವ ವಿಧಾನಸಭಾ ಚುನಾವಣೆಗಳಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿರುವ ಮತದಾರರೆಂದರೆ ದುಡಿಯುವ ಜನಗಳು. ವಾಸ್ತವವಾಗಿ ದುಡಿಯುವ ಜನಗಳದ್ದೇ ಬಹುಮತ. ಆದರೂ, ಕರ್ನಾಟಕದಂತಹ ರಾಜ್ಯಗಳಲ್ಲಿ ತಮ್ಮನ್ನು ಪ್ರತಿನಿಧಿಸಲು ಅವರು ಚುನಾಯಿಸುವವರು ಎಂದೂ ಅವರ ಹಿತಗಳನ್ನು ಪ್ರತಿನಿಧಿಸುವವರಲ್ಲ. ಇದಕ್ಕೆ ಕಾರಣ, ದುಡಿಯುವ ಜನಗಳು ಒಂದು ವರ್ಗ ಆಧಾರದಲ್ಲಿ ಒಗ್ಗಟ್ಟಾಗಿಲ್ಲ, ಅತ್ತ ಕಾಂಗ್ರೆಸ್ ಆಗಲಿ, ಈಗ ಮೂರಾಗಿ ವಿಭಜನೆಗೊಂಡಿರುವ ಭಾಜಪ, ಕಜಪ ಮತ್ತು ಬಿಎಸ್‌ಆರ್ ಪಕ್ಷ, ಅಥವ ಜನತಾ ದಳ(ಎಸ್) ಕೂಡ ಅವರ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಿಲ್ಲ ಎಂಬುದೂ ಅವರ ಅರಿವಿಗೆ ಬಂದಿಲ್ಲ. ಈ ಎಲ್ಲ ಮುಖ್ಯವಾಹಿನಿಯವು ಎನಿಸಿಕೊಂಡ ಪಕ್ಷಗಳು ದುಡಿಯುವ ಜನಗಳ ಶತ್ರುಗಳ ಸೇವೆಯನ್ನು ತಮ್ಮಲ್ಲಿ ಯಾರು ಚೆನ್ನಾಗಿ ಮಾಡಬಲ್ಲೆವು ಎಂಬ ಸ್ಪರ್ಧೆಯಲ್ಲಿಯೇ ತೊಡಗಿವೆ ಎಂಬ ಅರಿವೂ ಅವರಿಗಿದ್ದಂತಿಲ್ಲ.

ಆದ್ದರಿಂದಲೇ ಈ ಪಕ್ಷಗಳು ಚುನಾವಣೆಗಳ ಸಮಯದಲ್ಲಿ ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಲು ಹಣಕಾಸು ಎತ್ತಬಲ್ಲವರನ್ನು, ತಮಗೆ ಅಪಾರ ನಿಧಿಗಳನ್ನು ನೀಡಬಲ್ಲವರನ್ನು, ನಿಜ ಹೇಳಬೇಕೆಂದರೆ ಗಣಿ ಮಾಫಿಯಾ, ಭೂಮಾಫಿಯ, ಶಿಕ್ಷಣ ಮಾಫಿಯ, ಕೋಮುವಾದಿ ಮಾಫಿಯ ಮುಂತಾದವುಗಳಿಗೆ ಸೇರಿದವರನ್ನು, ಅವರ ಭೂತ-ಭವಿಷ್ಯತ್ತುಗಳ ಪರಿವೆಯೇ ಇಲ್ಲದೆ ಸೇರಿಸಿಕೊಳ್ಳುತ್ತವೆ, ಅಥವ ಪಕ್ಷಕ್ಕೆ ಸೇರಿಸಿಕೊಳ್ಳದೆಯೇ ಅವರಿಗೆ ಟಿಕೇಟುಗಳನ್ನು ನೀಡುತ್ತವೆ.

ಕಾಂಗ್ರೆಸ್ ಪಕ್ಷ ಈಗ ಅಧಿಕಾರ ಹಿಡಿಯುವ ಅವಕಾಶ ತನಗೇ ಅತೀ ಹೆಚ್ಚು ಎಂದು ಭಾವಿಸಿದೆ. ಆದರೆ ಇದು ಜನತೆಯ ಸೇವೆಗಾಗಿ ಅಲ್ಲ, ಸ್ವಯಂ ಸೇವೆಗಾಗಿಯೇ. ಭ್ರಷ್ಟಾಚಾರ, ಹಗರಣಗಳ ಪ್ರಮಾಣ, ಪ್ರಜಾಪ್ರಭುತ್ವದ ಬಗ್ಗೆ, ಕಾನೂನಿನ ಆಳ್ವಿಕೆಯ ಬಗ್ಗೆ ಕಿಂಚಿತ್ತೂ ಗೌರವ ಇಲ್ಲದಿರುವುದು, ಇಂದಿರಾ ಗಾಂಧಿಯವರ ಗರೀಬಿ ಹಟಾವೋದಿಂದ ಹಿಡಿದು ಆಕೆಯ ಮಗ ರಾಜೀವ ಗಾಂಧಿಯ 21ನೇ ಶತಮಾನಕ್ಕೆ ನೆಗೆತದ ಈಡೇರದ ಭರವಸೆಗಳು, ನಂತರ ಸೊಸೆಯ ಅಧಿಕಾರ ತ್ಯಾಗದ ನಟನೆ, ಅಮೆರಿಕನ್ನರಿಗಷ್ಟೇ 'ಮನಮೋಹನ'ರಾಗಿರುವ, ಸ್ವತಃ ಅಮೆರಿಕನ್ನರಿಗಿಂತಲೂ ಉತ್ತಮ ಸೇವೆ ಸಲ್ಲಿಸುತ್ತಿರುವ ಮನಮೋಹನ ಸಿಂಗ್; ಅವರ ಹಗರಣಗಳಿಗೆ ಕೊನೆಯೇ ಇಲ್ಲ. ಆದರೂ, ಅವರಿಗೆ ವಿಧಾನಸಭಾ ಚುನಾವಣೆಗಳನ್ನು ಗೆದ್ದೇ ಬಿಡುವ ವಿಶ್ವಾಸ – ಏಕೆಂದರೆ ಅವರ ಕೋಮುವಾದಿ ಪ್ರತಿಸ್ಪರ್ಧಿಗಳು ಮೂರು ಅಥವ ಅದಕ್ಕೂ ಹೆಚ್ಚು ಭಾಗಗಳಾಗಿ ಒಡೆದು ಹೋಗಿದ್ದಾರಲ್ಲ! ಇತ್ತೀಚಿನ ಪುರಸಭಾ ಚುನಾವಣೆಗಳಲ್ಲಿ ಭಾಜಪವನ್ನು ಮೂಲೆಗೊತ್ತಿರುವುದು ಅವರಲ್ಲಿ ಇನ್ನಷ್ಟು ಧೈರ್ಯ ತುಂಬಿದೆ.

ಬಿಜೆಪಿಗೆ ದುರಾಡಳಿತ ಮುಳುವು

ಇನ್ನು, ಕರಾವಳಿ ಪ್ರದೇಶದಲ್ಲಿ ಸದಾ ಉತ್ತಮ ಫಲಿತಾಂಶ ಪಡೆಯುತ್ತಿದ್ದ, ಮತ್ತೆ-ಮತ್ತೆ ಕೋಮು ಘರ್ಷಣೆಗಳನ್ನು ಸೃಷ್ಟಿಸುತ್ತಾ ಬಂದು, ಕ್ರೈಸ್ತರ ಮೇಲಿನ ದಾಳಿಯಿಂದ ಆರಂಭಿಸಿ, ಮಹಿಳೆಯರು, ಅಲ್ಪಸಂಖ್ಯಾತರು, ಹೋಂಸ್ಟೇ ಮುಂತಾದ ದಾಳಿಗಳನ್ನು ನಡೆಸಿದ ಭಾಜಪಕ್ಕೆ ಈಗ ಮಂಗಳೂರು, ಉಡುಪಿ, ಮತ್ತಿತರ ಪುರಸಭೆಗಳಲ್ಲಿ ಅಧಿಕಾರ ಉಳಿಸಿಕೊಳ್ಳಲಾಗದಿರುವುದು ವಿಸ್ಮಯ ಉಂಟು ಮಾಡಿದೆ. ಯೆಡ್ಯೂರಪ್ಪನವರಿಂದಾಗಿ ಲಿಂಗಾಯತ ಸಮುದಾಯದಲ್ಲಿನ ನೆಲೆ ದುರ್ಬಲವಾಗಿದೆ ಎಂಬ ಕಾರಣವನ್ನೂ ಇಲ್ಲಿ ಕೊಡುವಂತಿಲ್ಲ. ಏಕೆಂದರೆ, ಈ ಜಿಲ್ಲೆಗಳಲ್ಲಿ ಈ ಸಮುದಾಯದವರ ಸಂಖ್ಯಾಬಲವೇ ಅಷ್ಟಾಗಿ ಇಲ್ಲ. ಅಂದರೆ ಕರಾವಳಿ ಜಿಲ್ಲೆಗಳಲ್ಲಿ ಭಾಜಪ ನಷ್ಟ ಕಜಪಾ ಅಥವ ಬಿಎಸ್‌ಆರ್ ಪಕ್ಷದಿಂದಾಗಿ ಅಲ್ಲ.

ನಿಜವಾದ ಕಾರಣ, ಅವರ ಕೋಮುವಾದಿ ರಾಜಕೀಯ, ಜತೆಗೆ ಅವರ ಆರ್ಥಿಕ ನೀತಿಗಳು- ಕೇಂದ್ರ ಮತ್ತು ರಾಜ್ಯ ಸರಕಾರದ ನಡುವೆ ಇದರಲ್ಲಿ ವ್ಯತ್ಯಾಸವೇ ಕಾಣುತ್ತಿಲ್ಲ, ಜತೆಗೆ ಭಾಜಪಾದ ದುರಾಡಳಿತ.


ಇತರೆಡೆಗಳಲ್ಲೂ ಭಾಜಪಾದ ಸ್ಥಿತಿ ಉತ್ತಮವೇನಿಲ್ಲ. ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಇತ್ಯಾದಿಗಳನ್ನು ಕಾಂಗ್ರೆಸಿಗೆ ಬಿಟ್ಟು ಕೊಟ್ಟಿದ್ದಾರೆ.

ಏನೇನೂ ವ್ಯತ್ಯಾಸವಿಲ್ಲ

ಈಗ ಕಾಂಗ್ರೆಸನ್ನು ಚುನಾಯಿಸಿದರೆ ಪರಿಸ್ಥಿತಿ ಭಿನ್ನವಾಗಿರುತ್ತದೆಯೇ? ಅವರು ಬಹಿರಂಗವಾಗಿ ಕೋಮುವಾದವನ್ನು ಪ್ರತಿಪಾದಿಸಲಿಕ್ಕಿಲ್ಲ. ಆದರೆ ಅವರು ಎಲ್ಲ ಕೋಮುವಾದಿ ಮತ್ತು ಪಾಳೆಯಗಾರೀ ಶಕ್ತಿಗಳ ಕಲಸುಮೇಲೋಗರ, ಎಲ್ಲ ಪ್ರಭಾವೀ ಸಮುದಾಯದವರ ತುಷ್ಟೀಕರಣದಲ್ಲಿ ಇವರೂ ಹಿಂದೆ ಬೀಳಲಾರರು.

ಕಾಂಗ್ರೆಸ್‌ನವರನ್ನು ಚುನಾಯಿಸಿದರೆ ಅವರು ಕೇಂದ್ರ ಸರಕಾರ ಅನುಸರಿಸುತ್ತಿರುವ, ಅಥವ ರಾಜ್ಯದಲ್ಲಿ ಭಾಜಪಾ ಸರಕಾರ ಅನುಸರಿಸಿರುವ ಧೋರಣೆಗಳನ್ನೇ ಅನುಸರಿಸುತ್ತಾರೆ. ಜನ-ವಿರೋಧಿ ಧೋರಣೆಗಳಲ್ಲಿ ಭಾಜಪಾ/ಕಜಪಾ/ಬಿಎಸ್‌ಆರ್ ಪಕ್ಷ ಮತ್ತು ಭಾರತ ರಾಷ್ಟ್ರೀಯ ಕಾಂಗ್ರೆಸ್ ನಡುವೆ ಏನೇನೂ ವ್ಯತ್ಯಾಸವಿಲ್ಲ.

ಮತ್ತು ಜನತಾ ದಳ ರಾಮಕೃಷ್ಣ ಹೆಗ್ಡೆ ಅದರ ಮುಖಂಡರಾಗಿದ್ದಾಗ ಒಂದು



ಮುಖ್ಯವಾಹಿನಿಯ ಪಕ್ಷವಾಗಿತ್ತು. ಈಗ ಅದು ಒಂದು ಕುಟುಂಬ, ಒಂದು ಜಾತಿ ಸಮುದಾಯದ ಪಕ್ಷದ ಮಟ್ಟಕ್ಕೆ ಇಳಿದಿದೆ, ಒಂದು ಅಪವಾದವೆಂದರೆ, ಬೇರೆ ಜಾತಿಗಳ ಜನಗಳಿಗೂ ಅವಕಾಶವಿದೆ, ಆದರೆ ಉನ್ನತ ಮುಖಂಡರಾಗಿ ಅಲ್ಲ, ಹಣಬಲ, ಭುಜಬಲ ಒಟ್ಟು ಹಾಕುವವರಾಗಿ. ಕಾಂಗ್ರೆಸ್ ಮತ್ತು ಕೋಮುವಾದಿಗಳ ನಡವಳಿಕೆಗಳೇ ಇವರದೂ ಕೂಡ.

ಅರಿವಿನ ಕೊರತೆ

ದುಡಿಯುವ ಜನಗಳು ಜಾತಿ, ಕೋಮು, ಪ್ರದೇಶ, ಸ್ಥಳೀಯತೆ ಮುಂತಾದವುಗಳ ಆಧಾರದಲ್ಲಿ ಒಡೆದು ಹೋಗಿರುವುದರಿಂದ, ಈ ಎಲ್ಲ ಪಕ್ಷಗಳು ಬಿಸಾಕುವ ಹಣ ಮತ್ತು ಇತರ ಪ್ರಲೋಭನೆಗಳ ತುಣುಕುಗಳ ಹಿಂದೆ ಹೋಗುವುದರಿಂದ ಅವರಿಗೆ ಹೆಚ್ಚಿನ ಅವಕಾಶವಾಗಿದೆ. ದುಡಿಯುವ ಜನತೆಯಲ್ಲಿನ ಯುವಜನ ಚುನಾವಣಾ ಕೆಲಸವೆಂಬ ಅತಿ ದೊಡ್ಡ ವ್ಯವಹಾರ ನಡೆಸುವವರ ಕೆಲಸಗಾರರಾಗಿ ದುಡಿಯುತ್ತಾ-ರೆ. ಮಹಿಳೆಯರನ್ನು ಸೀರೆ, ಕುಂಕುಮ, ನತ್ತು ಇತ್ಯಾದಿಗಳಿಂದ ತುಷ್ಟೀಕರಿಸಲಾಗುತ್ತದೆ.

ತಮ್ಮ ಆಹಾರಕ್ಕಾಗಿ, ಆವಶ್ಯಕ ವಸ್ತುಗಳ ಬೆಲೆಗಳನ್ನು ಇಳಿಸುವುದಕ್ಕಾಗಿ, ಮನೆ-ನಿವೇಶನಗಳಿಗಾಗಿ, ಇತರ ಸೌಲಭ್ಯಗಳಿಗಾಗಿ ಹೋರಾಡುವವರು ಎಡಪಕ್ಷಗಳು ಮಾತ್ರ ಎಂಬುದನ್ನು ಅರಿಯುವ ಸಾಮರ್ಥ್ಯದ ಕೊರತೆಯೂ ದುಡಿಯುವ ಜನಗಳಲ್ಲಿದೆ.

ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಆಂದೋಲನ ದುರ್ಬಲವಾಗಿರುವುದರಿಂದ, ಎಡಪಕ್ಷಗಳು ಮಾತ್ರವೇ ನಿಜವಾದ ಪರ್ಯಾಯ, ಅವರು ಮಾತ್ರವೇ ದುಡಿಯುವ ಜನಗಳ ಹಿತಗಳನ್ನು ಸಾಧಿಸಬಲ್ಲರು ಎಂಬುದನ್ನು ದುಡಿಯುವ ಜನಗಳು ಕಾಣುತ್ತಿಲ್ಲ.

ನಾವು ಕನಿಷ್ಟ ಕೂಲಿ ಮತ್ತು ಸಂಬಂಧಪಟ್ಟ ಪ್ರಶ್ನೆಗಳ ಮೇಲೆ ಹೋರಾಟವನ್ನು ಸಪ್ಟಂಬರ್ 2009ರ ಹೋರಾಟದ ಮಾದರಿಯಲ್ಲಿ, ಆಹಾರ ಭದ್ರತೆಯ ಆಂದೋಲನವನ್ನು 2011ರ ಹೋರಾಟದಂತೆ ಮುಂದೊಯ್ಯುತ್ತಿದ್ದರೆ, ಕರೆ ಕೊಟ್ಟಾಗ ಮತಪ್ರದರ್ಶನಗಳನ್ನು ನಡೆಸುವುದಕ್ಕಷ್ಟೇ ಸೀಮಿತಗೊಳಿಸಿಕೊಂಡಿರದಿದ್ದರೆ, ಜನತೆ, ಅದರಲ್ಲೂ ದುಡಿಯುವ ಜನಗಳು ತಮ್ಮದೇ ವರ್ಗಹೋರಾಟಗಳಿಂದಲೇ, ದುಡಿಯುವ ವರ್ಗದ ಧೋರಣೆಗಳೇನು, ತದ್ವಿರುದ್ಧವಾಗಿ ಬಂಡವಾಳಶಾಹಿ-ಭೂಮಾಲಕ ಧೋರಣೆಗಳೇನು ಎಂದು ವ್ಯತ್ಯಾಸ ಕಾಣಲು ಸಾಧ್ಯವಾಗುವಂತೆ ರಾಜಕೀಯಕರಣಗೊಂಡಿದ್ದರೆ, ಮುಖ್ಯಧಾರೆಯ ಬಂಡವಾಳಶಾಹಿ-ಭೂಮಾಲಕ ಪಕ್ಷಗಳ ಆಟವನ್ನು ಅರಿತು ಕೊಳ್ಳುತ್ತಿದ್ದರು.

ಆಳುವ ವರ್ಗಗಳ ಹಿತೈಷಿಗಳು

ಯೆಡ್ಯೂರಪ್ಪ ಇದುವರೆಗೂ ಕೆ.ಜಿ.ಗೆ ರೂ.2/- ನಲ್ಲಿ ಆಹಾರಧಾನ್ಯಗಳನ್ನು ಒದಗಿಸಿಲ್ಲವೇಕೆ? ಡಿಸೆಂಬರ್ 3, 2010ರಂದು ಸಿಐಟಿಯು ಮುಖಂಡರೊಂದಿಗೆ ನಡೆಸಿದ ಸಭೆಯಲ್ಲಿ ಕೊಟ್ಟ ಭರವಸೆಯಂತೆ ಕನಿಷ್ಟ ಕೂಲಿಗಳನ್ನು ಹೆಚ್ಚಿಸಲಿಲ್ಲವೇಕೆ? ಯೆಡ್ಯೂರಪ್ಪ/ಜಗದೀಶ ಶೆಟ್ಟರ್‌ರವರ ಕಾರ್ಮಿಕ ಮಂತ್ರಿಗಳು ಶಾಸನಾತ್ಮಕ ಸಂಸ್ಥೆಗಳಿಂದ, ವಿಶೇಷವಾಗಿ ಕಾಂಟ್ರಾಕ್ಟ್ ಲೇಬರ್ ನಿರ್ಮೂಲನಾ ಮಂಡಳಿಯಿಂದ ಸಿಐಟಿಯು ಪ್ರತಿನಿಧಿಗಳನ್ನು ಉದ್ದೇಶಪೂರ್ವಕವಾಗಿಯೇ ಹೊರಗಿಟ್ಟಿದ್ದೇಕೆ? ಏಕೆ? ಏಕೆ? ಏಕೆ? ದುಡಿಯುವ ಜನಗಳನ್ನು ಪ್ರತಿಯೊಂದು ರಂಗದಲ್ಲೂ ಉಪೇಕ್ಷಿಸಲಾಗುತ್ತಿದೆ. ಬಚ್ಚೇಗೌಡರು ನೇಮಿಸಿದ ಶಾಸನಾತ್ಮಕ ಮಂಡಳಿಗಳಲ್ಲಿ ಮಾತ್ರವಲ್ಲ, ಕೇಂದ್ರ

ಪುಟ 14 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಖಾಸಗಿ ವಿ.ವಿ. ಗಳ ಸ್ಥಾಪನೆ

ಪುಟ 2 ರಿಂದ

ಸರ್ಟಿಫಿಕೆಟ್‌ಗಳನ್ನು ಖರೀದಿಸುವ ಕೇಂದ್ರಗಳನ್ನಾಗಿಸಲು ಹೊರಟಂತಿದೆ.

ಸೆಕ್ಷನ್-7 ಅಸಮರ್ಥರಿಗೆ ಎಲ್ಲಾ ಕೋರ್ಸ್‌ಗಳ ಪ್ರಾರಂಭಕ್ಕೆ ಅವಕಾಶ : ಖಾಸಗಿ ವಿವಿಗಳ ಮಾಡಲು ಹೊರಟಿರುವ ಕೆಲ ಶಿಕ್ಷಣ ಸಂಸ್ಥೆಗಳು ತಾಂತ್ರಿಕ, ಕೆಲ ಶಿಕ್ಷಣ ಸಂಸ್ಥೆಗಳು ಮೆಡಿಕಲ್, ಇನ್ನು ಕೆಲವು ಶಿಕ್ಷಣ ಸಂಸ್ಥೆಗಳು ವ್ಯವಹಾರದ ಕೋರ್ಸ್‌ಗಳನ್ನು ಮಾತ್ರ ಬೋಧಿಸುತ್ತಿವೆ. ಆದರೆ, ಸದರಿ ಖಾಸಗಿ ವಿವಿ ಮಸೂದೆಗಳ ಧ್ಯೇಯೋದ್ದೇಶ ಮತ್ತು ಭವಿಷ್ಯದ ದೃಷ್ಟಿಯಲ್ಲಿ "ಎಲ್ಲಾ ಬಗೆಯ ಕೋರ್ಸ್‌ಗಳನ್ನು ಪ್ರಾರಂಭಿಸಲು ಅವಕಾಶ ಕಲ್ಪಿಸಲಾಗುತ್ತಿದೆ.

ಉದಾ: - ವೆಲ್ಲೂರು ತಾಂತ್ರಿಕ ಕಾಲೇಜು ಕೇವಲ ಇಂಜನಿಯರಿಂಗ್ ಕೋರ್ಸ್‌ಗಳನ್ನು ಬೋಧಿಸುತ್ತಿದೆ. ಆದರೆ, ಇನ್ನು ಮುಂದೆ ಅದು, ವೈದ್ಯಕೀಯ, ಕಲೆ, ಕೃಷಿ, ಔಷಧ, ವ್ಯವಸ್ಥಾಪನ್ ಆಡಳಿತ, ವ್ಯವಹಾರ, ಶಿಕ್ಷಣ ಇತ್ಯಾದಿ ಎಲ್ಲಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗುತ್ತಿದೆ. ಒಂದು ಕೋರ್ಸಿನ ವಿದ್ಯಾರ್ಥಿಗಳಿಗೆ ಮೂಲಸೌಲಭ್ಯ, ಗುಣಮಟ್ಟದ ಶಿಕ್ಷಣ ನೀಡಲಿಕ್ಕಾಗದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ನೀಡಲಾಗುತ್ತಿರುವ ಈ ಅವಕಾಶ "ನೀರು ಇಳಿಯದ ಗಂಟಲೊಳಗೆ ಕಡುಬು ತುರುಕಿದಂತೆ" ಎನ್ನುವಂತಾಗುತ್ತಿದೆ. ಇದು ಸರ್ಕಾರದ ಬೇಜವಾಬ್ದಾರಿ, ಬೌದ್ಧಿಕ ದಿವಾಳಿತನ ತೋರಿಸುತ್ತದೆ.

ಅಮೃತ ಸಿಂಚನ ಆಧ್ಯಾತ್ಮಿಕ ವಿವಿ ಸೆಕ್ಷನ್ 07 : ಹಿಂದೆ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಜ್ಯೋತಿಷ್ಯ ಶಾಸ್ತ್ರವನ್ನು ಶಾಲಾ ಪಠ್ಯದಲ್ಲಿ ಬೋಧಿಸಲು ಹೊರಟಾಗ ತೀವ್ರ ವಿರೋಧದಿಂದ ಹಿಂದೆ ಸರಿದಿತ್ತು. ಈಗ ರಾಜ್ಯ ಬಿಜೆಪಿ ಸರ್ಕಾರ "ಅಮೃತ ಸಿಂಚನ ಆಧ್ಯಾತ್ಮಿಕ ಖಾಸಗಿ ವಿವಿ" ಸ್ಥಾಪಿಸಲು ಹೊರಟಿರುವುದು ಸಿಂಧುವಲ್ಲ. ಎಲ್ಲಾ ಖಾಸಗಿ ವಿವಿಗಳಂತೆ ದಿವಾಳಿಕೋರ ಅಂಶಗಳ ಜೊತೆ ಈ ವಿವಿಯಲ್ಲಿ ಬೋಧಿಸಲು ಹೊರಟಿರುವ ಕೋರ್ಸ್‌ಗಳು ಹೆಚ್ಚು ಅಪಾಯಕಾರಿ, ಮೌಢ್ಯ-ಅಂಧಕಾರವನ್ನು ಬಂಡವಾಳವಾಗಿಸಿ ಲಾಭ ಮಾಡಲು ಹೊರಟಂತಿದೆ. "ಮಂತ್ರ-ತಂತ್ರ, ಜೋತಿಷ್ಯ ಶಾಸ್ತ್ರ, ವಾಸ್ತು, ಧ್ಯಾನ, ಆಧ್ಯಾತ್ಮಿಕ ಉಪಶಮನ, ಯೋಗ, ಮಣಿಗಳು, ಹರಳುಗಳು, ಮುದ್ರೆಗಳು ಅಷ್ಟೇ ಅಲ್ಲದೇ, ನಾಯಿ ಸಾಕಲು ಕೋರ್ಸ್ ಜೊತೆಗೆ "ಪರಮಾತ್ಮನೊಂದಿಗೆ ಲೀನವಾಗುವುದು ಹೇಗೆ?" ಕುರಿತು ಕೋರ್ಸ್ ಪ್ರಾರಂಭಿಸಲಾಗುತ್ತದೆಯಂತೆ. ಸರ್ಕಾರದ ಹಿಡಿತವೇ ಇಲ್ಲದ ಈ ವಿವಿಗಳು ಅಪಾಯಕಾರಿ. ಅನಗತ್ಯ, ಪ್ರತಿಗಾಮಿ ಕೋರ್ಸ್‌ಗಳನ್ನು ಪ್ರಾರಂಭಿಸಿದರೆ ಸಮಾಜದ ಪ್ರಗತಿ ಯಾವ ದಿಕ್ಕಿನತ್ತ ಸಾಗಲಿದೆ ಎಂಬುದನ್ನು ಚರ್ಚಿಸಬೇಕಿದೆ.

ಸೆಕ್ಷನ್-9 ರಾಜ್ಯದವರಿಗೆ ಕೇವಲ ಶೇ 40ರಷ್ಟು ಮಾತ್ರ ಪ್ರವೇಶ : ರಾಜ್ಯದಲ್ಲಿ ರಿಯಾಯಿತಿಯಲ್ಲಿ ಭೂಮಿ, ನೀರು, ತೆರಿಗೆ ವಿನಾಯಿತಿ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ 'ಕರ್ನಾಟಕ ರಾಜ್ಯದವರಿಗೆ ಕೇವಲ ಶೇ 40 ಮಾತ್ರ ಸೀಟು ಪ್ರವೇಶ ನೀಡಲಿವೆ'. ಇನ್ನುಳಿದ ಶೇ 60 ಸೀಟುಗಳನ್ನು ಹೊರರಾಜ್ಯದ ಅಥವಾ ಹೊರರಾಷ್ಟ್ರದ ವಿದ್ಯಾರ್ಥಿಗಳಿಗೆ ಮಾರಿಕೊಳ್ಳಲಿವೆ. ಇದು ರಾಜ್ಯದ ವಿದ್ಯಾರ್ಥಿಗಳ ಉನ್ನತ ಶಿಕ್ಷಣ ಪ್ರವೇಶವನ್ನು ಹೆಚ್ಚಿಸಿದಂತಾಗುವುದಿಲ್ಲ. ಬದಲಾಗಿ ರಾಜ್ಯವನ್ನು ಶಿಕ್ಷಣ ಮಾರಾಟದ ಕೇಂದ್ರವನ್ನಾಗಿಸಲಿದೆ.



ರಾಜ್ಯದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿರುವವರ ಪ್ರಮಾಣ ಶೇ 11.5 ಆಗಿದ್ದು, ಖಾಸಗಿ ವಿವಿಗಳ ಸ್ಥಾಪನೆ ರಾಜ್ಯದವರ ಪ್ರವೇಶ ಪ್ರಮಾಣ ಹೆಚ್ಚಿಸುವುದಿಲ್ಲ. ಏಕೆಂದರೆ ಈಗಾಗಲೇ ಸರ್ಕಾರಿ ವಿವಿಗಳಲ್ಲಿಯೇ ವಿದ್ಯಾರ್ಥಿಗಳ ಪ್ರವೇಶ ಕಡಿಮೆಯಾಗುತ್ತಿದೆ. ಅನೇಕ ವಿಭಾಗಗಳಲ್ಲಿ ಸೀಟು ಖಾಲಿ ಉಳಿಯುತ್ತಿವೆ. ಸರ್ಕಾರಿ ವಿವಿಗಳಲ್ಲಿನ ಶುಲ್ಕ, ಇತರೆ ಖರ್ಚು ಭರಿಸಲಾಗದೇ, ಸರ್ಕಾರಿ ವಿವಿಗಳಲ್ಲಿನ ಪೇಮೆಂಟ್ ಸೀಟು ಖರೀದಿಸಲಾಗದೇ ವಿದ್ಯಾರ್ಥಿಗಳು ಶಿಕ್ಷಣದಿಂದಲೇ ದೂರ ಉಳಿಯುತ್ತಿದ್ದಾರೆ. ಇನ್ನು ಲಕ್ಷಾಂತರ ರೂಪಾಯಿ ವಸೂಲಿ ಮಾಡುವ ಖಾಸಗಿ ವಿವಿಗಳಿಗೆ ರಾಜ್ಯದ ಬಡ ವಿದ್ಯಾರ್ಥಿಗಳ ಬದಲಾಗಿ ಹೊರಗಿನ ಶ್ರೀಮಂತರಿಗೆ ಲಾಭವಾಗಲಿವೆ ಅಷ್ಟೇ. ಬಡ, ದಲಿತ, ಮಹಿಳೆಯರೂ ಕೂಡಾ ಉನ್ನತ ಶಿಕ್ಷಣದಿಂದ ವಂಚಿತರಾಗಲಿದ್ದಾರೆ. ವಂಚನೆಗೊಳಗಾಗುತ್ತಿರುವ ಶೇ. 89 ಜನ ಉನ್ನತ ಶಿಕ್ಷಣ ಪಡೆಯಬೇಕಾದರೆ ಸರ್ಕಾರಿ ವಿವಿಗಳಲ್ಲಿರುವ ಶುಲ್ಕ ಕಡಿತಗೊಳಿಸಬೇಕು. ಅಗತ್ಯ ಕೋರ್ಸ್. ಸೌಲಭ್ಯಗಳನ್ನು ಕಲ್ಪಿಸಬೇಕು. ಖಾಸಗಿ ವಿವಿಗಳು ಸಾಮಾಜಿಕ ಕಂದಕಗಳನ್ನು ಸೃಷ್ಟಿಸಲಿವೆ.

ಸೆಕ್ಷನ್-32 ಸಾಮಾಜಿಕ ನ್ಯಾಯ-ಭದ್ರತೆಯಿಲ್ಲದ ನೇಮಕಾತಿ : 'ಖಾಸಗಿ ವಿವಿಯ ನೌಕರರನ್ನು ಲಿಖಿತ ಕರಾರಿನ ಅಡಿಯಲ್ಲಿ ನೇಮಕಗೊಳಿಸಲಾಗುತ್ತದೆ'. ಕರಾರಿನಲ್ಲಿ ಏನಿದೆ? ಎಂಬುದು ಬಹಿರಂಗಪಡಿಸಿಲ್ಲ. ನೌಕರರ ಭದ್ರತೆಗೆ ಸಂಬಂಧಿಸಿದಂತೆ ಮಾಹಿತಿಗಳಿಲ್ಲ, ಸಂವಿಧಾನಬದ್ಧವಾಗಿ ಹಿಂದುಳಿದ, ಪರಿಶಿಷ್ಟರು, ಶೋಷಿತರಿಗೆ ನೀಡಲಾಗುವ ಮೀಸಲಾತಿಯ ಸಾಮಾಜಿಕ ನ್ಯಾಯಕ್ಕೆ ಇಲ್ಲಿ ಅವಕಾಶವಿಲ್ಲ, ದಲಿತರು, ಹಿಂದುಳಿದ, ಅಲ್ಪಸಂಖ್ಯಾತ ವರ್ಗದವರಿಗೆ ನೇಮಕಾತಿಯಲ್ಲಿ ಅವಕಾಶವಿಲ್ಲ. ಸ್ವಜನ ಪಕ್ಷಪಾತ ಅಥವಾ ಉಳ್ಳವರಿಗೆ ಮಾತ್ರ ನೇಮಕಾತಿ ಮಾಡಿಕೊಳ್ಳಬಹುದು. ಅಲ್ಲದೇ, ನೇಮಕಾತಿ ಕುರಿತು ಸರ್ಕಾರದ ಮಧ್ಯಪ್ರವೇಶ ಇರುವುದಿಲ್ಲ. ನೌಕರರ ಹಕ್ಕುಗಳ ರಕ್ಷಣೆಗೆ ಅವಕಾಶವಿಲ್ಲ, ಪ್ರಯೋಜಿಕ ಶಿಕ್ಷಣ ಸಂಸ್ಥೆಯ ತೀರ್ಮಾನವೇ ಅಂತಿಮ. ಹಿಂದೆ ಪ್ರಾರಂಭಿಸಲಾದ ಅಲಂಯನ್ಸ್, ಅಜೀಂಪ್ರೇಮ್‌ಜೀ ಖಾಸಗಿ ವಿವಿಗಳಲ್ಲಿ ಯಾವುದೇ ರೀತಿಯ ಮೀಸಲಾತಿ ಜಾರಿಯಲ್ಲಿ ಇಲ್ಲ.

ಸೆಕ್ಷನ್-27 ಸರ್ಕಾರದ ಪ್ರಾತಿನಿಧ್ಯವಿಲ್ಲದ ಹಣಕಾಸು ಸಮಿತಿ : ಖಾಸಗಿ ವಿವಿ ಕುಲಾಧಿಪತಿ ಅಧ್ಯಕ್ಷತೆಯ ಹಣಕಾಸು ಸಮಿತಿಯಲ್ಲಿ ಯಾವುದೇ ಸರ್ಕಾರಿ ಅಧಿಕಾರಿ ಅಥವಾ ಸರ್ಕಾರದ ಪ್ರತಿನಿಧಿಗಳು ಇರುವುದಿಲ್ಲ, ಹಣಕಾಸು ಸಂಗ್ರಹ, ನಿರ್ವಹಣೆಯನ್ನು ಪ್ರಾಯೋಜಕ ಸಂಸ್ಥೆಯೇ ನಿರ್ವಹಿಸಲಿದೆ. ಇದು ಮಿತಿ ಇಲ್ಲದೆ ಹಣ ವಸೂಲಿಯ ಜೊತೆ ಅಕ್ರಮ ಹಣಗಳಿಕೆ, ಬಳಕೆಗೆ ಅವಕಾಶ ಕಲ್ಪಿಸಲಿದೆ.

ಸೆಕ್ಷನ್-50 ವಿದ್ಯಾರ್ಥಿಗಳಿಂದ ವ್ಯಾಪಕ ಸಂಗ್ರಹಕ್ಕೆ ಅವಕಾಶ : ಖಾಸಗಿ ವಿವಿಗಳು ವಿದ್ಯಾರ್ಥಿಗಳಿಂದ ಅಭಿವೃದ್ಧಿ ಶುಲ್ಕ, ದೇಣಿಗೆಗಳು, ದತ್ತಿ ನಿಧಿ ಹೀಗೆ ವಿವಿಧ ರೀತಿಯಿಂದ ಸಂಗ್ರಹಿಸಲು ಕಾನೂನುಬದ್ಧ ಅವಕಾಶ ಕಲ್ಪಿಸಲಾಗಿದೆ. ಈ ರೀತಿಯ ಮುಕ್ತ ಅವಕಾಶದಿಂದ ಖಾಸಗಿ ವಿವಿಗಳು ಸುಲಿಗೆಯ ಕೇಂದ್ರಗಳಾಗಲಿವೆ.

ಸೆಕ್ಷನ್-56 ನೆಪ ಮಾತ್ರ ದಂಡಗಳು : ಅಧಿನಿಯಮದ ಉಲ್ಲಂಘನೆ, ಪರೀಕ್ಷಾ ಅಕ್ರಮ, ಪದವಿ, ಅಂಕಪಟ್ಟಿ ನೀಡುವಲ್ಲಿ ನಿಯಮ ಉಲ್ಲಂಘನೆ ಮಾಡುವವರಿಗೆ ರೂ 50 ಸಾವಿರದಷ್ಟು ದಂಡ, 6 ತಿಂಗಳಿನಷ್ಟು ಕಾರಾಗೃಹ ವಾಸದಿಂದ ದಂಡಿಸಲಾಗುವುದಂತೆ. ಕೇವಲ ಪದವಿಗಾಗಿ ರೂ 20 ಲಕ್ಷದಷ್ಟು ಹಣ ಸುಲಿಗೆ ಮಾಡುವ ಈ ಸಂಸ್ಥೆಗಳಿಗೆ ಈ ಪ್ರಮಾಣದ ದಂಡ, ಶಿಕ್ಷೆ ತೀರಾ ಸಣ್ಣದು. ಬೆಂಗಳೂರಿನಲ್ಲಿ ಬಹುತೇಕ ಖಾಸಗಿ ಶಿಕ್ಷಣ ಸಂಸ್ಥೆಗಳ ಗೇ
ಒಳಗೆ ಸರ್ಕಾರಿ ಅಧಿಕಾರಿಗಳು ಹೋ
ಆಗದಿರುವಾಗ ಖಾಸಗಿ ವಿವಿಗಳ ಆದ
ತಪಾಸಣೆ ಮಾಡುವುದಾದರೂ ಹೇಗೆ?


ಸೆಕ್ಷನ್-47 ಶಾಶ್ವತ ಶಾಸನಬದ್ಧ
ಮತ್ತು ಭೂಮಿ : ಖಾಸಗಿ ವಿವಿಗಳ ಸ್ಥಾಪ
ಕನಿಷ್ಠ 10 ಕೋಟಿ ನಗದು, 5 ಕೋಟಿ ಗ್ಯಾರ
ರೂಪದಲ್ಲಿ ಬ್ಯಾಂಕ್ ಠೇವಣಿಯಾಗಿ
ಗ್ಯಾರಂಟಿ ರೂಪದಲ್ಲಿರಬೇಕು. ಈ ಕು
ತಪ್ಪು ದಾಖಲೆಗಳ ಸೃಷ್ಟಿಸುವುದು ಖಾ
ಶಿಕ್ಷಣ ಸಂಸ್ಥೆಗಳಿಗೆ ದೊಡ್ಡದೇನು ಅಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾ
ವ್ಯಾಪ್ತಿಯಲ್ಲಿ 25 ಎಕರೆ ಭೂಮಿ ಹೊ
60 ಎಕರೆ ಭೂಮಿ ಇರಬೇಕೆನ್ನು
ನಿಯಮ. ಈ ಪ್ರಮಾಣದ ಭೂಮಿ ಈ ಶಿ
ಸಂಸ್ಥೆಗಳಿಗಿದೆಯೇ? ಅಥವಾ ಅಷ್ಟೊ
ಹಣ ಖರ್ಚು ಮಾಡಲು ವಿನಿಯೋಗಿ
ಹಣ ಮತ್ತೆ ವಿದ್ಯಾರ್ಥಿ-ಪೋಷಕರ
ಸುಲಿಯಲಾಗುವುದಿಲ್ಲವೇ? ಎನ್ನುವ
ಸಹಜವಾಗೆ ಎದ್ದು ಬರಲಿದೆ. ನೂರ
ಎಕರೆಯಲ್ಲಿ ಕಾರ್ಯನಿರ್ವಹಿಸು
(ಬೆಂಗಳೂರು, ಮೈಸೂರು, ಹ
ಶಿವಮೊಗ್ಗ, ಗುಲ್ಬರ್ಗ) ಸರ್ಕಾರಿ ವಿ
ವಾತಾವರಣ ಖಾಸಗಿ ವಿವಿಗಳು ನೀ
ಸಾಧ್ಯವೇ ಇಲ್ಲ. ವಿಶಾಲ ವಾತಾವರಣ
ಕಡೆಗೆ ವಿಶ್ವ ಅಧ್ಯಯನ ಹೇಗೆ ಸಾಧ್ಯ?

ಸೆಕ್ಷನ್ 38: ಸರ್ಕಾರಿ ವಿವಿಗಳ
ನೀತಿ ಖಾಸಗಿಯವರಿಗೆ ಅನ್ವಯಿಸುವು
: ರಾಜ್ಯದ ಸರ್ಕಾರಿ ವಿವಿಗಳಿಗೆ
ನಿಗದಿಗೊಳಿಸುವ ಅಧಿಕಾರ ಸರಕಾರ
ಆದರೆ, ಖಾಸಗಿ ವಿವಿಗಳಿಗೆ
ಯಥಾವತ್ತಾಗಿ ಅನ್ವಯಿಸುವುದಿಲ್ಲ. ಕರ್ನಾ
ರಾಜ್ಯದ ಶೇ 40ರಷ್ಟು ವಿದ್ಯಾರ್ಥಿ
ಶುಲ್ಕ ನಿಯಂತ್ರಿಸಲು ಒಂದು ಸಮಿತಿಯ
ರಚಿಸಲಾಗುತ್ತದೆ.

ಇನ್ನುಳಿದ ಶೇ 60ರಷ್ಟು ವಿದ್ಯಾರ್ಥಿ
ನಿರ್ದಿಷ್ಟ ಶುಲ್ಕ ನಿಗದಿಯ ನಿಯ
ಮಾನದಂಡಗಳನ್ನು ನಿಗದಿಗೊಳಿಸಿಲ್ಲ.
ವ್ಯಾಪಕ ಸೀಟು ಮಾರಾಟಕ್ಕೆ ಅವ
ಕಲ್ಪಿಸುತ್ತದೆ. ರಾಜ್ಯದಲ್ಲಿರುವ ಖಾಸಗಿ
ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು ಕಾನ
ಬಾಹಿರವಾಗಿ ಲಕ್ಷಾಂತರ ರೂಪಾ
ವಸೂಲಿಯಲ್ಲಿ ತೊಡಗಿದ್ದರೂ ಸರ್ಕಾರದ
ಸೂಕ್ತ ಕ್ರಮ ಸಾಧ್ಯವಾಗಿಲ್ಲ. ಹೀಗೆ ಹಲವ
ಋಣಾತ್ಮಕ ಅಂಶಗಳು ತುಂಬಿರುವ
ಖಾಸಗಿ ವಿವಿಗಳು ಉನ್ನತ ಶಿಕ್ಷಣ
ವಂಚಿಸಲು ಹುಟ್ಟುತ್ತಿವೆ. ಎ.ಬಿ.
ಸಂಘಟನೆಯ ಕಾರ್ಯಕರ್ತನೆಂದು
ಹೇಳಿಕೊಳ್ಳುವ ಉನ್ನತ ಶಿಕ್ಷಣ
ಸಿ.ಟಿ. ರವಿ ಅವರ ನಿಜಬಣ್ಣ ಬಯಲಾ
ಶಿಕ್ಷಣ ವ್ಯಾಪಾರೀಕರಣದ ವಿರುದ್ಧ ಅ
ಕೂಗಾಡಿದ್ದು ಢೋಂಗಿತನವೆಂಬ
ಸಾಬೀತಾಗಿದೆ. ಸಿ.ಟಿ. ರವಿ ಮತ್ತು ಸ
ಪರಿವಾರದವರ ಪ್ರತಿಪಾದನೆ ಬಹುಸಂ
ಬಡವರಿಗೆ ಶಿಕ್ಷಣದ ವಂಚನೆಯೇ
ಎಂಬುದನ್ನು ಮತ್ತೊಮ್ಮೆ ಬಹಿರಂಗಗೊ
ಎಬಿವಿಪಿಯ ಒಡಲಲ್ಲಿರುವ ವ್ಯಾಪಾರಿ
ಕಾನೂನಾಗಲು ಹೊರಟಿದೆ.

ರಕ್ಷಣಾ ಸಾಮಗ್ರಿಗಳಿಗಾಗಿ ವಿದೇಶೀ ಅವಲಂಬನೆ ಏಕೆ?
ಎಫ್‌ಡಿಐ-ಪ್ರಿಯ ಸರಕಾರ ಶ್ವೇತಪತ್ರ ಹೊರಡಿಸಬಲ್ಲುದೆ?



ವೇದರಾಜ ಎನ್.ಕೆ.

ಗಸ್ತಾ ವೆಸ್ಟ್‌ಲ್ಯಾಂಡ್ ಹೆಲಿಕಾಪ್ಟರ್ ಖರೀದಿಯಲ್ಲಿ ಯಾ–ೇ ದುಡ್ಡು ಮಾಡಿರುವುದಂತೂ ಖಂಡಿತ ಎನ್ನುತ್ತಾರೆ ಯುಪಿಎ–2 ರಕ್ಷಣಾ ಮಂತ್ರಿಗಳು. ನಾವು ಯಾರಿಗೂ ಣೆ ತೋರುವುದಿಲ್ಲ, ಅವರು ಎಷ್ಟೇ ಬಲಿಷ್ಠರಾಗಿರಲಿ, ು ಕೈಗೊಳ್ಳುತ್ತೇವೆ ಎಂದಿದ್ದಾರೆ ಅವರು. ಇದೇ ಂದರ್ಭದಲ್ಲಿ ಅವರು ತಮ್ಮ ಮಂತ್ರಾಲಯ 'ಹೊಸ ರೀದಿ ಧೋರಣೆ'ಯನ್ನು ಸಿದ್ಧಗೊಳಿಸುತ್ತಿದ್ದು, ಅದೀಗ ಂತಿಮ ಹಂತಗಳಲ್ಲಿದೆ ಎನ್ನುತ್ತ ಇದರಲ್ಲಿ ದೇಶೀಕರಣವನ್ನು ಲಯುತವಾಗಿ ಅನುಸರಿಸಲಾಗುವುದು ಎಂದಿದ್ದಾರೆ. ನ್ನೊಂದೆಡೆ ಒಬ್ಬ ಮಾಜಿ ನೌಕಾ ಸೇನಾಧಿಪತಿಗಳು ಕೂಡ ಕ್ಷಣಾ ಸಾಮಗ್ರಿಗಳನ್ನು ಸ್ಥಳೀಯವಾಗಿಯೇ ಪಡೆಯಬೇಕು ಂದಿದ್ದಾರೆ.

ಈ ಹಿಂದೆ ಕಾಂಗ್ರೆಸ್ ಆಳ್ವಿಕೆಯಲ್ಲಿ ವಿದೇಶದಿಂದ ...ರ್ಸ್ ಫಿರಂಗಿ ಖರೀದಿಯಲ್ಲಿ, ನಂತರ ಬಿಜೆಪಿ ೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ ಇನ್ನೊಂದು ವಿದೇಶದಿಂದ ೇನಾ ಉಪಕರಣಗಳು ಮತ್ತು ಅಲ್ಯುಮಿನಿಯಂ ವಪೆಟ್ಟಿಗೆಗಳ ಖರೀದಿಯಲ್ಲಿ, ಈಗ ಕಾಂಗ್ರೆಸ್ ನೇತೃತ್ವದ ಯುಪಿಎ ಆಳ್ವಿಕೆಯಲ್ಲಿ ಮತ್ತೊಂದು ವಿದೇಶದಿಂದ ಲಿಕಾಪ್ಟರ್ ಖರೀದಿಯಲ್ಲಿ ಭ್ರಷ್ಟಾಚಾರ ಬಯಲಾಗಿರುವುದು ಜಕಾರಣಿಗಳು ಮತ್ತು ಅಧಿಕಾರಿಗಳ(ಸೇನಾಧಿಕಾರಿಗಳೂ?) ಡುವಿನ ದುಷ್ಟಕೂಟದ ಬಗ್ಗೆ ಮತ್ತೊಮ್ಮೆ ಗಮನ ಳೆಯುವುದಲ್ಲದೆ, ಭಾರತ ಈಗಲೂ ಅರವತ್ತು ವರ್ಷಗಳ ಂತರವೂ, ಮಿಲಿಟರಿ ಸಾಮಗ್ರಿಗಳ ಖರೀದಿಗೆ ವಿದೇಶೀ ೂರೈಕೆದಾರರನ್ನೇ ಏಕೆ ಅವಲಂಬಿಸಬೇಕಾಗಿದೆ, ಇವನ್ನೆಲ್ಲ ಳೀಯವಾಗಿ ಖರೀದಿಸಲು, ನಾವೇ ತಯಾರಿಸಲು ಏಕೆ ಗಿಲ್ಲ ಎಂಬ ಪ್ರಶ್ನೆಯನ್ನೂ ಮತ್ತೊಮ್ಮೆ ಎತ್ತಿದೆ.

ನಿಜ, ಈಗ ಮಾಜಿ ನೌಕಾಧಿಪತಿಗಳೊಬ್ಬರು ಈ ಬಗ್ಗೆ ಮಾತಾಡಿದ್ದಾರೆ, ಆದರೆ ಅವರು ಆ ಉನ್ನತ ಸ್ಥಾನದಲ್ಲಿದ್ದಾಗ ಈ ದಿಕ್ಕಿನಲ್ಲಿ ಏನಾದರೂ ಪ್ರಯತ್ನ ನಡೆಸಿದ್ದ ಲಕ್ಷಣಗಳೇನೂ ಂಡಿಲ್ಲ. ಅದೇ ರೀತಿ ಈಗಿನ ರಕ್ಷಣಾ ಮಂತ್ರಿಗಳು ಮಾತಾಡಿದ್ದಾರೆ, ಆದರೆ ಇದುವರೆಗೆ ಈ ದಿಕ್ಕಿನಲ್ಲಿ ಮಾಡಿದ್ದೇನು ...ದೇಶಕ್ಕೆ ಗೊತ್ತಾಗಬೇಕಾಗಿದೆ, ಅದಕ್ಕಾಗಿ ನಮ್ಮ ಕ್ಷಣಾ ಉತ್ಪಾದನಾ ಸಾಮರ್ಥ್ಯದ ಸ್ಥಿತಿ–ಗತಿಯೇನು ಎಂಬ ಗ್ಗೆ ಒಂದು ಶ್ವೇತಪತ್ರ ಪ್ರಕಟಿಸಬೇಕಾಗಿದೆ ಎಂಬುದು ದೇಶದ ಜಾಪ್ರಭುತ್ವ ಶಕ್ತಿಗಳ ನಿರೀಕ್ಷೆ.

ನಿಜವಾಗಿಯೂ ನಮ್ಮನ್ನು ಈಗ ಆಳುತ್ತಿರುವವರಲ್ಲಿ ಈ ಗ್ಗೆ ಸ್ಪಷ್ಟವಾದ ಕಣ್ಣೋಟ ಇದೆಯೇ? ರಕ್ಷಣಾ ಮಂತ್ರಿಗಳು ರೀದಿ ಧೋರಣೆಯ ಬಗ್ಗೆ ಹೇಳಿದ್ದಾರೆ, ಉತ್ಪಾದನೆಯ ಬಗ್ಗೆ ೇಳಿಲ್ಲ. ಮಾಜಿ ನೌಕಾ ಸೇನಾಧಿಪತಿಗಳು ಖಾಸಗಿಯವರಿಂದ ಳೀಯ ಖರೀದಿ ನಡೆಸಬೇಕು ಎಂದಿದ್ದಾರೆ. ನಮ್ಮ ಾಣಿಜ್ಯ ಮಂತ್ರಿಗಳಂತೂ ರಕ್ಷಣಾ ಉದ್ದಿಮೆಯಲ್ಲಿ ವಿದೇಶಿ ೇರ ಹೂಡಿಕೆಯನ್ನು 75ಶೇ.ಕ್ಕೆ ಏರಿಸುವ ರಾಗಾಲಾಪನೆ ಮಾಡುತ್ತಿದ್ದಾರೆ.

ರಕ್ಷಣಾ ಮಂತ್ರಿಗಳು ಬಯಸುವಂತೆ ಸ್ಥಳಿಯ ಖರೀದಿಯನ್ನು ಚ್ಚಿಸಲು ಸಾಧ್ಯವಿದೆಯೇ, ಮಾಜಿ ನೌಕಾಧೀಶರು ಯಸುವಂತೆ ಸ್ಥಳೀಯ ಖಾಸಗಿ ವಲಯದಿಂದ ಖರೀದಿಯಲ್ಲಿ ಂತಹ ಭ್ರಷ್ಟ ಆಚರಣೆಗಳು ಇರುವುದಿಲ್ಲ ಎಂದು ಹೇಳಲು ಧ್ಯವೇ, ಅದೂ 2ಜಿ, ಕೆ.ಜಿ., ಗಣಿ ಹಗರಣಗಳ ನಂತರ? ...ಲೂ ಹೆಚ್ಚಾಗಿ ನಮಗೆ ಆವಶ್ಯಕವಾದ ಮಿಲಿಟರಿ ಮಗ್ರಿಗಳನ್ನು ಒದಗಿಸುವ ಸಾಮರ್ಥ್ಯವನ್ನು ಭಾರತದ ಖಾಸಗಿ ಲಯ ಹೊಂದಿದೆಯೇ? ಇನ್ನು ರಕ್ಷಣಾ ಉತ್ಪಾದನೆಯಲ್ಲಿ ಎಫ್‌ಡಿಐಯನ್ನು ಹೆಚ್ಚಿಸಬೇಕೆನ್ನುವುದೇ ಭಾರತದ ಖಾಸಗಿ ವಲಯದ ಅಸಮರ್ಥತೆಯನ್ನು ತೋರಿಸುವುದರೊಂದಿಗೆ ಇಂತಹ ವಿದೇಶಿ ಅವಲಂಬನೆಯನ್ನು ಕಡಿಮೆ ಮಾಡುವ ಕಾಳಜಿ ನಿಜವಾಗಿಯೂ ಈ ಸರಕಾರಕ್ಕೆ ಇದೆಯೇ ಎಂಬ ಪ್ರಶ್ನೆಯನ್ನು ಎತ್ತುತ್ತದೆ.

ಈ ಎಲ್ಲ ಪ್ರಶ್ನೆಗಳಿಗೆ, ರಕ್ಷಣಾ ಸಾಮಗ್ರಿಗಳ ಸ್ಥಳೀಯ ಖರೀದಿ/ಉತ್ಪಾದನೆಯ ಪ್ರಶ್ನೆಗೆ ನಿಜವಾದ ಉತ್ತರವೆಂದರೆ ಸರಕಾರೀ ಸ್ವಾಮ್ಯದಲ್ಲಿ ಪ್ರಜ್ಞಾಪೂರ್ವಕವಾದ, ಯೋಜಿತವಾದ ಉತ್ಪಾದನಾ ಸಾಮರ್ಥ್ಯವನ್ನು ಕಟ್ಟಿ ಬೆಳೆಸುವುದು, ಇದರಲ್ಲಿ ಖಾಸಗೀ ವಲಯವೂ ಪಾಲ್ಗೊಳ್ಳಬಹುದು, ಆದರೆ ಒಟ್ಟಾ–ರೆಯಾಗಿ ಕಟ್ಟುನಿಟ್ಟಾದ ಸ್ವತಂತ್ರ ಉಸ್ತುವಾರಿ ಮತ್ತು ನೈಜ ಜವಾಬುದಾರಿಕೆ ನಿರೂಪಿತವಾಗಿರಬೇಕು ಎಂಬುದು ಪರಿಣಿತರ ಅಭಿಪ್ರಾಯ. ಭಾರತ 1950ರ ಮತ್ತು 1960ರ



ದಶಕದಲ್ಲಿ ಬೃಹತ್ ಪ್ರಮಾಣದಲ್ಲಿ ರಕ್ಷಣಾ ಉದ್ದಿಮೆಯನ್ನು ಕಟ್ಟಿ ಬೆಳೆಸಿದರೂ, 21ನೇಶತಮಾನದ ಎರಡನೇ ದಶಕದಲ್ಲಿ ಹಗುರ ಯುದ್ಧ ವಿಮಾನ, ಟ್ಯಾಂಕುಗಳಂತೂ ದೂರ, ಟ್ರಕ್ಕುಗಳನ್ನು ಕೂಡ ವಿದೇಶಗಳಿಂದ ಖರೀದಿಸುವ ಪರಿಸ್ಥಿತಿ ಏಕೆ ಉಂಟಾಗಿದೆ ಎಂದು ಅವರು ಕೇಳುತ್ತಾರೆ.

ನಮ್ಮ ರಕ್ಷಣಾ ಮಂತ್ರಿಗಳಿಗೆ ನಿಜವಾಗಿಯೂ ರಕ್ಷಣಾ ಉಪಕರಣಗಳ ಖರೀದಿಗಳಲ್ಲಿ ಭ್ರಷ್ಟಾಚಾರವನ್ನು ನಿಲ್ಲಿಸಬೇಕೆಂಬ ಕಳಕಳಿ ಇದ್ದರೆ, ದೇಶದ ರಕ್ಷಣಾ ಉತ್ಪಾದನೆಯ ಸಾಮರ್ಥ್ಯದ ಬಗ್ಗೆ ಒಂದು ಶ್ವೇತಪತ್ರವನ್ನು ಪ್ರಕಟಿಸಬೇಕು, ಇದು ವಿವಿಧ ವಲಯಗಳಲ್ಲಿ ದೇಶೀ ಸಾಮರ್ಥ್ಯವನ್ನು ನಿರೂಪಿಸುವ, ಇದಕ್ಕೆ ಬೇಕಾಗುವ ಮೂಲರಚನೆಗಳು ಮತ್ತು ಮಾನವ ಸಂಪನ್ಮೂಲಗಳ ಸ್ಥಿತಿ–ಗತಿ ಮತ್ತು ಬಳಕೆಯ ಬಗ್ಗೆ ಒಂದು ಪ್ರಾಮಾಣಿಕ ಪ್ರಯತ್ನವಾಗಿರಬೇಕು, ಇದರಲ್ಲಿ ರಕ್ಷಣಾ ಮಂತ್ರಿ, ರಕ್ಷಣಾ ಉತ್ಪಾದನೆಯ ರಾಜ್ಯ ಮಂತ್ರಿ ಮತ್ತು ರಕ್ಷಣಾ ಮಂತ್ರಾಲಯದ ವೈಜ್ಞಾನಿಕ ಸಲಹೆಗಾರರ ಪಾತ್ರ ಮತ್ತು ಜವಾಬುದಾರಿಕೆಯ ನಿರೂಪಣೆಯೂ ಇರಬೇಕು. ಇದು ರಕ್ಷಣಾ ಉತ್ಪಾದನೆಯ ವ್ಯವಸ್ಥೆ ಮತ್ತು ರಚನೆಗಳ ಆಮೂಲಾಗ್ರ ಪರೀಕ್ಷಣೆಗೆ ಮತ್ತು ಮುಂದಿನ ಮೂರ್ತ ಕ್ರಮಗಳ ಯೋಜನೆಗೆ ಅಡಿಗಲ್ಲಾಗಬೇಕು ಎಂದು ಪರಿಣಿತರು ಹೇಳುತ್ತಾರೆ.

ಆದರೆ ಇದನ್ನು, ರಕ್ಷಣಾ ಮಂತ್ರಿಗಳು ವೈಯಕ್ತಿಕವಾಗಿ ಎಷ್ಟೇ ಕಾಳಜಿ ವ್ಯಕ್ತಪಡಿಸಿದರೂ, ಈ ಯುಪಿಎ–2 ಸರಕಾರದಿಂದ ನಿರೀಕ್ಷಿಸಬಹುದೇ?

ಮಾಹಿತಿ ಹಕ್ಕು: ಪ್ರಧಾನಿ ಕಚೇರಿಯಲ್ಲಿಯೇ ಸಲ್ಲದ ತಗಾದೆ

ಈ ಅಂಕಣದಲ್ಲಿ ಹಿಂದೆ ಹಲವು ಬಾರಿ ಗಮನಿಸಿದಂತೆ ಎಡಪಕ್ಷಗಳ ಒತ್ತಡದಿಂದ ತಂದ ಮಾಹಿತಿ ಹಕ್ಕು ಕಾನೂನು ತನ್ನದೇ ಮಹಾಸಾಧನೆ ಎಂದು ಪ್ರಚಾರ ಗಿಟ್ಟಿಸಲು ಎಂದೂ ಹಿಂಜರಿಯದ ಯುಪಿಎ ಸರಕಾರ, ಈ ಹಕ್ಕನ್ನು ಮೊಟಕುಗೊಳಿಸುವ ಪ್ರಯತ್ನಗಳನ್ನು ನಡೆಸುತ್ತಲೇ ಇದೆ. ಇದ–ಕ್ಕೆ ಸ್ವತಃ ಪ್ರಧಾನ ಮಂತ್ರಿಗಳ ಕಚೇರಿಯೂ ಹೊರತಲ್ಲ. ಈಗ ಅದೇ ಕಚೇರಿಯಿಂದ ಈ ಹಕ್ಕಿನ ಇನ್ನೊಂದು ಉಲ್ಲಂಘನೆಯ ಸುದ್ದಿ ಬಂದಿದೆ.

ಮಾಹಿತಿ ಹಕ್ಕು ಕಾನೂನಿನ ಸೆಕ್ಷನ್ 4(1)(ಎ) ಪ್ರಕಾರ ಸರಕಾರ ಕಡತಗಳು ಮತ್ತು ದಾಖಲೆಗಳನ್ನು ಕಂಪ್ಯೂಟರೀಕರಿಸಬೇಕು. ನಿವೃತ್ತ ಕೊಮೊಡೊರ್ ಲೋಕೇಶ್ ಬತ್ರ ಈ ಬಗ್ಗೆ ಪ್ರಧಾನ ಮಂತ್ರಿಗಳ ಕಚೇರಿ(ಪಿಎಂಒ)ಯಲ್ಲಿ ಮಾಹಿತಿ ಕೇಳಿದಾಗ ಅಲ್ಲಿನ ಮುಖ್ಯ ಸಾರ್ವಜನಿಕ ಮಾಹಿತಿ ಅಧಿಕಾರಿ(ಸಿಪಿಐಒ), ಈ ರೀತಿ ಮಾಹಿತಿ ಕಲೆ ಹಾಕಲು ಕಚೇರಿಯ ಸಂಪನ್ಮೂಲಗಳನ್ನು ಪ್ರಮಾಣ ಮೀರಿ ಬೇರೆಡೆಗೆ ತಿರುಗಿಸಿದಂತಾಗುತ್ತದೆ ಎಂದು ಹೇಳಿ ಮಾಹಿತಿ ನೀಡಲು ನಿರಾಕರಿಸಿದರು. ಬತ್ರ ಇದರ ವಿರುದ್ಧ ಪಿಎಂಒ ನಿರ್ದೇಶಕರಿಗೆ ಮನವಿ ಸಲ್ಲಿಸಿದರು. ಅದರಲ್ಲಿ ಸ್ವತಃ ಪ್ರಧಾನ ಮಂತ್ರಿಗಳ ಮಾತಿನ ಉದ್ಧರಣೆ ನೀಡಿದರು. "ಸಾರ್ವಜನಿಕ ಅಧಿಕಾರಿಗಳು ಮಾಹಿತಿ ಕೇಳುವವರಿಂದ ಅರ್ಜಿಗಳಿಗೆ ಕಾಯದೆ ಮಾಹಿತಿಗಳನ್ನು ಸಾರ್ವಜನಿಕಗೊಳಿಸಲು ತಾವೇ ಪ್ರಯತ್ನಿಸಬೇಕು...ಮಾಹಿತಿ ಹಕ್ಕು ಕಾನೂನೇ ಇದನ್ನು ವಿಧಿಸಿದೆ" ಎಂದಿದ್ದರು ಪ್ರಧಾನಿಗಳು ತಮ್ಮೊಂದು ಭಾಷಣದಲ್ಲಿ.

ಪಿಎಂಒ ನಿರ್ದೇಶಕರು ಮನವಿಯನ್ನು ಪರಿಶೀಲಿಸಿದ ನಂತರ ತಮ್ಮ ಸಿಪಿಐಒಗೆ ಬತ್ರರವರು ಕೇಳಿದ ಮಾಹಿತಿಯನ್ನು 15 ದಿನಗಳೊಳಗೆ ಒದಗಿಸುವಂತೆ ಆದೇಶಿಸಿದರು. ಆದ–ರೆ ತಮ್ಮ ಮೇಲಧಿಕಾರಿಯ ಆದೇಶ ಬಂದ ನಂತರವೂ ಸಿಪಿಐಒ ಮಾಹಿತಿ ಒದಗಿಸಲು ನಿರಾಕರಿಸಿದರು. ಈ ಪ್ರಶ್ನೆ "ಅರ್ಜಿದಾರ ಈ ಮಾಹಿತಿ ವೈಯಕ್ತಿಕವಾಗಿಯಾಗಲೀ, ಸಾಮಾಜಿಕವಾಗಿಯಾಗಲೀ ಅಥವ ರಾಷ್ಟ್ರೀಯವಾಗಲಿ ತನಗೆ ಹೇಗೆ ಉಪಯೋಗಿ ಎಂದು ತಿಳಿಸಿರದಿರುವ ವಿಧದಲ್ಲಿ ಬರುತ್ತದೆ" ಎಂಬುದು ಆತ ನೀಡಿರುವ ಕಾರಣ.

ಇದು ಅಸಂಬದ್ಧ ಉತ್ತರ, ಈ ಬಗ್ಗೆ ದೂರು ಬಂದಲ್ಲಿ ಸಿಪಿಐಒ ಮೇಲೆ ಕೇಂದ್ರ ಮಾಹಿತಿ ಆಯೋಗ ದಂಡ ವಿಧಿಸುವ ಕ್ರಮ ಕೈಗೊಳ್ಳಬಹುದು ಎಂಬುದು ಕಾನೂನು ತಜ್ಞರ ಅಭಿಪ್ರಾಯ. ಪ್ರಧಾನ ಮಂತ್ರಿಯ ಕಚೇರಿಯ ಒಬ್ಬ ಪ್ರಮುಖ ಅಧಿಕಾರಿ ಈ ರೀತಿ ಅಸಂಬದ್ಧವಾಗಿ ವರ್ತಿಸಲು ಹೇಗೆ ಸಾಧ್ಯವಾಗಿದೆ ಎಂಬುದು ಪ್ರಜಾಪ್ರಭುತ್ವವಾದಿಗಳ ಆತಂಕ.

ಜಗದಗಲ

ಶರತ್‌ಚಂದ್ರ

ಇಕ್ವಡಾರಿನಲ್ಲಿ ಎಡಪಂಥೀಯ ಹ್ಯಾಟ್ರಿಕ್

ದಕ್ಷಿಣ ಅಮೆರಿಕದ ಇಕ್ವಡಾರಿನಲ್ಲಿ ಎಡಪಂಥೀಯ ಅಧ್ಯಕ್ಷ ರಾಫೆಲ್ ಕೊರಿಯ ಮೂರನೇ ಬಾರಿಗೆ ಅಧ್ಯಕ್ಷರಾಗಿ ಚುನಾಯಿತರಾಗಿ ಹ್ಯಾಟ್ರಿಕ್ ಹೊಡೆದಿದ್ದಾರೆ. ಅಧ್ಯಕ್ಷ ಕೊರಿಯ ಮೊದಲ ಸುತ್ತಿನಲ್ಲೇ ಶೇ. 58ರಷ್ಟು ಮತ ಗಳಿಸಿ ಸ್ಪಷ್ಟ ಜನಾದೇಶ ಗಳಿಸಿದ್ದಾರೆ. ಅವರ ಹತ್ತಿರದ ಪ್ರತಿಸ್ಪರ್ಧಿ ಬಲಪಂಥೀಯ ಭಾರೀ ಶ್ರೀಮಂತ ಗಿಲ್ಲೆರ್ಮೊ ಲಾಸ್ಸೊ ಬರಿಯ ಶೇ.23 ಮತ ಗಳಿಸಿ ಪರಾಭವ ಕಂಡಿದ್ದಾರೆ. ಕೊರಿಯ ಅವರಿಗಿಂತ ಮೊದಲು ಅಧ್ಯಕ್ಷರಾಗಿದ್ದ ಬಲಪಂಥೀಯ ಮಿಲಿಟರಿ ಅಧಿಕಾರಿ ಲೂಸಿಯೊ ಗುಟಿಯೆರೆಝ್ ಕೇವಲ ಶೇ.6 ಮತ ಗಳಿಸಿ ದೂರದ 3ನೇ ಸ್ಥಾನ ಗಳಿಸಿದ್ದಾರೆ. ಒಟ್ಟು ಕಣದಲ್ಲಿ 8 ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದರು. ಜತೆಗೆ ನಡೆದ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಸಹ ಕೊರಿಯ ಅವರ ಪಕ್ಷ ಎಂ.ಎ.ಪಿ. (ರಾಷ್ಟ್ರೀಯ ಮೈತ್ರಿಕೂಟ ಚಳುವಳಿ) ಮೂರನೇ ಎರಡಕ್ಕಿಂತಲೂ ಹೆಚ್ಚು ಸೀಟು ಗಳಿಸಿ ಭಾರೀ ಜಯ ಸಾಧಿಸಿದೆ.



2006ರಲ್ಲಿ ಮೊದಲ ಬಾರಿಗೆ ಜನ-ವಿರೋಧಿ ನವ-ಉದಾರವಾದಿ ನೀತಿಗಳ ಬದಲಾವಣೆಯ ಘೋಷಣೆ ಮೇಲೆ ರಾಫೆಲ್ ಕೊರಿಯ ಚುನಾಯಿತರಾಗಿದ್ದರು. ಅದನ್ನು ಅವರು 'ಜನತಾ ಕ್ರಾಂತಿ'ಯಾಗಿ ಬದಲಾಯಿಸಲು ಪ್ರಯತ್ನಿಸಿದ್ದಾರೆ. 2006ರ ಮೊದಲು ಇಕ್ವಡಾರ್ ಆರ್ಥಿಕ ರಾಜಕೀಯ ಬಿಕ್ಕಟ್ಟುಗಳ ಗೂಡಾಗಿತ್ತು. ದೇಶ ಮಣಭಾರದ ಸಾಲದಲ್ಲಿ ಹೂತು ಹೋಗಿತ್ತು. 10 ವರ್ಷಗಳಲ್ಲಿ 7 ಅಧ್ಯಕ್ಷರನ್ನೂ ಸರ್ಕಾರ ಬದಲಾವಣೆಗಳನ್ನೂ ಕಂಡಿತ್ತು. ವೆನೆಜುವೆಲಾದಂತೆ ಇಕ್ವಡಾರಿನಲ್ಲೂ ತೈಲ ಸಂಪತ್ತು ಇದ್ದು, ಅದು ತೈಲ ರಫ್ತು ಮಾಡುವ ದೇಶಗಳ ಕೂಟದ ಸದಸ್ಯ. ಆದರೆ ದೇಶದ ತೈಲ ಸಂಪತ್ತನ್ನು ಜನತೆಯ ಕಲ್ಯಾಣ ಯೋಜನೆಗಳಿಗೆ ಬಡತನ ದೂರ ಮಾಡಲು ಬಳಸಲು ದೇಶದ ಆಳುವ ವರ್ಗಗಳು ಅವಕಾಶ ಕೊಟ್ಟಿರಲಿಲ್ಲ. ಕೊರಿಯ ಅವರು ಈ ಆಳುವ ವರ್ಗಗಳ ಪ್ರತಿರೋಧ ಮುರಿದು ಅದನ್ನು ಸಾಧ್ಯ ಮಾಡಿದ್ದರು.

ಅವರ ಸರ್ಕಾರ ನವಂಬರ್ 2010ರಲ್ಲಿ ಪಾಶ್ಚಿಮಾತ್ಯ ತೈಲ ಬಹು-ರಾಷ್ಟ್ರೀಯ ಕಂಪನಿಗಳ ಜತೆ ಒಪ್ಪಂದಗಳ ಪುನರ್ವಿಮರ್ಶೆ ಮಾಡಿ, ಅವು ಕೊಡಬೇಕಾದ ಬಾಡಿಗೆಯನ್ನು ಶೇ.18ರಿಂದ ಶೇ.80ಕ್ಕೆ ಏರಿಸಿತು. ಅಮೆರಿಕದ ಹೂಡಿಕೆ ಮೇಲೆ ಪೂರ್ಣ ಅವಲಂಬಿಸಿದ್ದ ಸ್ಥಿತಿ ಬದಲಾಯಿಸಿ, ಚೀನಾದ ಜತೆ ಆರ್ಥಿಕ ಸಂಬಂಧ ಸಾಧಿಸಿತು. 2011ರಲ್ಲಿ ಚೀನಾ ಜತೆ 200 ಕೋಟಿ ಡಾಲರು ಹೂಡಿಕೆಯ ಒಪ್ಪಂದಕ್ಕೆ ಸಹಿ ಹಾಕಿತು. ಚೀನಾ ಇಕ್ವಡಾರಿನ 340 ಕೋಟಿ ಡಾಲರು ಸಾಲ ತನ್ನ ಮೇಲೆ ತೆಗೆದುಕೊಂಡಿತು. ಇದ-ಕ್ಕೆ ಪ್ರತಿಯಾಗಿ, ಚೀನಾಕ್ಕೆ 100 ಶತಕೋಟಿ ಬೆಲೆಯ 'ಆದ್ಯತೆ ತೈಲ ಕಾಂಟ್ರಾಕ್ಟು'ಗಳನ್ನು ಕೊಡಲಾಯಿತು. ಇವೆಲ್ಲದರಿಂದ ಸರ್ಕಾರದ ಆದಾಯ ದೇಶದ ಒಟ್ಟು ಉತ್ಪನ್ನ (ಜಿಡಿಪಿ)ದ ಶೇ. 27 (2007ರಲ್ಲಿ)ರಿಂದ ಶೇ.40ಕ್ಕೆ (2012ರಲ್ಲಿ) ಏರಿತು. ಈಗ ದೇಶದ ಒಟ್ಟು ಉತ್ಪನ್ನ (ಜಿಡಿಪಿ)ದ ಕೇವಲ ಶೇ. 1 ರಷ್ಟು ವಿದೇಶೀ ಸಾಲ ತೀರಿಸಲು ಹೋಗುತ್ತಿದೆ. ಸ್ವತಃ ಅರ್ಥಶಾಸ್ತ್ರಜ್ಞರಾಗಿರುವ ಕೊರಿಯ ಹಲವು ಮಹತ್ವದ ಹಣಕಾಸು ನಿರ್ವಹಣೆ ಸುಧಾರಣೆಗಳನ್ನೂ ತಂದರು. ನವ-ಉದಾರವಾದಿ ನೀತಿಗಳಿಗೆ ಪ್ರತಿಯಾಗಿ ಸರ್ಕಾರ ಕೇಂದ್ರೀಯ ಬ್ಯಾಂಕಿನ ಮೇಲೆ ನಿಯಂತ್ರಣ ಗಟ್ಟಿಗೊಳಿಸಿದರು. ವಿದೇಶಗಳಲ್ಲಿ ಹೂಡಲಾಗಿದ್ದ ಕೇಂದ್ರೀಯ ಬ್ಯಾಂಕಿನ ಸುಮಾರು 200 ಕೋಟಿ ಡಾಲರುಗಳನ್ನು ವಾಪಸು ತರಿಸಿದರು. ಅದನ್ನು ಕೃಷಿ, ಗೃಹ ನಿರ್ಮಾಣ ಮತ್ತು ಮೂಲ ಸೌಕರ್ಯ ಮುಂತಾದ ಆದ್ಯತೆ ಕ್ಷೇತ್ರಗಳಿಗೆ ಸಾಲ ಕೊಡಲು ಬಳಸಲಾಯಿತು.

ಸರ್ಕಾರದ ತೈಲ ಆದಾಯಗಳನ್ನು ಸಾರ್ವಜನಿಕ ಸೇವೆ ಉತ್ತಮ ಪಡಿಸಲು ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳಿಗೆ ಖರ್ಚು ಮಾಡಿದ್ದರ ಪರಿಣಾಮ 2008ರಿಂದ ಕಾಣಲಾರಂಭಿಸಿತು. ವಿಶ್ವಬ್ಯಾಂಕಿನ ವರದಿಗಳ ಪ್ರಕಾರವೇ ಬಡತನದ ಪ್ರಮಾಣ ಶೇ.38ರಿಂದ (2006ರಲ್ಲಿ) ಶೇ.29ಕ್ಕೆ (ಈ ವರ್ಷ) ಇಳಿದಿದೆ. ನಿರುದ್ಯೋಗದ ಪ್ರಮಾಣ ಶೇ.4.4ಕ್ಕೆ (ಇದು ಅಭಿವೃದ್ಧ ಯುರೋಪಿಯನ್ ದೇಶಗಳಿಗಿಂತಲೂ ಕಡಿಮೆ) ಇಳಿದಿದೆ. ಶೇ.13 ಕ್ಕೂ ಹೆಚ್ಚು ಜನರಿಗೆ (ಒಂಟಿ ತಾಯಂದಿರು, ವೃದ್ಧರು, ಅಶಕ್ತರು ಇತ್ಯಾದಿ) ಧನ ಸಹಾಯ ಒದಗಿಸಲಾಗುತ್ತಿದೆ. ಜನತಾ ಸಹಕಾರಿ ಸಂಘಗಳಿಗೆ ಸಾಲ ಒದಗಿಸಲಾಗಿದೆ.

ಈ ಎಲ್ಲಾ ಕಾರ್ಯಕ್ರಮಗಳು ಸ್ವಾಭಾವಿಕವಾಗಿಯೇ ಜನತೆಯ ಗಮನಕ್ಕೆ ಬಂದಿದೆ. ಇದು ನಿಜವಾಗಿಯೂ 'ಜನತೆಯ ಸರ್ಕಾರ' ಎಂಬುದು ಮನದಟ್ಟಾಗಿದೆ. ಆದ್ದ-ರಿಂದ ಖಾಸಗಿ ಕೈಯಲ್ಲಿರುವ ಸಾಮ್ರಾಜ್ಯಶಾಹಿ ಮತ್ತು ಧನಿಕ ವರ್ಗಗಳ ತುತ್ತೂರಿಗಳಾದ ಮಾಧ್ಯಮಗಳ ಅಪಪ್ರಚಾರಗಳನ್ನು ಅವರು ಲೆಕ್ಕಿಸಲಿಲ್ಲ. ಕೊರಿಯ ಸರ್ಕಾರ ತಮ್ಮ ನೀತಿಗಳನ್ನು ಮುಂದುವರೆಸಬೇಕೆಂದು ಬಯಸಿದ್ದಾರೆ. ಅದನ್ನು ತಮ್ಮ ಮತಗಳಲ್ಲಿ ತೋರಿಸಿದ್ದಾರೆ.

ಅಮೆರಿಕನ್ ಮತ್ತು ಯುರೋ
ಸಾಮ್ರಾಜ್ಯಶಾಹಿಗಳ ವಿರುದ್ಧ ಸೆಡ್ಡು
ನಿಂತದ್ದೂ, ಅವರ ಸ್ವತಂತ್ರ ವಿದೇ
ಕೊರಿಯ ಜನಪ್ರಿತೆಯನ್ನು
ಬುಶ್ ಅಧ್ಯಕ್ಷ ಅವಧಿಯಲ್ಲೇ
ಮಂಟಾದಲ್ಲಿ ಅಮೆರಿಕನ್ ಮಿಲಿಟ
ವಿಸ್ತರಣೆ ನಿರಾಕರಿಸಿದ್ದರು.
ನೇತೃತ್ವದಲ್ಲಿ ರೂಪಿಸಲಾದ
ಲ್ಯಾಟಿನ್ ಅಮೆರಿಕ ದೇಶದ ಕೂ
(ಅಲ್ಬಾ, ಸೆಲಾಕ್, ಉನಾಸುರ್)
ಭಾಗಿಯಾಗಿದೆ. ಅಮೆರಿಕದ
ಸ್ಥಾಪಕ ಜೂಲಿಯನ್ ಅಸಾಂಜ್
ಅಮೆರಿಕಕ್ಕೆ ಕರೆದುಕೊಂಡು ಹೋಗಿ
ಸಂಚನ್ನು ಸೋಲಿಸಲು, ಅಸಾಂಜ್
ಲಂಡನಿನ ತಮ್ಮ ರಾಯಭಾರ ಕಚೇ
ರಾಜಕೀಯ ಆಶ್ರಯ ಕೊಡುವ
ತೋರಿದ್ದಾರೆ. ಕೊರಿಯ ಅವರ
ವಿಜಯ ಲ್ಯಾಟಿನ್ ಅಮೆರಿಕದ
ಸಾಮ್ರಾಜ್ಯಶಾಹಿ-ವಿರೋಧಿ ಹೋ
ಒಂದು ಮಹತ್ವದ ಮೈಲಿಗಲ್ಲು.
ಅವರು ನಿರೂಪಿಸಿದ '21ನೇ ಶತ
ಸಮಾಜವಾದ'ದತ್ತ ನಡೆಯುವುದು
ಗುರಿ ಎಂದು ಕೊರಿಯ ಸಾರಿ
ಇನ್ನಷ್ಟು ಮಹತ್ವದ ಸಂಗತಿ.

ವಿಧಾನ ಸಭಾ ಚುನಾವಣೆಗಳು...

ಪುಟ 11 ರಿಂದ

ಕಾರ್ಮಿಕ ಮಂತ್ರಿಗಳು ರಚಿಸಿದ ಭವಿಷ್ಯ ನಿಧಿ ಸಮಿತಿಯಲ್ಲೂ ಸಿಐಟಿಯುವನ್ನು ಉಪೇಕ್ಷಿಸಿರುವುದನ್ನು ಕಾಣುತ್ತೇವೆ.

ಕೇಂದ್ರ ಸರಕಾರ 15ನೇ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ದ ಶಿಫಾರಸಿನಂತೆ ಅಗತ್ಯ ಆಧಾ ರಿತ ಕನಿಷ್ಟ ಕೂಲಿಗಳು, ಜೊತೆಗೆ ಸುಪ್ರಿಂ ಕೋರ್ಟ್ ಮೊಕದ್ದಮೆಗಳ ಪ್ರಕಾರ 25ಶೇ. ಸೇರಿಸಬೇಕೆಂಬ ಒಮ್ಮತದ ನಿರ್ಣಯವನ್ನು ಜಾರಿಗೊಳಿಸಲು ಏನು ಮಾಡಿದೆ? ನಮಗೆ ಇದಕ್ಕೆ ಉತ್ತರ ಗೊತ್ತಿಲ್ಲವೇ? ಅವರಿಗೆ ಆಳುವ ವರ್ಗಗಳ ಹಿತಗಳನ್ನು ಕಾಪಾಡಬೇಕಾಗಿದೆ, ಅದಕ್ಕಾಗಿ ಯಾವುದೇ ರಂಗದಲ್ಲಿ ಕಾರ್ಮಿಕರ ಸಂಬಳಗಳನ್ನು ಏರಿಸುತ್ತಿಲ್ಲ.

ಬದಲಿಗೆ, ಈ ಸರಕಾರಗಳು, ಅಂದರೆ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರ ಮತ್ತು ಕಾಂಗ್ರೆಸ್ ನೇತೃತ್ವದ ಎರಡು ಯುಪಿಎ ಸರಕಾರಗಳು ಬಂಡವಾಳಶಾಹಿಗಳಿಗೆ 30ಲಕ್ಷ ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ತೆರಿಗೆ ರಿಯಾಯ್ತಿಗಳನ್ನು ಕೊಟ್ಟಿವೆ, ಆದರೆ ದುಡಿಯುವ ಜನಗಳನ್ನು, ಅಂದರೆ ಕಾರ್ಮಿಕರನ್ನು ಮತ್ತು ರೈತರನ್ನು ಶೋಷಿಸಲು ಏನೆಲ್ಲ ಸಾಧ್ಯವೋ ಅವನ್ನೆಲ್ಲ ಮಾಡಿವೆ.

ಭಾರತ್ ಗೋಲ್ಡ್ ಮೈನ್ಸ್ ಚಿನ್ನದ
ಕೆಲಸಗಳನ್ನು ಪುನರಾರಂಭಿಸಲು
ಯಾಗಲೀ, ಯುಪಿಎಯಾಗಲೀ
ಮಾಡಿಲ್ಲ ಎಂಬುದು ಇಲ್ಲಿಯ ದುಡಿ
ಜನಗಳಿಗೆ ಸ್ಪಷ್ಟವಾಗಿ ಗೊತ್ತು. ಈ ಗುಂ
ದಲಿತರನ್ನು, ಆದಿವಾಸಿಗಳನ್ನು ಶೋ
ಅಲ್ಪಸಂಖ್ಯಾತರನ್ನು ಮತ್ತು ಹಿ
ವರ್ಗಗಳ ದಮನ ಮಾಡಿವೆ.

ಸಂಸತ್ತಿನಲ್ಲಿ ಮಸೂದ
ಮಂಡಿಸಿದರೂ ಮಹಿಳೆಯರಿಗೆ, ದುಡಿ
ಮಹಿಳೆಯರು ಶೋಷಣೆಯಿಂದ ಪಾ
ಪೋಲೀಸ್ ಯಂತ್ರ ಎಷ
ಭ್ರಷ್ಟಗೊಂಡಿದೆಯೆಂದರೆ, ಬೆಂಗಳೂರಿ
ಸ್ಥಳಗಳಲ್ಲೂ ಮಹಿಳೆಯರ
ಅತ್ಯಾಚಾರಗಳು, ದೌರ್ಜನ್ಯಗಳು ಹೆ
ಕೇಂದ್ರ ಸರಕಾರಕ್ಕಾಗಲೀ, ಇಲ್ಲಿಯ ಭಾ
ಸರಕಾರಕ್ಕಾಗಲೀ ಏನೂ ಮಾಡಲಾಗಿ

ರೈತರ ವಿಷಯ ಬಂದಾಗ ಕಾ
ಪಕ್ಷವಾಗಲೀ, ಭಾಜಪಾವ
ಮಾಡುವುದು ಒಂದೇ ತೆರನ ಕೆಲ
ಎರಡೂ ಸರಕಾರಗಳ ಆಳ್ವಿಕೆಯಲ್ಲಿ
ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಾಂಗ್ರೆಸ್, ಉತ್ತರ ಕರ್ನಾ
ಹೈದರಾಬಾದ್ ಪ್ರದೇಶದ ಹಿತ
ಒಂದು 371ನೇ ಕಲಮನ್ನು ತಿದ್ದು

ಮಾನ್ಯ ಪ್ರಧಾನಿಗಳೇ, ಸಾರ್ವಜನಿಕ ಹೂಡಿಕೆಯೇ ಸರಿಯಾದ......

ಪುಟ 7 ರಿಂದ

ತಾನೇ. ಹೀಗಾಗಬೇಕಾದರೆ ಆರ್ಥಿಕದಲ್ಲಿ ...ಷ್ಟು ಕೊಳ್ಳುವ ಶಕ್ತಿಯಿರಬೇಕು. ...ತಿಕವಾಗಿ ಆರ್ಥಿಕ ನಿಧಾನಗತಿ ಮತ್ತು ಜಾಗತಿಕ ವ್ಯಾಪಾರದಲ್ಲಿ ತೀವ್ರ ಇಳಿಕೆಯಿಂದಾಗಿ ದೇಶದೊಳಗಿನ ಹೂಡಿಕೆಯ ಉತ್ಪನ್ನಗಳನ್ನು ...ದೇಶಗಳಲ್ಲಿ ಮಾರುವಂತಿಲ್ಲ. ದೇಶದೊಳಗೆ, ಸಬ್ಸಿಡಿಗಳನ್ನು ತೀವ್ರವಾಗಿ ಕಡಿತ ಮಾಡಿ, ಇಂಧನ ಬೆಲೆಗಳನ್ನು ಆಡಳಿತಾತ್ಮಕವಾಗಿಯೇ ಹೆಚ್ಚಿಸಿ, ಒಟ್ಟಾರೆಯಾಗಿ ನಾಗಾಲೋಟ ಹೂಡಿರುವ ಬೆಲೆಗಳ ಮೂಲಕ ಬಹುಪಾಲು ಭಾರತೀಯ ಜನಗಳ ಕೊಳ್ಳುವ ಶಕ್ತಿಯನ್ನು ಹಿಂಡಿ ಹಾಕಲಾಗಿದೆ.

ಹೀಗೆ ಜಾಗತಿಕವಾಗಿಯೂ, ದೇಶದ ಒಳಗೂ ಕೊಳ್ಳುವ ಸಾಮರ್ಥ್ಯ ಇಳಿದಿರುವಾಗ, ಭಾರತೀಯ ಆರ್ಥಿಕದ ನಿಧಾನಗತಿಯನ್ನು ಹಿಮ್ಮೆಟ್ಟಿಸಬೇಕಾದರೆ ಅದು ಭಾರತೀಯ ಜನತೆಯ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿದರೆ ಮಾತ್ರ ಸಾಧ್ಯ. ಅದಕ್ಕೆ ಯುಪಿಎ ಸರಕಾರ ಕೊಡಮಾಡುತ್ತಿರುವ ಬೃಹತ್ ಪ್ರಮಾಣದ ತೆರಿಗೆ ರಿಯಾಯ್ತಿಗಳನ್ನು ನಿಲ್ಲಿಸಿ, ಈ ಸಂಪನ್ಮೂಲಗಳನ್ನು ಬೃಹತ್ ಪ್ರಮಾಣದ ಸಾರ್ವಜನಿಕ ಹೂಡಿಕೆಗಳಿಗೆ ಬಳಸಿದರೆ ಮಾತ್ರ ಸಾಧ್ಯ. ಇದು ನಮಗೆ ಬಹುವಾಗಿ ಬೇಕಾದ ಮೂಲರಚನೆಗಳನ್ನು ನಿರ್ಮಿಸುತ್ತದೆ, ಜತೆಗೆ ಗಮನಾರ್ಹ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನೂ ಸೃಷ್ಟಿಸುತ್ತದೆ. ಇದರಿಂದ ದೇಶದೊಳಗಿನ ಬೇಡಿಕೆಯ ವಿಸ್ತರಣೆ ಹೂಡಿಕೆಗಳನ್ನು ಹೆಚ್ಚಿಸಲು ಉತ್ತೇಜನೆ ಒದಗಿಸಿ, ಭಾರತ ಹೆಚ್ಚು ತಾಳಿಕೆಯ ಬೆಳವಣಿಗೆಯ ಕಾರ್ಯತಂತ್ರವನ್ನು ಅನುಸರಿಸಲು ಸಾಧ್ಯವಾಗುತ್ತದೆ.

ಪ್ರಧಾನಮಂತ್ರಿಗಳು ಉದ್ದೀಪಿಸಬಯಸುವ ಆಶಾವಾದದಿಂದ ಸಂತೃಪ್ತಗೊಳ್ಳುವ ಬದಲು, ಭಾರತದ ಕಾರ್ಪೊರೇಟ್ ಬಳಗ, ಭಾರತೀಯ ಜನತೆಯ ಮತ್ತು ಆರ್ಥಿಕದ ಒಟ್ಟಾರೆ ಹಿತಾಸಕ್ತಿಯಿಂದಲ್ಲವಾದರೂ, ತನ್ನ ಸ್ವಂತ ಹಿತದೃಷ್ಟಿಯಿಂದಲಾದರೂ, ಈ ಸರಕಾರದಿಂದ ಇನ್ನಷ್ಟು ರಿಯಾಯ್ತಿಗಳನ್ನು ಕೇಳುವುದನ್ನು ನಿಲ್ಲಿಸಿ, ಅದು ವ್ಯಾಪಕ ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ವಿಸ್ತರಿಸುವಂತೆ ಆಗ್ರಹಿಸಬೇಕು. ಶ್ರೀಯುತ ಪ್ರಧಾನ ಮಂತ್ರಿಗಳೇ, ಇದೀಗ "ಸಮಸ್ಯೆಯ ಸರಿಯಾದ ವಿಶ್ಲೇಷಣೆ"ಯನ್ನು ಆಧರಿಸಿದ "ಸರಿಪಡಿಕೆಯ ಕಾರ್ಯತಂತ್ರ".

...ಚಳಕ ನಡೆಸಿದೆ. ವಾಸ್ತವವಾಗಿ ಇದು ...ಷ್ಕಳ ಖನಿಜ ಸಂಪತ್ತು ಮತ್ತು ಕಬ್ಬಿಣದ ಅದಿರು, ಸುಣ್ಣದ ಕಲ್ಲು ಮುಂತಾದ ಕಚ್ಚಾ ಸಾಮಗ್ರಿಗಳನ್ನು, ನೀರು ಮತ್ತು ಮಾನವ ಸಂಪನ್ಮೂಲಗಳನ್ನು ಹೊಂದಿದ್ದರೂ ಅತ್ಯಂತ ಶೋಷಣೆಗೊಳಗಾಗಿರುವ ಪ್ರದೇಶ. ಆದರೆ, ಉದ್ಯೋಗ ಮಾರುಕಟ್ಟೆ ಕುಸಿಯುತ್ತಿರುವಾಗ, ಸರಕಾರೀ ಉದ್ಯೋಗದಲ್ಲಿ ನೇಮಕಾತಿಗಳ ಮೇಲೆ ನಿಷೇಧ ಹಾಕಿರುವಾಗ, ಕೆಲಸದ ಹೊರಗುತ್ತಿಗೆ ಮತ್ತು ರಕ್ಷಣೆಯಿಲ್ಲದ ಕಾಂಟ್ರಾಕ್ಟ್ ಉದ್ಯೋಗ ಖಾಯಂ ಲಕ್ಷಣವಾಗಿರುವಾಗ, ಖಾಸಗಿ ವಲಯದಲ್ಲಿ ಮೀಸಲಾತಿಯನ್ನು ನಿರಾಕರಿಸುತ್ತಿರುವಾಗ ಉದ್ಯೋಗದಲ್ಲಿ ಮೀಸಲಾತಿ ಕೊಡುವುದಾಗಿ ಹೇಳಿರುವುದು ಹೇಗೆ ತಾನೇ ಹೈದರಾಬಾದ್ ಪ್ರದೇಶದ ಅಥವ ಉತ್ತರ ಕರ್ನಾಟಕದ ಹಿತಗಳನ್ನು ಈಡೇರಿಸಲು ಸಾಧ್ಯ?

ಎಡಪಕ್ಷಗಳು ಮಾತ್ರವೇ

ಎಡಪಕ್ಷಗಳು ಮಾತ್ರವೇ ಜನತೆಯ ಹಕ್ಕುಗಳ ಖಾತ್ರಿ ನೀಡಬಲ್ಲವು. ಕಳೆದ ವಿಧಾನಸಭೆಯಲ್ಲಿ ದುಡಿಯುವ ಜನಗಳ ಒಬ್ಬರಾದರೂ ಪ್ರತಿನಿಧಿ ಇರಲಿಲ್ಲ. ಏಕೆಂದರೆ ಜಿ.ವಿ. ಶ್ರೀರಾಮರೆಡ್ಡಿಯವರು ಬಾಗೇಪಲ್ಲಿ ಸ್ಥಾನವನ್ನು ಉಳಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಈ ಬಾರಿ, ಎಲ್ಲ ಮುಖ್ಯವಾಹಿನಿಯ ಪಕ್ಷಗಳು ಅವರನ್ನು ಸೋಲಿಸಲು ಹಣ ಸುರಿಯುತ್ತಿದ್ದರೂ, ಶಕ್ತಿ ಕ್ರೋಡೀಕರಿಸುತ್ತಿದ್ದರೂ, ಅವಕಾಶ ಉತ್ತಮವಿದೆ. ಸಿಪಿಐ(ಎಂ) 20 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ, ಜತೆಗೆ ಸಿಪಿಐ ಮತ್ತು ಫಾರ್ವರ್ಡ್ ಬ್ಲಾಕ್ ಸೇರಿ ಎಡಪಕ್ಷಗಳು ಒಟ್ಟು ಸುಮಾರು 40 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ. ಕಾರ್ಮಿಕ ವರ್ಗ ಎಡಪಕ್ಷಗಳ ಚುನಾವಣಾ ನಿಧಿಗಳಿಗೆ ಉದಾರವಾಗಿ ಕೊಡುಗೆ ನೀಡಿದರೆ ಮತ್ತು ಎಡಪಕ್ಷಗಳು ಸ್ಪರ್ಧಿಸುವ ಪ್ರತಿಯೊಂದು ಕ್ಷೇತ್ರದಲ್ಲಿ ಪ್ರಚಾರ ಕಾರ್ಯದಲ್ಲಿ ಭಾಗವಹಿಸಿದರೆ, ಈ ಬಾರಿ ಕರ್ನಾಟಕದ ವಿಧಾನಸಭೆಯಲ್ಲಿ ಎಡ ಪ್ರಾತಿನಿಧ್ಯ ಖಂಡಿತವಾಗಿ ಇರುತ್ತದೆ.

ಬೇರೆಡೆಗಳಲ್ಲಿ ದುಡಿಯುವ ಜನಗಳ ಮುಂದೆ ಸ್ವತಂತ್ರ ಮತ್ತು ಬಲಿಷ್ಟ ಜನಪರ ಶಕ್ತಿಗಳನ್ನು ಪ್ರೋತ್ಸಾಹಿಸುವ ಆಯ್ಕೆ ಇದೆ. ಇದು ಮುಂಬರುವ ಚುನಾವಣೆಗಳಲ್ಲಿ ದುಡಿಯುವ ಜನಗಳ ಪಾತ್ರದ ಸಾರಾಂಶ.

ಪ್ರಾದೇಶಿಕತೆಯ ಹೊದಿಕೆಯೂ......

ಪುಟ 3 ರಿಂದ

ತಾತ್ವಿಕ ವಿರೋಧ ವ್ಯಕ್ತಪಡಿಸಿ 'ಒಕ್ಕಣ್ಣಿನ ಕವಿ' ಎಂದು ಛೇಡಿಸಿದ ಚಂಪಾ ಈಗ ಕೊನೆಗಣ್ಣಾದರೂ ತೆರೆಯಬಾರದೇ? ಅಂದು ಭಾರತ ಬ್ರಿಟೀಷರಿಂದ ಸ್ವತಂತ್ರವಾದ ಬಳಿಕ ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಕಮ್ಯೂನಿಸ್ಟರು ಚಳುವಳಿಗಳ ನೇತೃತ್ವ ವಹಿಸಿದರು. ಕರ್ನಾಟಕದಲ್ಲಿಯೂ ಇಡೀ ಕಮ್ಯೂನಿಸ್ಟ್ ಪಕ್ಷ, ಕಮ್ಯೂನಿಸ್ಟ್ ನಾಯಕರಾದ ಎನ್.ಎಲ್. ಉಪಾಧ್ಯಾಯ, ಎನ್.ಕೆ.ಉಪಾಧ್ಯಾಯ , ಬಿ.ವಿ.ಕಕ್ಕಿಲ್ಲಾಯ, ಸೂರಿ, ಕೃಷ್ಣನ್ ಮುಂತಾದವರ ನೇತೃತ್ವದಲ್ಲಿನ ಧೀಮಂತ ಚಳುವಳಿ ಹೆಜ್ಜೆಗಳನ್ನು ಹೊಸಕಿ ಹಾಕಲು ಸಾಧ್ಯವೇ? ಬೇರೆಯವರು ಈ ಇತಿಹಾಸದ ಸತ್ಯವನ್ನು ಬೇಕೆಂದೇ ಮರೆಸುತ್ತಾರೆ. ಆದರೆ ಚಂಪಾರಿಗೆ ಏನಾಗಿದೆ?

ಈ ಹಿಂದೆ ಕನ್ನಡ ಬಾಷಾ ಕಲಿಕೆಯ ವಿಷಯದಲ್ಲಿ ಆರಂಭದಲ್ಲಿ ಗೋಕಾಕ್ ಚಳುವಳಿಯಲ್ಲಿ ಮುಖ್ಯ ಪಾತ್ರ ವಹಿಸಿದ್ದ ಕಮ್ಯೂನಿಸ್ಟರು ಅದು ಅನ್ಯ ಬಾಷಾ ವಿರೋಧಿಯಾಗಿ, ದುಡಿಯುವ ವರ್ಗದ ವಿರೋಧಿಯಾಗಿ ಹಾದಿ ತಪ್ಪುತ್ತಿರುವಾಗ ಪ್ರತಿಯೊಬ್ಬ ಪ್ರಜೆಯೂ ತನ್ನ ಮಾತೃ ಭಾಷೆಯ ಕಲಿಕೆ ಮೂಲಭೂತ ಹಕ್ಕಾಗಿದ್ದು ಯಾರ ಮೇಲೂ ಇನ್ನೊಂದು ಭಾಷಾ ಹೇರಿಕೆ ಸಲ್ಲದೆಂದು ತಾತ್ವಿಕವಾಗಿಯೇ ವಿರೋಧಿಸಿದವರು ಕಮ್ಯೂನಿಸ್ಟರು. ಸಂವಿಧಾನ, ಪ್ರಜಾಪ್ರಭುತ್ವದ ಕನಿಷ್ಠ ಮೌಲ್ಯಗಳ ಬಗ್ಗೆ, ಭಾರತದಂತಹ ಒಕ್ಕೂಟ ವ್ಯವಸ್ಥೆಯ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದೇ ಕೇವಲ ಭಾವೋದ್ರೇಕದಲ್ಲಿ ಫಲ ಪಡೆಯಬಹುದೆನ್ನುವವರು ಯಾರೆಂದು ಬೇರೆ ಹೇಳಬೇಕೆ?

ಕನ್ನಡದ ಭಾಷೆ, ಸಂಸ್ಕೃತಿ, ಜನರ ಬದುಕು ಉಳಿದು ಬೆಳೆಯುವುದು ಬೋರ್ಡ್, ಸೀಲು ವಶ ಮತ್ತು ಅನ್ಯ ಭಾಷಿಕರ ಮೇಲೆ 'ದಾಳಿ' ಮಾಡುವುದರಿಂದ ಆಗಲೀ, ಭುವನೇಶ್ವರಿಗೆ ಹೆಬ್ಬೆರಳ ರಕ್ತ ಅರ್ಪಣೆಯಿಂದಲಾಗಲೀ ಆಗುತ್ತದೆ ಎಂಬ ತೆಳುವಾದ ತಿಳುವಳಿಕೆ ಕಮ್ಯೂನಿಸ್ಟರದ್ದಲ್ಲ. ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಸಬೇಕೆಂದೂ, ಕನ್ನಡವೇ ಆಡಳಿತ ಭಾಷೆಯಾಗಬೇಕೆಂದು ಮೊದಲಿನಿಂದಲೂ ಆಗ್ರಹಿಸುತ್ತಾ ಬಂದವರು ಕಮ್ಯೂನಿಸ್ಟರೆಂಬುದನ್ನು ಚಂಪಾರಂಥವರು ಯಾಕೆ ಹೇಳುವುದಿಲ್ಲ? ಇನ್ನು ಜಾಗತೀಕರಣ, ಉದಾರೀಕರಣದ ಯುಗದಲ್ಲಿ ಕನ್ನಡದಂತಹ ಭಾರತೀಯ ಪ್ರಾದೇಶಿಕ ಭಾಷೆಗಳ ಅಳಿವು-ಉಳಿವಿನ ಬಗ್ಗೆ, ಕರ್ನಾಟಕದ ಪ್ರಗತಿ ಬೆಳವಣಿಗೆ ಬಗ್ಗೆ ಕಮ್ಯೂನಿಸ್ಟರಿಗೆ ಆಳವಾದ ತಿಳುವಳಿಕೆ ಮತ್ತು ಹೋರಾಟದ ಸ್ಪಷ್ಟ ಕಲ್ಪನೆಗಳಿವೆ, ಕಾರ್ಯಕ್ರಮಗಳಿವೆ. ಆದರೆ ಚಂಪಾರವರು ಹತ್ತಿರುವ ದೋಣಿಯ ನೂತನ ಸಾರಥಿಯೊಂದಿಗೆ ಐಡೆಂಟಿಟಿಗೆ ಹಲವು ಸಂಕೇತಗಳ ಅಗತ್ಯವಿರಬಹುದು. ಕಮ್ಯೂನಿಸ್ಟರಿಗಲ್ಲ.

ಹಲವು ಆಯಾಮಗಳ ಹೋರಾಟ

ಆದ್ದರಿಂದ ನಿಜಕ್ಕೂ ಭಾಷೆ-ಸಂಸ್ಕೃತಿಯ ರಕ್ಷಣೆಯ ಮಾರ್ಗಗಳ ಬಗ್ಗೆ ತಡಕಾಡುತ್ತಿರುವವರು ಯಾರು? ಕನ್ನಡದ ರಕ್ಷಣೆಯ ಬಗ್ಗೆ ಬಾಳಠಾಕ್ರೆ-ಶಿವಸೇನಾದ ವಿಛಿದ್ರಕಾರೀ, ಸಂಕುಚಿತವಾದೀ ಸಿದ್ಧ ಮಾದರಿಯನ್ನು ಅನುಸರಿಸುವ ಅಗತ್ಯ ಚಂಪಾರವರಿಗಿರಬಹುದು. ಆದರೆ ದುಡಿಯುವ ಜನತೆಯ ಐಕ್ಯತೆ ಬಯಸುವ , ನಾಡು ಪ್ರೀತಿಸುವ ಕಮ್ಯೂನಿಸ್ಟರಿಗೆ ಖಂಡಿತ ಇಲ್ಲ. ಲೋಹಿಯಾ ಸಮಾಜವಾದಿಗಳೇ ಛಪ್ಪನ್ನೈವತ್ತಾರು ಬಣಗಳಾಗಿ ಪರಸ್ಪರ ವೈರುಧ್ಯಗಳ ಗೂಡುಗಳಾಗಿ ಅಹಮಿಕೆಯ ಅರಾಜಕತೆಯಲ್ಲಿ ಭಾರತೀಯ ಸಮಾಜವನ್ನು, ಕರ್ನಾಟಕವನ್ನು ಅರ್ಥ ಮಾಡಿ ಕೊಳ್ಳಲಾಗದೇ ಢಿಕ್ಕಿ ಹೊಡೆಯುತ್ತಿರುವಾಗ ವಿವಿಧ ಪ್ರಯೋಗಗಳ ಮೂಲಕ ಗಟ್ಟಿ ಅನುಭವ ಪಡೆಯುತ್ತಾ ಹೊಸತನಕ್ಕೆ ಒಡ್ಡಿಕೊಳ್ಳುವ ಕಮ್ಯೂನಿಸ್ಟರಿಗೆ ಭಾರತವೂ, ಕರ್ನಾಟಕವೂ ಆರ್ಥವಾಗೇ ಇಲ್ಲ ಎನ್ನುವ ಚಂಪಾರವರು ಆಧುನಿಕ ಕಾಲದಲ್ಲಾದರೂ ತಮ್ಮ ಎಂದಿನ ಕಾಲದ ಹಳೇ ಸಮಾಜವಾದಿಗಳ ಪೂರ್ವಾಗ್ರಹವನ್ನು ಬದಲಾಯಿಸಿಕೊಳ್ಳಬಲ್ಲರೇ?

ಅಂದ ಮಾತ್ರಕ್ಕೆ ಪ್ರೊ.ಚಂಪಾರವರ ನಾಡು, ನುಡಿಯ ಬಗೆಗಿನ ಕಾಳಜಿಗಳನ್ನು, ಜಾತ್ಯಾತೀತತೆ, ಪ್ರಜಾಪ್ರಭುತ್ವೀಯ, ಪ್ರಗತಿಪರ ಚಳುವಳಿಗೆ ಅವರ ಕೊಡುಗೆ, ಪಾತ್ರವನ್ನು ಸಾರಾ ಸಗಟು ನಿರಾಕರಿಸಿ ಅಲ್ಲಗಳೆಯಲಾಗುವುದಿಲ್ಲ. ಕಮ್ಯೂನಿಸ್ಟ್ ಆಂದೋಲನವೂ ಸದಾ ವಿಮರ್ಶೆ ಸ್ವಯಂ ವಿಮರ್ಶೆಯಿಂದಲೇ ಬೆಳೆಯುತ್ತದೆ. ಆದರೆ ಆವೇಶದ, ಅರೆ ಬರೆ ಅವಸರದ ಆಧಾರರಹಿತ ಬೀಸು ಹೇಳಿಕೆಗಳಿಂದ ಯಾರೂ ಪ್ರಭಾವಿತರಾಗುವುದಿಲ್ಲ. ಅಂತಹುಗಳ ಅಗತ್ಯವೂ ಇಲ್ಲ.

ಗಣಿ- ಭೂಗಳ್ಳರದ್ದು ಯಾವ ಪ್ರಾದೇಶಿಕ ಹಿತಾಸಕ್ತಿ?

ಇನ್ನು ಅವರು ಪ್ರಾದೇಶಿಕ ಪಕ್ಷವೇ ರಾಜ್ಯಕ್ಕೆ ಮದ್ದು ಎನ್ನುವ ವಿಶ್ಲೇಷಣೆಯ ಬಗ್ಗೆ ಪ್ರಸಕ್ತವಾಗಿ ಹೆಚ್ಚಿನ ಚರ್ಚೆ ಈಗಂತೂ ಅನಗತ್ಯ. ವಿಧಾನಸಭಾ ಚುನಾವಣೆಗಳ ಬಳಿಕ ಜನತೆಯೇ ಇದಕ್ಕೆ ಮತ್ತೊಮ್ಮೆ ಸೂಕ್ತ ಉತ್ತರ ಹೇಳುತ್ತಾರೆ. ಯಾಕೆ ಅರಸು ನಂತಹ 'ಮಹಾನಾಯಕರು' ಕರೆನೀಡಿದಾಗಲೂ ಬೇರೆಡೆಯಂತೆ ಕರ್ನಾಟಕದಲ್ಲಿ ಜನತೆ ಪ್ರಾದೇಶಿಕ ಪಕ್ಷಗಳನ್ನು ಪುರಸ್ಕರಿಸದೇ ತಿರಸ್ಕರಿಸಿದ್ದಾರೆ. ಎಂಬುದನ್ನು ನಂತರ ಚರ್ಚಿಸಬಹುದು .ಆದರೆ ಒಂದಂತೂ ನಿಜ, ಯಡಿಯುರಪ್ಪನವರ ಕೆಜೆಪಿ ಪಕ್ಷವಾಗಲೀ, ರೆಡ್ಡಿಗಳ ಬಿ.ಎಸ್.ಆರ್ ಮತ್ತು ಅಶೋಕ್ ಖೇಣಿಯ ಮಕ್ಕಳ ಪಕ್ಷಗಳ ಹುಟ್ಟು ಈ ಅವಧಿಯಲ್ಲೇ. ಆದರೆ ಅವು ಹುಟ್ಟಿದ್ದು ರಾಜ್ಯದ ಹಿತಗಳಿಗಾಗಿ, ಪ್ರಾದೇಶಿಕ ಪ್ರೀತಿಯಿಂದ ಎಂದು ಯಾರಾದರೂ ಭಾವಿಸಿದ್ದರೆ ಅದು ಮೂರ್ಖತನವಷ್ಟೆ. ಈಗಾಗಲೇ ಕರ್ನಾಟಕವನ್ನು ಮನಸಾರೆ ಲೂಟಿ ಮಾಡಿ, ಇನ್ನೂ ಲೂಟಿಯ ಕಿತ್ತಾಟದ ಸ್ಪರ್ಧೆಯಲ್ಲಿ , ಹಗರಣಗಳಿಗೆ ಸಿಕ್ಕು ಅಪರಾಧಿ ಸ್ಥಾನದಲ್ಲಿರುವ ಅವರಿಗೆ ಮತ್ತೇ ಅಂತಹದ್ದೇ ಅವಕಾಶಗಳು ಬೇಕು. ಕೇಸ್ ಗಳಿಂದ ತಪ್ಪಿಸಿಕೊಳ್ಳಬೇಕು. ಲೂಟಿ ಮಾಡಿದ್ದು ದಕ್ಕಿಸಿಕೊಳ್ಳಬೇಕು . ಭೂಗಳ್ಳ ಮತ್ತು ಗಣಿ ಮಾಫಿಯಾಗಳಾಗಿರುವ ಇವರಿಗೆ ಇದನ್ನು ಬಿಟ್ಟರೆ ಬೇರೇನು ಇರಲು ಸಾಧ್ಯ. ಆದ್ದರಿಂದ ಇವರನ್ನು ಇಲ್ಲದ ವ್ಯಾಖ್ಯಾನದಿಂದ ಶೃಂಗರಿಸಿ ಮೆರೆಸುವುದೂ ಅಗತ್ಯವಿಲ್ಲ.

ನಮ್ಮ ಗಮನ ಇರಬೇಕಾದ್ದು

ನಮ್ಮ ಗಮನ ಕೇಂದ್ರೀಕರಿಸಬೇಕಾದ್ದು ದೇಶವನ್ನು, ರಾಜ್ಯವನ್ನು ದಿವಾಳಿಯೆಬ್ಬಿಸುತ್ತಿರುವ ಕಾಂಗ್ರೆಸ್ ಮತ್ತು ಬಿಜೆಪಿಗಳ ಕೈಗೆ ಅಧಿಕಾರ ಸಿಗದಂತೆ ಮಾಡುವುದರತ್ತ, ಅಂದರೆ ನಿರ್ಣಾಯಕವಾಗಿ ಸೋಲಿಸುವುದರತ್ತ. ಇದರಲ್ಲಿ ಯಾರೇ ಬಹುಮತ ಗಳಿಸಿ ಅಧಿಕಾರಕ್ಕೆ ಬಂದಲ್ಲಿ ನಾಡಿನ ವಿನಾಶ ಮತ್ತಷ್ಟೂ ಖಂಡಿತ. ಹಾಗಾಗಿ ಜನತೆ ಇದರತ್ತ ಗಮನ ಕೇಂದ್ರೀಕರಿಸಬೇಕಿದೆ. ಎಡ ಮತ್ತು ಪ್ರಗತಿಪರ ಶಕ್ತಿಗಳ ಪ್ರಾತಿನಿಧ್ಯವನ್ನು ತರಬೇಕಿದೆ.

JANASHAKTHI KANNADA VARA PATRIKE APR 14, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Sa
Licensed to Post without prepayment License No. WPP-




ಜಿ.ಎನ್. ನಾಗರಾಜ್ 29

ಕೋಮಿಂಟಾಂಗ್ ಪಕ್ಷದ ಸ್ವರೂಪ ಬದಲಾವಣ ಮತ್ತು ಕಮ್ಯುನಿಸ್ಟ್ ಪಕ್ಷದೊಂದಿಗೆ ಮೈತ್ರಿ

ಚೀನಾ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನ ಕೋಮಿಂಟಾಂಗ್ ಪಕ್ಷದ ಜೊತೆ ಮೈತ್ರಿ ಬೆಳೆಸಬೇಕು, ಅದರ ಸದಸ್ಯರಾಗಿ ಸೇರಬೇಕು ಎಂಬ ಮಹತ್ವದ ತೀರ್ಮಾನ ಮಾಡಿತು. ಈ ಹಿನ್ನೆಲೆಯಲ್ಲಿ ಈ ಪಕ್ಷದ ಸ್ವರೂಪವೇನು , ಚೀನಾದ ಕ್ರಾಂತಿಕಾರೀ ಚಳುವಳಿಯ ಬೆಳವಣಿಗೆಗೆ ಇದು ಕೊಡಬಹುದಾದ ಕೊಡುಗೆ ಏನು ಎಂಬುದನ್ನು ತಿಳಿದುಕೊಳ್ಳೋಣ.

ಈಗ ನಾವು ಹಿಂದಕ್ಕೆ ಪಯಣಿಸುತ್ತಾ ಈ ಮಾಲೆಯ ಆರು, ಏಳನೆಯ ಭಾಗಗಳತ್ತ ನೋಡಬೇಕಾತ್ತದೆ. 1911 ರಲ್ಲಿ ಚೀನಾದ ಸಾಮ್ರಾಟರನ್ನು ಕಿತ್ತು ಹಾಕಿದ ಕಾಂತ್ರಿಗೆ ನೇತೃತ್ವ ನೀಡಿದ ಸನ್ ಯಾತ್ ಸೇನ್ ರವರು 1912 ರಲ್ಲಿ ಸಾಪಿಸಿದ ಪಕ್ಷ ಅದು. ಆದರೆ ಈ ಕ್ರಾಂತಿಯ ನಂತರ ಚೀನಾದಲ್ಲಿ ಅವರ ಕನಸಿನ ಪ್ರಜಾಪ್ರಭುತ್ವವನ್ನು ಸ್ಥಾಪಿಸಲಾಗದೇ ಸಾಮ್ರಾಟನ ಸೇನಾಧಿಕಾರಿಯ ಕೈಗೆ , ವಿವಿಧ ಪ್ರಾಂತ್ಯಗಳ ಯುದ್ಧಕೋರ ಪಾಳೆಯಗಾರರ ಕೈಗೆ ಅಧಿಕಾರವನ್ನು ಒಪ್ಪಿಸಿದ್ದನ್ನು ಒದಿದ್ದೀರಿ. ಆದರೆ ಪ್ರಜಾಪ್ರಭುತ್ವವನ್ನು ನೆಲೆಗೊಳಿಸುವ ಅವರ ಕನಸನ್ನು ನನಸು ಮಾಡಲು ನಿರಂತರ ಪ್ರಯತ್ನ ನಡೆಸುತ್ತಲೇ ಹೋದರು. ಚೀನಾದಲ್ಲಿ ಒಂದು ಆಧುನಿಕ ರಾಜಕೀಯ ಪಕ್ಷವನ್ನು ಸ್ಥಾಪಿಸಿ ಅದರ ಮೂಲಕ ಆಡಳಿತವನ್ನು ನಡೆಸುವುದು ಈ ಪ್ರಯತ್ನದ ಒಂದು ಭಾಗವಾಗಿತ್ತು. ಆದರೆ ಈ ಪಕ್ಷವೂ ಪಾಳೆಯಗಾರರ ಧಾಳಿಗೊಳಗಾಗಿ ಪಕ್ಷದ ಪ್ರಮುಖ ನಾಯಕರು, ವಿವಿಧ ರಾಜ್ಯಗಳಲ್ಲಿ ಕ್ರಾಂತಿಯ ನಂತರ ಅಧಿಕಾರಕ್ಕೆ ಬಂದ ಪ್ರಜಾಪ್ರಭುತ್ವ ಮನೋಭಾವದ ನಾಯಕರ ಹತ್ಯೆಗಳಿಂದ ಜರ್ಜರಿತವಾಗಿತ್ತು. ಚೀನಾದ ದಕ್ಷಿಣ ಭಾಗದಲ್ಲಿ ಹೆಚ್ಚು ಪ್ರಬಲವಾಗಿದ್ದ ಅದು ಅಲ್ಲಿ ಒಂದು ಸರ್ಕಾರವನ್ನು ಸ್ಥಾಪಿಸಿ ಆಳುವ ಪ್ರಯತ್ನಗಳನ್ನು ನಡೆಸಿತ್ತು. ಉತ್ತರ ಭಾಗದಲ್ಲಿ ಪ್ರಬಲವಾಗಿದ್ದ, ಚೀನಾದ ರಾಜಧಾನಿ ಬೀಜಿಂಗ್‌ನಿಂದ ಆಡಳಿತ ನಡೆಸುತ್ತಿದ್ದ ಯುದ್ಧಕೋರರ ಜೊತೆ ಸೇನಾ ಸಂಘರ್ಷದ ಹೊರೆಯಿಂದ ಏಗುತ್ತಿತ್ತು.

1919 ರ ಮೇ ನಾಲ್ಕರ ಪ್ರಜಾಪ್ರಭುತ್ವದ ಚಳುವಳಿಯ ಅಲೆಯಲ್ಲಿ ಸನ್ ಯಾತ್ ಸೇನ್ ಹಾಗೂ ಅವರ ಕೋಮಿಂಟಾಂಗ್ ಪಕ್ಷ ಪಾತ್ರ ವಹಿಸಲಿಲ್ಲ ಮಾತ್ರವಲ್ಲ ಅದು ಚೀನಾದ ಪರಂಪರೆಯ ಚಿಂತನೆಗಳಿಗೆ ವಿರುದ್ಧವೆಂದು ಅದರ ಕೆಲ ನಾಯಕರ ವಾದವಾಗಿತ್ತು. ಆದರೆ ಈ ಚಳುವಳಿಯ ಬಿರುಸು ಹಾಗೂ ಅದರ ಮೇಲೆ ಪ್ರಭಾವ ಬೀರಿದ ಎಡ ಮತ್ತು ಕಮ್ಯುನಿಸ್ಟ್ ಚಿಂತನೆಗಳನ್ನು ಸನ್ ಯಾತ್ ಸೇನ್ ರವರು ಗಮನಿಸಲಾರಂಭಿಸಿದರು. ಅಮೇರಿಕದಲ್ಲಿ ಶಿಕ್ಷಣ ಪಡೆದು ಅದರ ಪ್ರಭಾವದಲ್ಲಿ ಕಮ್ಯುನಿಸ್ಟರ ಜೊತೆ ಯಾವ ಸಂಬಂಧವೂ ಬೇಡವೆನ್ನುತ್ತಿದ್ದ ಸನ್ ಯಾತ್ ಸೇನ್ ಮಾರ್ಕ್ಸ್ ಹಾಗೂ ಲೆನಿನ್ ರವರ ಕೃತಿಗಳನ್ನು ಅಭ್ಯಾಸ ಮಾಡಲಾರಂಭಿಸಿದರು. ಮೇ ನಾಲ್ಕರ ಚಳುವಳಿಯ ನಂತರ ಭುಗಿಲೆದ್ದ ಕಾರ್ಮಿಕ ಚಳುವಳಿ, ಅದು ಅನೇಕ ಕಡೆ ಪಾಳೆಯಗಾರರನ್ನು ಮಣಿಸಿದ ರೀತಿ, ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಇವು ಸನ್ ರವರನ್ನೂ ಅವರ ಇನ್ನೂ ಕೆಲವು ಜೊತೆಗಾರರನ್ನೂ ಸೆಳೆಯಿತು. ಒಂದು ಕಡೆ ಪಶ್ಚಿಮದ ಸಾಮ್ರಾಜ್ಯಶಾಹೀ ದೇಶಗಳ ಬಗ್ಗೆ ಅವರುಗಳಿಗೆ ಇದ್ದ ಭ್ರಮೆ ಹರಿದುಹೋಗಿದ್ದು ಹಾಗೂ ಕಾರ್ಮಿಕ ಚಳುವಳಿ ಸನ್ ರವರನ್ನು ಸೆಳೆಯಿತು. ಅದೇ ಸಮಯದಲ್ಲಿ ರಷಿಯಾದ ಕಾರ್ಮಿಕ ವರ್ಗದ ಪ್ರಭುತ್ವ ಚೀನಾದಲ್ಲಿ ರಾಯಭಾರಿ ಕಛೇರಿ ಆರಂಭಿಸಿ ಸನ್ ರವರ ಜೊತೆ ಹಲವು ಸುತ್ತಿನ ಮಾತುಕತೆ ನಡೆಸಿದರು.



ಈ ಎಲ್ಲಬೆಳವಣಿಗೆಗಳ ಪರಿಣಾಮವೆಂದರೆ 1921 ರಲ್ಲಿ ನಡೆದ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯದ ಮೂರನೇ ಸಮಾವೇಶದಲ್ಲಿ ಚೀನಾದಿಂದ ಭಾಗವಹಿಸಿದ ಪ್ರತಿನಿಧಿಗಳಲ್ಲಿ ಕೋಮಿಂಟಾಂಗ್ ಪಕ್ಷದವರೂ ಇದ್ದರು. ಕಮುನಿಸ್ಟ್ ಅಲ್ಲದ ಬಂಡವಾಳಶಾಹೀ ಪಕ್ಷವೊಂದು ಈ ಸಭೆಯಲ್ಲಿ ಭಾಗವಹಿಸಿದ್ದೇ ಚೀನಾದ ವಿಶಿಷ್ಟ ಪರಿಸ್ಥಿತಿಯನ್ನು ಎತ್ತಿತೋರಿಸುತ್ತದೆ.

ಒಂದು ಕಡೆ ಚೀನೀ ಕಮ್ಯುನಿಸ್ಟ್ ಪಕ್ಷದಲ್ಲಿ ಕೋಮಿಂಟಾಂಗ್ ಪಕ್ಷದ ಜೊತೆ ಸಂಬಂಧ ಬೆಳೆಸುವ ನಿರ್ಣಯ ವಾಗುತ್ತಿದ್ದಂತೆಯೇ ಕೋಮಿಂಟಾಂಗ್ ಪಕ್ಷದ ಈ ಬೆಳವಣಿಗೆಗಳೂ ಅದ- ಕ್ಕೆ ಸುಮುಖವಾಗಿ ನಡೆದಿದ್ದವು. 1923 ರಲ್ಲಿ ಎರಡೂ ಪಕ್ಷಗಳ ಜೊತೆ ಮಾತುಕತೆಗಳಾಗಿ ಮೈತ್ರಿ ಏರ್ಪಟ್ಟಿತು. ಆ ನಂತರ 1924 ರಲ್ಲಿ ಕೋಮಿಂಟಾಂಗ ಪಕ್ಷದ ಮೊದಲ ಮಹಾಧಿವೇಶನವ ಪ್ರಜಾಸತ್ತಾತ್ಮಕ ಚಳುವಳಿಗಳು ಬಲವಾ ಚೀನಾದ ಮೂರನೆ ದೊಡ್ಡ ನಗರ ಕ್ಯಾಂಟನ್‌ನಲ್ಲಿ ನಡೆಯಿತು. 1912 ರಲ್ಲಿ ಸ್ಥಾಪನೆಗೊಂಡರೂ ಈ ಪಕ್ಷದ ಮೊದ ಅಧಿವೇಶನ 1924 ರಲ್ಲಿ , 1921 ರಲ್ಲಿ ಸ್ಥಾಪಿತವಾದ ಕಮ್ಯುನಿಸ್ಟ್ ಪಕ್ಷದ ಮೂ ಅಧಿವೇಶನಗಳು ನಡೆದ ಮೇಲೆ ನಡೆ ಎನ್ನುವುದೇ ಆ ಪಕ್ಷದ ಸ್ಥಿತಿಯ ಪ್ರತಿಬಿ ವಾಗಿದೆ.

ಈ ಮಹಾಧಿವೇಶನದಲ್ಲಿ ಸನ್ ಯಾತ್ ಸೇನ್ ರವರು ಅವರು 1911 ರ ಕ್ರಾಂತಿಯ ಸಮಯದಲ್ಲಿ ಮಂಡಿಸಿದ ಮೂರು ತತ್ವಗಳು – ರಾಷ್ಟ್ರೀಯ ವಿಮೋಚನೆ, ಪ್ರಜಾಪ್ರಭುತ್ವ, ಜನರ ಬದ ಎಂಬುದನ್ನು ಮಾರ್ಪಾಟು ಮಾಡಿದ ಹಿಂದೆ ರಾಷ್ಟ್ರೀಯತೆ ಎಂದರೆ ಚೀನಾದ ಸಾಮ್ರಾಟರಿಂದ ಬಿಡುಗಡೆ ಎಂದಿದ್ದರೆ ಈಗ ಅದು ಚೀನಾವನ್ನು ದೋಚುತ್ತದ್ದ ಸಾಮ್ರಾಜ್ಯಶಾಹಿಗಳಿಂದ ವಿಮೋಚನೆ, ಚೀನಾ ರಾಷ್ಟ್ರದ ಸ್ವಯಂ ವಿಮೋಚನೆ ಎಂದು ; ಪ್ರಜಾಪ್ರಭುತ್ವ ಎಂಬುದು ಕೆಲ ಜನರ ಘೋಷಣೆಯಾಗದೆ ಚೀನಾದ ಎಲ್ಲ ಜನತೆಗೆ, ಸಾಮ್ರಾಜ್ಯಶಾಹಿಗಳು, ಪಾಳೆಯಗಾರರ ವಿರುದ್ಧ ಸೆಣಸಾಡುವ ಎಲ್ಲ ಶಕ್ತಿಗಳಿಗೆ ಎಂದು ; ಜನರ ಬದುಕು ಎಂದು ಅಸ್ಪಷ್ಟವಾಗಿದ್ದ ತತ್ವ ಭೂಮಿಯ ಒಡೆತನದಲ್ಲಿ ಸಮಾನತೆ, ಉಳುವವರೇ ಹೊಲದೊಡೆಯರು, ಬಂಡವಾಳದ ನಿಯಂತ್ರಣ ಎಂದು ಅರ್ಥೈಸಲಾಯಿತು. ಹೀಗೆ ಮೂರನೇ ತತ್ವವೆಂದರೆ ಸಮಾಜವಾದವೇ ಎಂದು ಘೋಷಿಸಲಾಯಿತು.

ಈ ಮಹಾಧಿವೇಶನದಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಗಣನೀಯ ಸಂಖ್ಯೆಯ ಭಾಗವಹಿಸಿದರು. ಅದರ ಕಾರ್ಯಕಾರಿ ಸಮಿತಿಯಗೆ ಅಯ್ಕೆಯಾದ 24 ಜನ ನಾಯಕರಲ್ಲಿ ಚೀನಾದ ಮೊದಲ ಕಮ್ಯುನಿಸ್ಟ್ ಎಂದು ಹೆಸರಾಂತ ಲಿ ಡಝಾವೋ ಸೇರಿದಂತೆ ಮೂವರು ಕಮ್ಯುನಿಸ್ಟರಾಗಿದ್ದರು. ಇದರ ಜೊತೆಗೆ ಆರು ಜನ ಕಮ್ಯುನಿಸ್ಟ್ ನಾಯಕರನ್ನು ಪರ್ಯಾಯ ಕಾರ್ಯಕಾರೀ ಸಮಿತಿ ಸದಸ್ಯರನ್ನಾಗಿ ಆರಿಸಲಾಯಿತು. ಅವರಲ್ಲಿ ಮಾವೋರವರೂ ಒಬ್ಬರಾಗಿದ್ದರು.

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI